ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 7 ಬುಧವಾರ 2022

ಸಂಪುಟ: 43 | ಸಂಚಿಕೆ: 142 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ಸಚಿವ ಉಮೇಶ್ ಕತ್ತಿ ಇನ್ನಿಲ್ಲ

ಡಾಲರ್ಸ್ ಕಾಲೋನಿ ನಿವಾಸದಲ್ಲಿ ರಾತ್ರಿ 10.30ಕ್ಕೆ ಹೃದಯಾಘಾತ; ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ನಿಧನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಸಚಿವ ಸಹೋದ್ಯೋಗಿಗಳು ಆಸ್ಪತ್ರೆಗೆ ಭೇಟಿ

ಬೆಂಗಳೂರು, ಸೆ.6–ರಾಜ್ಯದ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಉಮೇಶ್ ಕತ್ತಿ ಇಂದು ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಡಾಲರ್ಸ್ ಕಾಲೋನಿಯ ತಮ್ಮ ಮನೆಯ ಬಾತ್ ರೂಂನಲ್ಲಿ ರಾತ್ರಿ 10.30ಕ್ಕೆ ತೀವ್ರ ಹೃದಯಾಘಾತಕ್ಕೀಡಾಗಿ ಕುಸಿದು ಬಿದ್ದಿದ್ದರು. 10–15 ನಿಮಿಷವಾದರೂ ಹೊರಗೆ ಬಾರದೇ ಇದ್ದಾಗ ಆತಂಕಗೊಂಡ ಕುಟುಂಬ ಸದಸ್ಯರು, ಬಾಗಿಲು ಒಡೆದು ಹೋಗಿ ನೋಡಿದಾಗ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ತಕ್ಷಣ ಉಮೇಶ್ ಕತ್ತಿ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ರಾತ್ರಿ 11.45ರ ವೇಳೆಗೆ ವೈದ್ಯರು ಉಮೇಶ್ ಕತ್ತಿ ಅವರು ನಿಧನರಾಗಿರುವುದಾಗಿ ಪ್ರಕಟಿಸಿದರು. 61 ವರ್ಷದ ಉಮೇಶ್ ಕತ್ತಿ ರಾಜ್ಯ ವಿಧಾನಸಭೆಗೆ 8 ಬಾರಿ ಆಯ್ಕೆಯಾಗಿದ್ದರು. ಜನತಾ ಪಕ್ಷ, ಜನತಾ ದಳ, ಸಂಯುಕ್ತ ಜನತಾ ದಳ, ಜಾತ್ಯಾತೀತ ಜನತಾ ದಳ ನಂತರ ಭಾರತೀಯ ಜನತಾ ಪಕ್ಷದಲ್ಲಿ ರಾಜಕಾರಣ ಮಾಡಿದ್ದರು. 1985ರಲ್ಲಿ ತಮ್ಮ ತಂದೆ ವಿಶ್ವನಾಥ್ ಕತ್ತಿ ನಿಧನದ ನಂತರ ರಾಜಕಾರಣ ಪ್ರವೇಶಿಸಿದ್ದರು. ಆಗಾಗ ತಾವು ಮುಖ್ಯಮಂತ್ರಿ



ಏಕಾಗಬಾರದು ಎಂದು ಪ್ರಶ್ನಿಸುತ್ತಿದ್ದ ಅವರು, ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಪ್ರಸ್ತಾಪ ಮಾಡುವುದರೊಂದಿಗೆ ಆಗಾಗ ವಿವಾದಕ್ಕೂ ಗುರಿಯಾಗುತ್ತಿದ್ದರು. 1985ರಲ್ಲಿ ಮೊದಲ ಬಾರಿಗೆ ಬೆಳಗಾವಿ ಜಿಲ್ಲೆ ಹುಕ್ಕೇರಿ ಕ್ಷೇತ್ರದಿಂದ ಜನತಾ ಪಕ್ಷದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ನಂತರ 1989ರಲ್ಲೂ ಜನತಾ ದಳದಿಂದ ಗೆದ್ದು ಬಂದಿದ್ದರು. 1994ರಲ್ಲಿ ಅದೇ ಪಕ್ಷದಿಂದ ಹ್ಯಾಟ್ರಿಕ್ ಸಾಧಿಸಿದ್ದರು.

1999ರಲ್ಲಿ ಸಂಯುಕ್ತ ಜನತಾ ದಳದಿಂದ ಸ್ಪರ್ಧಿಸಿ ನಾಲ್ಕನೇ ಬಾರಿ ಜಯಭೇರಿ ಬಾರಿಸಿದ್ದರು.

2004ರಲ್ಲಿ ಕಾಂಗ್ರೆಸ್ ಸೇರಿ ಚುನಾವಣೆಗೆ ಸ್ಪರ್ಧಿಸಿ ಸೋಲು ಕಂಡಿದ್ದರು. 2008ರಲ್ಲಿ ಜೆಡಿಎಸ್ ಸೇರಿ ಮತ್ತೆ ಜಯ ಸಾಧಿಸಿದ್ದರು. 2013 ಮತ್ತು 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಹುಕ್ಕೇರಿ ಕ್ಷೇತ್ರದಲ್ಲಿ ದಾಖಲೆಯ 8ನೇ ಬಾರಿ ಜಯ ಸಾಧಿಸಿದ್ದರು. ಧರಂ ಸಿಂಗ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ 8ನೇ ವಿಜಯದ ದಾಖಲೆಯನ್ನು ಕತ್ತಿ ಸರಿಗಟ್ಟಿದ್ದರು. ಸಕ್ಕರೆ ಕಾರ್ಖಾನೆ ಮಾಲೀಕರೂ ಆದ ಉಮೇಶ್ ಕತ್ತಿ, ಇದುವರೆಗೆ ಸಕ್ಕರೆ, ಲೋಕೋಪಯೋಗಿ, ತೋಟಗಾರಿಕೆ, ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾಗಿ, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಬೆಳಗಾವಿಯ ಕೆಎಲ್ಇ ಸೊಸೈಟಿಯ ಲಿಂಗರಾಜ ಕಾಲೇಜಿನಲ್ಲಿ ಪಿಯುಸಿ ಓದಿದ್ದ ಉಮೇಶ್ ಕತ್ತಿ, ಮುಖ್ಯಮಂತ್ರಿ ▶ 10ನೇ ಪುಟಕ್ಕೆ

ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ಅಕ್ಟೋಬರ್‌ನಲ್ಲಿ 7ನೇ ವೇತನ ಆಯೋಗ ರಚನೆಗೆ ಮುಖ್ಯಮಂತ್ರಿ ಬೊಮ್ಮಾಯಿ ನಿರ್ಧಾರ; ನೌಕರರ ವೇತನ ಮತ್ತಿತರ ಭತ್ಯೆ ಪರಿಷ್ಕರಣೆ

ಬೆಂಗಳೂರು, ಸೆ.6(ಕೆಎಂಶಿ)–ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ.

ಸರ್ಕಾರಿ ನೌಕರರಿಗೆ ವೇತನ ಮತ್ತಿತರ ಭತ್ಯೆಗಳನ್ನು ಪರಿಷ್ಕರಿಸಲು ಇದೇ ಅಕ್ಟೋಬರ್ ತಿಂಗಳಲ್ಲಿ ಏಳನೇ ವೇತನ ಆಯೋಗವನ್ನು ಮುಖ್ಯಮಂತ್ರಿಗಳು ಇಂದಿಲ್ಲಿ ಘೋಷಣೆ ಮಾಡಿದ್ದಾರೆ. ವಿಧಾನಸೌಧದ ಸಭಾಂಗಣದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂಗಡ ಪತ್ರದಲ್ಲಿ ನೀಡಿದ ಭರವಸೆಯಂತೆ ನೌಕರರ ವೇತನ ಪರಿಷ್ಕರಣೆ ಮಾಡುತ್ತಿದ್ದೇನೆ ಎಂದರು. ಕೇಂದ್ರ ಸರ್ಕಾರ ಈಗಾಗಲೇ ವೇತನ ಪರಿಷ್ಕರಣೆ ಮಾಡಿದೆ. ಪ್ರಸಕ್ತ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ನೌಕರರಿಗೂ ಸವಲತ್ತುಗಳನ್ನು ಹೆಚ್ಚಿಸಲು ಇಂತಹ ಕ್ರಮಕ್ಕೆ ಮುಂದಾಗಿದ್ದೇನೆ. ಆಯೋಗದ ವರದಿ ಬರುತ್ತಿದ್ದಂತೆ ನೌಕರರ ವೇತನ ಸೇರಿದಂತೆ ಎಲ್ಲ ಹಂತದಲ್ಲೂ ಪರಿಷ್ಕರಣೆಯಾಗಲಿದೆ ಎಂದರು. ನೌಕರರ ಇನ್ನುಳಿದ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುವ ಭರವಸೆ ನೀಡಿದರು. ಕಾರ್ಯಾಂಗ ಉತ್ತಮವಾಗಿ ಕೆಲಸ ಮಾಡಿದರೆ, ನಾಡು ಅಭಿವೃದ್ಧಿಯಾಗುತ್ತದೆ. ನಾಡಿನ ಅಭಿವೃದ್ಧಿಯಲ್ಲಿ ನೌಕರರ ಪಾತ್ರ ಪ್ರಮುಖವಾಗಿದೆ ಎಂದರು. ಸರ್ಕಾರಿ ನೌಕರರು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು, ಆಗ ರಾಜ್ಯ ಸುಭಿಕ್ಷವಾಗುತ್ತದೆ. ಕರ್ತವ್ಯಕ್ಕೂ ಕಾಯಕಕ್ಕೂ ಬಹಳ ವ್ಯತ್ಯಾಸವಿದೆ. ಕರ್ತವ್ಯವೆಂದರೆ ನಮ್ಮ ಕೆಲಸವಷ್ಟೇ ಮಾಡಬಹುದು. ಕಾಯಕ ಎಂದರೆ ಜವಾಬ್ದಾರಿಯಿಂದ ಕೆಲಸ ಮುಗಿಯುವ ವರೆಗೂ ಮಾಡುವುದು ಎಂದರು. ಜನಸಾಮಾನ್ಯರು ನಮಗೆ ಸಂಬಳ ಕೊಡುತ್ತಿದ್ದಾರೆ, ▶ 9ನೇ ಪುಟಕ್ಕೆ

ಭಾರತೀಯ ಜನತಾ ಪಕ್ಷಕ್ಕೆ ಡಬಲ್ ಧಮಾಕಾ

ಮೈಸೂರು ನೂತನ ಮೇಯರ್ ಶಿವಕುಮಾರ್

ಅಂತಿಮ ಕ್ಷಣದಲ್ಲಿ ಡಾ.ಜಿ.ರೂಪಾಗೆ ಒಲಿದ ಉಪಮೇಯರ್ ಸ್ಥಾನ




ಶಿವಕುಮಾರ್, ಮೇಯರ್



ಡಾ.ಜಿ.ರೂಪಾ, ಉಪ ಮೇಯರ್

ಮೈಸೂರು, ಸೆ 6 (ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆಯ 24ನೇ ಮೇಯರ್ ಆಗಿ ಭಾರತೀಯ ಜನತಾ ಪಕ್ಷದ ಶಿವಕುಮಾರ್ ಆಯ್ಕೆಯಾಗಿದ್ದು, ಅಂತಿಮ ಕ್ಷಣದ ಕ್ಷಿಪ್ರ ಬೆಳವಣಿಗೆಯಲ್ಲಿ ಅದೇ ಪಕ್ಷದ ಡಾ.ಜಿ.ರೂಪಾ ಅವರಿಗೆ ಉಪಮೇಯರ್ ಸ್ಥಾನ ಒಲಿದಿದೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಅಂತಿಮ ಘಳಿಗೆಯಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ಏರ್ಪಟ್ಟಿದ್ದರಿಂದ ಬಿಜೆಪಿಯ ಶಿವಕುಮಾರ್ (47ನೇ ವಾರ್ಡ್) ಮೇಯರ್ ಆಗಿ ಆಯ್ಕೆಗೊಂಡರು. ಅವರಿಗೆ 47 ಮತಗಳು ಲಭಿಸಿದವು. ಉಪಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಜೆಡಿಎಸ್ ಸದಸ್ಯೆ ರೇಷ್ಮಾ ಬಾನು (17ನೇ ವಾರ್ಡ್) ಅವರ ನಾಮಪತ್ರ ತಿರಸ್ಕೃತಗೊಂಡ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಬಿಜೆಪಿಯ ಡಾ.ಜಿ.ರೂಪಾ (53ನೇ ವಾರ್ಡ್) ಅವರ ಆಯ್ಕೆಗೆ ಅವಕಾಶ ಮಾಡಿಕೊಡಲಾಯಿತು. ಡಾ. ರೂಪಾ ಅವರು 45 ಮತಗಳನ್ನು ಪಡೆದರು. ಇಂದು ಬೆಳಗ್ಗೆವರೆಗೂ ಸ್ವತಂತ್ರವಾಗಿಯೇ ಸ್ಪರ್ಧೆಗಿಳಿಯುತ್ತೇವೆಂಬ ನಿಲುವಿಗೆ ಬದ್ಧರಾಗಿದ್ದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಮೇಯರ್, ▶ 9ನೇ ಪುಟಕ್ಕೆ



ಮೈಸೂರು ನಗರ ಪಾಲಿಕೆಯ ನೂತನ ಮೇಯರ್ ಹಾಗೂ ಉಪಮೇಯರ್ ಆಗಿ ಆಯ್ಕೆಯಾದ ಶಿವಕುಮಾರ್ ಮತ್ತು ಡಾ. ರೂಪ ಅವರನ್ನು ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ದಡ ಸೇರಿದ ಮೇಲೆ ಅಂಬಿಗನ ಹಂಗೇಕೆ...?

ಮೈಸೂರು, ಸೆ.6(ಆರ್‌ಕೆಬಿ)– ಕೊನೆ ಗಳಿಗೆಯಲ್ಲಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಬಿಜೆಪಿಗೆ ಮೇಯರ್ ಹಾಗೂ ಉಪಮೇಯರ್ ಎರಡೂ ಸ್ಥಾನಗಳು ದಕ್ಕಿವೆ. ಇದರಲ್ಲಿ ಜೆಡಿಎಸ್ ತನ್ನ ಎಡವಟ್ಟಿನಿಂದ ತನಗೆ ದಕ್ಕಬೇಕಿದ್ದ ಉಪ ಮೇಯರ್ ಸ್ಥಾನದಿಂದಲೂ ವಂಚಿತವಾಗಿದೆ. ಅಲ್ಲದೆ, ಎರಡೂ ಸ್ಥಾನಗಳು ಬಿಜೆಪಿ ಪಾಲಾಗುವಂತಾಗಿದೆ ಬಿಜೆಪಿ ಮತ್ತು ಜೆಡಿಎಸ್ ಅಂತಿಮ ಹಂತದಲ್ಲಿ ಮೈತ್ರಿ ಸಾಧ್ಯವಾಗಲಿದೆ ಎಂದು ಹೇಳಲಾಗಿತ್ತು. ಆದರೆ, ಮತದಾನದ ವೇಳೆ ಜೆಡಿಎಸ್ ಸದಸ್ಯರೇ ಬಿಜೆಪಿ ಅಭ್ಯರ್ಥಿಗಳ ಪರ ಮತ ಚಲಾಯಿಸಿ, ತಾವು ಬಿಜೆಪಿ ಪರ ಇರುವುದನ್ನು ಖಾತ್ರಿ ಪಡಿಸಿದರು. ಆದರೆ ತಮ್ಮದೇ ಪಕ್ಷದ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೂ, ಕೊನೆ ಗಳಿಗೆಯಲ್ಲಿ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ವೇಳೆ ಮಾಡಿದ ಪ್ರಮಾದದಿಂದ ಮೈತ್ರಿಯಿಂದ ತಮ್ಮ ಪಾಲಿಗೆ ಬಂದಿದ್ದ ಉಪಮೇಯರ್ ಸ್ಥಾನವೂ ಕೈತಪ್ಪಿತು. ಒಟ್ಟಾರೆ ಜೆಡಿಎಸ್ ಕೃಪಾಕಟಾಕ್ಷದಿಂದಲೇ ಬಿಜೆಪಿಗೆ ಪಾಲಿಕೆ ಅಧಿಕಾರ ದಕ್ಕಿದೆ. ಆದರೆ ಚುನಾವಣೆ ಮುಗಿದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿ, ನಾವು ▶ 9ನೇ ಪುಟಕ್ಕೆ

ಪಿಎಚ್.ಡಿ ಪದವೀಧರೆ ಡಾ.ಜಿ.ರೂಪಾ ಮೈಸೂರು ಉಪಮೇಯರ್

ಮೈಸೂರು: ನೂತನ ಉಪಮೇಯರ್ ಡಾ.ಜಿ.ರೂಪಾ ಪಿಎಚ್.ಡಿ ಪದವೀಧರೆ. ವಾರ್ಡ್ ನಂ.53 (ಸಿದ್ದಾರ್ಥನಗರ) ಪ್ರತಿನಿಧಿಸುವ ರೂಪಾ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಔಷಧ ವಿಜ್ಞಾನ ವಿಷಯದಲ್ಲಿ 2021ರಲ್ಲಿ ಪಿಎಚ್.ಡಿ ಪಡೆದಿದ್ದಾರೆ. 'ಡಿಸೈನ್ ಅಂಡ್ ಡೆವಲಪ್‌ಮೆಂಟ್ ಆಫ್ ಇನೋವೇಟಿವ್ ಓರಲ್ ಮೈಕ್ರೋ ಅಂಡ್ ನ್ಯಾನೊ ಕರ್ಕ್ಯುಮಿನ್ ವೆಕ್ಟರ್ಸ್ ಆಫ್ ನ್ಯಾಚುರಲ್ ಪಾಲಿಮರ್ಸ್ ಫಾರ್ ಬಯೊವಯಾಬಿಲಿಟಿ ಎನ್‌ಹ್ಯಾನ್ಸ್‌ಮೆಂಟ್' ವಿಷಯದ ಬಗ್ಗೆ ಮಹಾಪ್ರಬಂಧ ಸಲ್ಲಿಸಿದ್ದರು. ಶಾರದಾ ವಿಲಾಸ ಫಾರ್ಮಸಿ ಕಾಲೇಜಿನಲ್ಲಿ 14 ವರ್ಷಗಳವರೆಗೆ ಸಹಾಯಕ ▶ 9ನೇ ಪುಟಕ್ಕೆ

ಮೈಸೂರು ನಗರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ

ನೂತನ ಮೇಯರ್ ಶಿವಕುಮಾರ್

ಮೈಸೂರು, ಸೆ.6(ಆರ್‌ಕೆಬಿ)– ಮೈಸೂರು ಮೇಯರ್ ಹಾಗೂ ಉಪಮೇಯರ್ ಸ್ಥಾನವನ್ನು ಬಿಜೆಪಿ ಗಳಿಸಿದ್ದು, ಮುಂದಿನ ದಿನಗಳಲ್ಲಿ ಮೈಸೂರು ನಗರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ನೂತನ ಮೇಯರ್ ಶಿವಕುಮಾರ್ ತಿಳಿಸಿದರು.

ಮೇಯರ್ ಆಗಿ ಆಯ್ಕೆಯಾದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಮೇಯರ್ ಸ್ಥಾನಕ್ಕೆ ಒಬ್ಬ ಪರಿಶಿಷ್ಟ ಪಂಗಡಕ್ಕೆ ಬರುವ ನಾಯಕ ಜನಾಂಗದ ನನ್ನನ್ನು ಮೇಯರ್ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ಇದು ಬಿಜೆಪಿಯಿಂದ ಮಾತ್ರ ಸಾಧ್ಯ. ನನಗೆ ಎಲ್ಲ ರೀತಿಯಲ್ಲೂ ಸಹಕರಿಸಿದ ಪಕ್ಷದ ವರಿಷ್ಠರಿಗೆ, ಮುಖಂಡರಿಗೆ ಅನಂತ ಧನ್ಯವಾದಗಳು ಎಂದರು. ಪಾರಂಪರಿಕ ನಗರ, ಅರಮನೆಗಳ ನಗರ, ಸಾಂಸ್ಕೃತಿಕ ನಗರ ಎಂದು ಏನು ಹೆಸರಿದೆಯೋ ಅದನ್ನು ಉಳಿಸುವ ಜವಾಬ್ದಾರಿ ನನ್ನ ಹೆಗಲಿಗೇರಿದೆ. ಮುಂದಿನ ದಿನಗಳಲ್ಲಿ ಮೈಸೂರು ನಗರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಹೇಳಿದರು. ಅಂತಿಮ ಕ್ಷಣದಲ್ಲಿ ಜೆಡಿಎಸ್‌ಗೆ ಉಪಮೇಯರ್ ಸ್ಥಾನ ಕೈತಪ್ಪಿದ ಕುರಿತು ಪ್ರತಿಕ್ರಿಯಿಸಿದ ಅವರು, ಅದಕ್ಕೂ ನಮಗೂ ಸಂಬಂಧವಿಲ್ಲ. ಅವರು ನಾಮಪತ್ರ ಸಲ್ಲಿಸುವಾಗ ಮಾಡಿದ ತಪ್ಪಿನಿಂದ ಹಾಗಾಗಿದೆ. ಅದರಲ್ಲಿ ನಮ್ಮ ತಪ್ಪೇನೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸೈಬರ್ ಕ್ರೈಂಗಳಿಂದ ಪಾರಾಗಲು ಸೈಬರ್ ಸೆಕ್ಯೂರಿಟಿ ಅವಶ್ಯ

●ಸಿಎಂ ಬಸವರಾಜ ಬೊಮ್ಮಾಯಿ ಬಲವಾದ ಸಮರ್ಥನೆ ●ಮೈರಾ ಸ್ಕೂಲ್ ಆಫ್ ಬಿಸಿನೆಸ್‌ನಲ್ಲಿ 'ಸೈಬರ್‌ವರ್ಸ್ ಲ್ಯಾಬ್, ಕಾಪ್ ಕನೆಕ್ಟ್ ಅಪ್ಲಿಕೇಶನ್ ಮತ್ತು ಸೈಬರ್ ಹೈಜೀನ್' ಉದ್ಘಾಟನೆ

ಮೈಸೂರು, ಸೆ.6(ಎಂಕೆ)– ತಂತ್ರಜ್ಞಾನ ದುರ್ಬಳಕೆಯಿಂದಾಗುವ ಸೈಬರ್ ಕ್ರೈಂಗಳಿಂದ ಪಾರಾಗಲು, ಸೈಬರ್ ಸೆಕ್ಯೂರಿಟಿ ಅತ್ಯಗತ್ಯವಾಗಿದೆ. ಹಾಗೆಯೇ ಸೈಬರ್ ಕ್ರೈಂ ಪ್ರಕರಣಗಳನ್ನು ಭೇದಿಸುವಲ್ಲಿ ಕರ್ನಾಟಕ ರಾಜ್ಯ ಪೊಲೀಸರು ದೇಶದಲ್ಲಿಯೇ ಮಾದರಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಮೈಸೂರಿನ ಇಲವಾಲದಲ್ಲಿರುವ ಮೈರಾ ಸ್ಕೂಲ್ ಆಫ್ ಬಿಸಿನೆಸ್‌ನಲ್ಲಿ 'ಸೈಬರ್‌ವರ್ಸ್ ಲ್ಯಾಬ್, ಕಾಪ್ ಕನೆಕ್ಟ್ ಅಪ್ಲಿಕೇಶನ್ ಮತ್ತು ಸೈಬರ್ ಹೈಜೀನ್' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇದೊಂದು ಹೊಸ ಜಗತ್ತು. ತಂತ್ರಜ್ಞಾನ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಪ್ರತಿ ಕ್ಷಣವೂ ಸಾವಿರಾರು ತಂತ್ರಾಂಶಗಳ ಆವಿಷ್ಕಾರ ನಡೆಯುತ್ತಿದೆ. ತಂತ್ರಜ್ಞಾನದ ಬಳಕೆ ಸಕರಾತ್ಮಕ ಹಾಗೂ ನಕರಾತ್ಮಕವಾಗಿಯೂ ಇರುತ್ತದೆ. ನಾವುಗಳು ಮುಖ್ಯವಾಗಿ ತಂತ್ರಜ್ಞಾನದ ಮೂಲವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ತಂತ್ರಾಂಶ ದಿಂದಾಗುವ ಒಳಿತು–ಕೆಡುಕುಗಳು ಬಳಕೆದಾರರ ಭಾವನೆಗಳು, ಅಭಿವ್ಯಕ್ತದ ಮೇಲೆ ನಿರ್ಧಾರವಾಗಿರುತ್ತವೆ. ಭಾವನೆಗಳಿಂದ ವಿಚಾರ, ವಿಚಾರಗಳಿಂದ ಅಕ್ಷರ, ಅಕ್ಷರದಿಂದ ಭಾಷೆ, ಭಾಷೆಯಿಂದ ಜ್ಞಾನ, ಜ್ಞಾನದಿಂದ ತಂತ್ರಜ್ಞಾನ, ತಂತ್ರಜ್ಞಾನದಿಂದ ತಂತ್ರಾಂಶ ವಾಗಿದೆ. ಆದ್ದರಿಂದ ತಂತ್ರಾಂಶಗಳ ಬಳಕೆಗೂ ಮುನ್ನಾ ತಂತ್ರಜ್ಞಾನದ ಮೂಲವನ್ನು ಅರ್ಥ ▶ 10ನೇ ಪುಟಕ್ಕೆ



ಮೈಸೂರಿನ ಇಲವಾಲದಲ್ಲಿರುವ ಮೈರಾ ಸ್ಕೂಲ್ ಆಫ್ ಬಿಸಿನೆಸ್‌ನಲ್ಲಿ 'ಸೈಬರ್‌ವರ್ಸ್ ಲ್ಯಾಬ್, ಕಾಪ್ ಕನೆಕ್ಟ್ ಅಪ್ಲಿಕೇಶನ್ ಮತ್ತು ಸೈಬರ್ ಹೈಜೀನ್' ಉದ್ಘಾಟನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೆರವೇರಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಸೈಬರ್‌ವರ್ಸ್ ಫೌಂಡೇಷನ್ ಸಲಹಾ ಮಂಡಳಿ ಅಧ್ಯಕ್ಷ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷರಾದ ತ್ರಿಷಿಕಾ ಕುಮಾರಿ ಒಡೆಯರ್ ಉಪಸ್ಥಿತರಿದ್ದರು.

ಚಾಮರಾಜನಗರ ಜಿಲ್ಲೆಯಲ್ಲಿ ಸಿಡಿಲಿಗೆ ಇಬ್ಬರು ಬಲಿ

ಚಾಮರಾಜನಗರ, ಸೆ.6– ಸಿಡಿಲು ಬಡಿದು ಇಬ್ಬರು ರೈತರು ಸೇರಿದಂತೆ 6 ಕುರಿಗಳು ಸಾವನ್ನಪ್ಪಿರುವ ಘಟನೆ ಜಿಲ್ಲೆಯಲ್ಲಿ ಮಂಗಳವಾರ ಸಂಭವಿಸಿದೆ.



ರೇವಣ್ಣ

ಯಳಂದೂರು ತಾಲೂಕಿನ ಕೆಸ್ತೂರು ಗ್ರಾಮದ ರೇವಣ್ಣ(45) ಹಾಗೂ ಹನೂರು ತಾಲೂಕಿನ ಮೀಣ್ಯಂ ಗ್ರಾಮದ ನಿವಾಸಿ ಎಸ್.ಮಾದಪ್ಪ(64) ಮೃತಪಟ್ಟವರು. ಕೆಸ್ತೂರು ಗ್ರಾಮದ ರೈತ ರೇವಣ್ಣ ಅವರು ತಮ್ಮ ಜಮೀನಿನಲ್ಲಿ ಭತ್ತ ನಾಟಿ ಮಾಡುತ್ತಿದ್ದರು. ಈ ವೇಳೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಈ ಬಗ್ಗೆ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೀಣ್ಯಂ ಗ್ರಾಮದ ತೋಟದ ಮನೆಯಲ್ಲಿ ವಾಸವಿದ್ದ ಮಾದಪ್ಪ ಎಂದಿನಂತೆ ಕುರಿ ಮೇಯಿಸುತ್ತಿದ್ದರು. ಸಂಜೆ ವೇಳೆ ಸಿಡಿಲು ಬಡಿದ ಪರಿಣಾಮ ಮಾದಪ್ಪ ಅಸುನೀಗಿದ್ದು, 6 ಕುರಿಗಳು ಸ್ಥಳದಲ್ಲೇ ಮೃತಪಟ್ಟಿವೆ. ಮೃತರ ಸಂಬಂಧಿಕರ ▶ 9ನೇ ಪುಟಕ್ಕೆ

ಕೇಂದ್ರ, ರಾಜ್ಯ ಸರ್ಕಾರಗಳ ಕಾರ್ಯಕ್ರಮದಲ್ಲಿ ಕನ್ನಡ ಕಡ್ಡಾಯ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಆಯೋಜನೆಯಲ್ಲಿ ಇನ್ನು ಮುಂದೆ ಕನ್ನಡ ಕಡ್ಡಾಯವಾಗಿರಬೇಕು ಎಂದು ಕರ್ನಾಟಕ ಸರ್ಕಾರ ಅಧಿಕೃತ ಸುತ್ತೋಲೆ ಹೊರಡಿಸಿದೆ. ಕನ್ನಡ ಭಾಷೆ ನಮಗೆ ಆದ್ಯತೆ ಆಗಬೇಕು ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದ್ದು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಈ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನಡೆಸುವ ಎಲ್ಲ ಕಾರ್ಯಕ್ರಮಗಳ ▶ 9ನೇ ಪುಟಕ್ಕೆ

ಮೈಸೂರು ಮಿತ್ರ

ಮೈಸೂರು ನಗರಪಾಲಿಕೆ ವಿವಿಧ ಸ್ಥಾಯಿ ಸಮಿತಿಗೆ ಸದಸ್ಯರ ಆಯ್ಕೆ

ಮೈಸೂರು, ಸೆ.6(ಜಿಎ)– ಮೈಸೂರು ಮಹಾನಗರ ಪಾಲಿಕೆಯ ಮೇಯರ್, ಉಪಮೇಯರ್ ಚುನಾವಣೆ ನಂತರ ನಾಲ್ಕು ಸ್ಥಾಯಿ ಸಮಿತಿಗಳಿಗೆ ಸದಸ್ಯರ ಆಯ್ಕೆ ನಡೆಯಿತು. ತೆರಿಗೆ ನಿರ್ಧಾರಣೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಸದಸ್ಯರಾಗಿ ಸಿ.ಎಸ್.ರಜನಿ ಅಣ್ಣಯ್ಯ, ಪುಟ್ಟನಿಂಗಮ್ಮ, ಶಫೀ ಅಹಮದ್, ಆರ್.ನಾಗರಾಜ್, ಎಂ.ಛಾಯಾದೇವಿ, ಬಿ.ವಿ.ರವೀಂದ್ರ, ಎಂ.ಪ್ರಮೀಳಾ ಭರತ್ ಆಯ್ಕೆಗೊಂಡರು. ವೇದಾವತಿ, ಪ್ರದೀಪ್‌ಚಂದ್ರ, ಅಯಾಜ್‌ಪಾಷ, ಎಂ. ಶಿವಕುಮಾರ್, ಸಯ್ಯದ್ ಖಾನ್, ಸವಿತಾ, ಎಂ. ಸತೀಶ್ ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸ್ಥಾಯಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು. ಪಟ್ಟಣ ಯೋಜನೆ ಮತ್ತು ಸುಧಾರಣೆಗಾಗಿ ಸ್ಥಾಯಿ ಸಮಿತಿ ಸದಸ್ಯರಾಗಿ ಪಲ್ಲವಿ ಬೇಗಂ, ವಿ.ಲೋಕೇಶ್, ಹೆಚ್.ಎಂ.ಶಾಂತಕುಮಾರಿ, ಸಮೀವುಲ್ಲಾ, ಮಹಮ್ಮದ್ ರಫೀಕ್, ಕೆ.ವಿ.ಶ್ರೀಧರ್, ಎಸ್.ಸಾತ್ವಿಕ್ ಅಯ್ಯಾದೊರೈ, ಪುಷ್ಪಲತಾ ಜಗನ್ನಾಥ್, ಎಂ.ಎಸ್.ಶೋಭಾ, ಅಯೂಬ್‌ಖಾನ್, ವಿ.ರಮೇಶ್, ಶ್ರೀನಿವಾಸ್, ಶಾರದಮ್ಮ, ಎನ್.ಸೌಮ್ಯ ಲೆಕ್ಕಪತ್ರಗಳಿಗಾಗಿ ಸ್ಥಾಯಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.

ಅಲ್ಪಸಂಖ್ಯಾತ ಮಹಿಳೆಗೆ ಅನ್ಯಾಯ ಆರೋಪ

ನಗರಪಾಲಿಕೆ ಆವರಣದಲ್ಲೇ ಜೆಡಿಎಸ್ ಮುಖಂಡರ ಗದ್ದಲ

ಮೈಸೂರು,ಸೆ.6(ಆರ್‌ಕೆಬಿ)–ಮೇಯರ್–ಉಪ ಮೇಯರ್ ಚುನಾವಣೆ ವೇಳೆ ಜೆಡಿಎಸ್ ಅಭ್ಯರ್ಥಿಗೆ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ ಕೆಲ ಜೆಡಿಎಸ್ ಮುಖಂಡರು ಮಂಗಳವಾರ ನಗರಪಾಲಿಕೆ ಆವರಣದಲ್ಲಿ ಕೆಲ ಹೊತ್ತು ಗದ್ದಲ ನಡೆಸಿದರು.



ಉಪ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಹಿಳಾ ಸದಸ್ಯೆಗೆ ಉಪಮೇಯರ್ ಸ್ಥಾನ ಕೈತಪ್ಪುವಂತೆ ಯೋಜನೆ ರೂಪಿಸಿದ್ದಾರೆ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಉಪಮೇಯರ್ ಸ್ಥಾನ ಹಿಂದುಳಿದ ಎ ವರ್ಗ ಮಹಿಳೆಗೆ ನಿಗದಿಯಾಗಿತ್ತು. ಆದರೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಹಿಳೆಗೆ ಅನ್ಯಾಯ ಮಾಡಲಾಗಿದೆ ಎಂದು ದೂರಿದರು. ಬಳಿಕ ಕೆಲ ಹೊತ್ತು ಗದ್ದಲ ಉಂಟು ಮಾಡಿ, ನ್ಯಾಯಕ್ಕಾಗಿ ಆಗ್ರಹಿಸಿದರು.

ಭಾರತ್ ಜೋಡೋ ಯಾತ್ರೆಗೆ ಇಂದು ಕನ್ಯಾಕುಮಾರಿಯಲ್ಲಿ ಚಾಲನೆ

ನವದೆಹಲಿ, ಸೆ.6– ಕಾಂಗ್ರೆಸ್ ಪಕ್ಷದ ಬಹುನಿರೀಕ್ಷಿತ 3,570 ಕಿಲೋ ಮೀಟರ್ ದೂರದ ಭಾರತ್ ಜೋಡೋ ಯಾತ್ರೆಗೆ ಕನ್ಯಾಕುಮಾರಿಯಲ್ಲಿ ನಾಳೆ (ಸೆ.7) ಚಾಲನೆ ದೊರೆಯಲಿದೆ. ಈ ಯಾತ್ರೆ ಆರಂಭಕ್ಕೂ ಮುನ್ನ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪೆರಂಬೂರಿನ ರಾಜೀವ್ ಗಾಂಧಿ ಸ್ಮಾರಕದಲ್ಲಿ ನಡೆಯುವ ಪ್ರಾರ್ಥನಾ ಸಭೆಯಲ್ಲಿ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ.



ನಂತರ ಕನ್ಯಾಕುಮಾರಿಯಲ್ಲಿ ನಡೆಯಲಿರುವ ಭಾರತ್ ಜೋಡೋ ಯಾತ್ರೆ ಉದ್ಘಾಟನಾ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್‌ಗಢದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಉಪಸ್ಥಿತರಿರುವರು. ಇದೇ ವೇಳೆ ಖಾದಿ ರಾಷ್ಟ್ರಧ್ವಜವನ್ನು ರಾಹುಲ್ ಗಾಂಧಿ ಹಸ್ತಾಂತರಿಸುವರು. ಈ ಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಪಾಲ್ಗೊಳ್ಳುವಂತೆ ಪ್ರಿಯಾಂಕಾ ಗಾಂಧಿ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ. ಅಗತ್ಯ ವಸ್ತುಗಳ ದರ ಏರಿಕೆ, ನಿರುದ್ಯೋಗ ಮತ್ತಿತರ ಜನಸಾಮಾನ್ಯರ ಸಮಸ್ಯೆಗಳತ್ತ ಗಮನ ಕೇಂದ್ರೀಕರಿಸುವುದು ಈ ಯಾತ್ರೆಯ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

ಕನ್ಯಾಕುಮಾರಿಯಿಂದ ಶ್ರೀನಗರವರೆಗೆ ಸುಮಾರು 3,570 ಕಿ.ಮೀ ದೂರದ ಯಾತ್ರೆಯೂ 12 ರಾಜ್ಯಗಳು, ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ಐದು ತಿಂಗಳ ಕಾಲ ಸಾಗಲಿದೆ. ಯಾತ್ರೆ ವಾಸ್ತವವಾಗಿ ಗುರುವಾರ ಬೆಳಗ್ಗೆ 7 ಗಂಟೆಗೆ ಆರಂಭವಾಗಲಿದ್ದು, ರಾಹುಲ್ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಯಾತ್ರೆ ನಡೆಸಲಿದ್ದಾರೆ. ಯಾತ್ರೆ ಆರಂಭಕ್ಕೂ ಮುನ್ನ ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ರಾಕ್ ಸ್ಮಾರಕ, ತಿರುವಳ್ಳೂರು ಪ್ರತಿಮೆ ಮತ್ತು ಕಾಮರಾಜ್ ಸ್ಮಾರಕಕ್ಕೆ ರಾಹುಲ್ ಗಾಂಧಿ ಭೇಟಿ ನೀಡಲಿದ್ದಾರೆ.

ಭಾರತ್ ಜೋಡೋ ಯಾತ್ರೆ' ಸೆ.11ರಂದು ಕೇರಳಕ್ಕೆ ತಲುಪಲಿದೆ. ನಂತರ 18 ದಿನಗಳ ಕಾಲ ಕೇರಳದಲ್ಲಿ ಸಾಗಿ ಸೆ.30ರಂದು ಕರ್ನಾಟಕಕ್ಕೆ ಆಗಮಿಸಲಿದೆ. ಕರ್ನಾಟಕದಲ್ಲಿ 21 ದಿನಗಳ ಕಾಲ ನಡೆಯಲಿದೆ. ನಂತರ ಇತರ ಉತ್ತರ ಭಾರತದ ರಾಜ್ಯಗಳತ್ತ ಸಾಗಲಿದೆ. ತಮಿಳುನಾಡಿನ ಕನ್ಯಾಕುಮಾರಿಯಿಂದ ಆರಂಭವಾಗುವ ಯಾತ್ರೆ, ತಿರುವನಂತಪುರಂ, ಕೊಚ್ಚಿ, ನಿಲಂಬೂರ್, ಮೈಸೂರು, ಬಳ್ಳಾರಿ, ರಾಯಚೂರು, ವಿಕರಬಾದ್, ನಾಂದೇಡ್, ಇಂದೋರ್, ಕೊಟಾ, ಅಳ್ವಾರ್, ಬುಲಂದ್‌ಶಹರ್, ದೆಹಲಿ, ಅಂಬಾಲಾ, ಪಠಾಣ್‌ಕೋಟ್ ಮೂಲಕ ಸಾಗಿ ಜಮ್ಮು ಮತ್ತು ಶ್ರೀನಗರದಲ್ಲಿ ಅಂತ್ಯಗೊಳ್ಳಲಿದೆ.

ಮುರುಘಾಶ್ರೀ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ


5ನೇ ಆರೋಪಿ ಗಂಗಾಧರಯ್ಯ ಬಂಧನ

ಚಿತ್ರದುರ್ಗ: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಮೇರೆಗೆ ಬಂಧನಕ್ಕೀಡಾಗಿರುವ ಮುರಾಘಾ ಮಠದ ಶಿವಮೂರ್ತಿ ಮುರುಘಾ ಶ್ರೀಗಳ ಪ್ರಕರಣಕ್ಕೆ ಸಂಬಂಧಿಸಿದಂತೆ 5ನೇ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಕರಣದ 5ನೇ ಪ್ರಮುಖ ಆರೋಪಿಯಾಗಿರುವ ವಕೀಲ ಗಂಗಾಧರಯ್ಯ ಮಂಗಳವಾರ ಪೊಲೀಸರಿಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದ್ದು, ಚಿತ್ರದುರ್ಗದ ಡಿವೈಎಸ್‌ಪಿ ಕಚೇರಿಯಲ್ಲಿ ಗಂಗಾಧರಯ್ಯ ವಿಚಾರಣೆ ನಡೆಯುತ್ತಿದೆ ಎನ್ನಲಾಗಿದೆ. ಪ್ರಕರಣದ 3ನೇ ಆರೋಪಿಯಾಗಿರುವ ಮಠದ ಉತ್ತರಾಧಿಕಾರಿ ಮತ್ತು 4ನೇ ಆರೋಪಿ ಪರಮಶಿವಯ್ಯ ಮತ್ತು 3ನೇ ಆರೋಪಿ ಬಸವಾದಿತ್ಯ ಈವರೆಗೆ ಪೊಲೀಸರಿಗೆ ಸಿಕ್ಕಿಲ್ಲ. ಅವರ ಬಂಧನಕ್ಕಾಗಿ ಹುಡುಕಾಟ ಮುಂದುವರಿದಿದೆ. ಮುರುಘಾಶ್ರೀ ವಿರುದ್ಧ ಪೋಕ್ಸೋ ಪ್ರಕರಣದ 2ನೇ ಆರೋಪಿ ಲೇಡಿ ವಾರ್ಡನ್ ರಶ್ಮಿಯನ್ನು ವಿಚಾರಣೆಗಾಗಿ ತಮ್ಮ 7 ದಿನ ತಮ್ಮ ವಶಕ್ಕೆ ನೀಡಬೇಕು ಎಂದು ಪೊಲೀಸರು ಕೇಳಿದ್ದಾರೆ. ಸದ್ಯ ಈಕೆ ಶಿವಮೊಗ್ಗ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇಂದು ಈ ಸಂಬಂಧ ಜಿಲ್ಲಾ 2ನೇ ಅಪರ ಮತ್ತು ಸತ್ರ ನ್ಯಾಯಾಲಯದಿಂದ ಪೊಲೀಸರಿಗೆ ಸೂಚನೆ ಸಿಗುವ ಸಾಧ್ಯತೆಯಿದೆ. ಡಿವೈಎಸ್‌ಪಿ ಅನಿಲ್‌ಕುಮಾರ್ ನೇತೃತ್ವದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.6–ಚೆಸ್ಕಾಂನಿಂದ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭೂಗತಗಳ್ಳಿ ಗೇಟ್,



ಚಿಕ್ಕಹಳ್ಳಿ, ಚೋರನಹಳ್ಳಿ, ಭೂಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್‌ಬಹದ್ದೂರು ಶಾಸ್ತ್ರಿನಗರ, ಎಸ್‌ಎಂಪಿ ಡೆವಲಪರ್ಸ್ ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನ ಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ಜೆಎಸ್‌ಎಸ್ ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯನಗರ, ಪ್ರಕೃತಿ ಬಡಾವಣೆ ಹಾಗೂ ಸುತ್ತಮುತ್ತ. ಅಲ್ಲದೆ, ಮಹದೇವಪುರ ಮುಖ್ಯ ರಸ್ತೆ, ಬೀಡಿ ಕಾಲೋನಿ, ಶಾಂತಿನಗರ, ಕೆ.ಎಂ.ಹುಂಡಿ, ನೆಹರುನಗರ, ಡಿಟಿಎಸ್ ರಾವ್‌ನಗರ, ಹಂಚ್ಯಾ, ಸಾತಗಳ್ಳಿ ಗ್ರಾಮ, ಸಾತಗಳ್ಳಿ ಎ ಮತ್ತು ಬಿ ವಲಯ, ದೇವನೂರು ಎ ಮತ್ತು ಬಿ ವಲಯ, ರಾಜೀವ್‌ನಗರ 1ನೇ, 2ನೇ ಮತ್ತು 3ನೇ ಹಂತ, ಹುಡ್ಕೋ ಬಡಾವಣೆ, ಮಾದೇಗೌಡ ವೃತ್ತ, ಲಿಡ್ಕರ್ ಕಾಲೋನಿ, ಕೆ.ಎಸ್.ಎಫ್.ಸಿ ಬಡಾವಣೆ, ಕೈಫ್ ಮಸೀದಿ, ಕಾವೇರಿ ಬಡಾವಣೆ, ಸನ್‌ಪ್ಯೂರ್ ಬಡಾವಣೆ, ವಿ.ಟಿ.ಯು ಕಾಲೇಜು, ರಾಜ್‌ಕುಮಾರ್ ರಸ್ತೆ, ಟೀಚರ್ಸ್ ಬಡಾವಣೆ, ಜೆ.ಎಸ್.ಎಸ್ ಬಡಾವಣೆ, ಕಲ್ಯಾಣಗಿರಿ, ಮಾನಸೀನಗರ, ವಿದ್ಯಾಶಂಕರ ಬಡಾವಣೆ, ಬನ್ನೂರು ರಸ್ತೆ, ವಿದ್ಯಾವಿಕಾಸ್ ಕಾಲೇಜು ಹಾಗೂ ಸುತ್ತಮುತ್ತ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸೆ.19ರಿಂದ ಕುರಿ ಸಾಕಾಣಿಕೆ ತರಬೇತಿ

ಮೈಸೂರು, ಸೆ.6– ಗ್ರಾಮೀಣ ನಿರುದ್ಯೋಗಿ ಯುವಕ–ಯುವತಿಯರಿಗಾಗಿ ಸ್ವ–ಉದ್ಯೋಗ ಕೈಗೊಳ್ಳಲು ಮೈಸೂರಿನ ರುಡ್‌ಸೆಟ್ ಸಂಸ್ಥೆಯಿಂದ ಸೆ.19ರಿಂದ ಸೆ.28ರವರೆಗೆ ಕುರಿ ಸಾಕಾಣಿಕೆ ತರಬೇತಿ ಆಯೋಜಿಸಲಾಗಿದೆ ಆಸಕ್ತರು ಸೆ.18ರೊಳಗೆ ಹೆಸರು ನೋಂದಾಯಿಸಿಕೊಳ್ಳಿ. ಮಾಹಿತಿಗಾಗಿ 0821–2519663, 9844013948, 9964096406, 9880196581, 9740430061, 8746803006 ಸಂಪರ್ಕಿಸಬಹುದು.

ಅರಿವಿನ ಜ್ಯೋತಿ ಬೆಳಗಿಸಿದವರು ದೇವರಾಜ ಅರಸು

ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಬಣ್ಣನೆ



ಮೈಸೂರು,ಸೆ.6(ಎಸ್‌ಪಿಎನ್)– ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರು, ಹಿಂದುಳಿದ ವರ್ಗಗಳ ಆಶಾಕಿರಣ, ನಾಡಿನ ಪ್ರತಿಯೊಬ್ಬರ ಮನೆಗಳಲ್ಲೂ ಅರಿವಿನ ಜ್ಯೋತಿ ಬೆಳಗಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ ಎಂದು ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ತಿಳಿಸಿದರು.

ಮೈಸೂರು ಅರಸು ಜಿಮ್ಖಾನ ಕ್ಲಬ್ ಆವರಣದಲ್ಲಿ ಅರಸು ಮಹಿಳಾ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ, ಮಾತನಾಡಿದರು.

1978ರಲ್ಲಿ ವಕೀಲನಾಗಿದ್ದ ನನಗೆ ಹಣ ಕೊಟ್ಟು, ಕಾಂಗ್ರೆಸ್‌ನಿಂದ ಕೆ.ಆರ್.ನಗರ ಕ್ಷೇತ್ರಕ್ಕೆ ಟಿಕೆಟ್ ನೀಡಿ ಗೆಲ್ಲಿಸಿದರು. ಹಿಂದುಳಿದ, ಶೋಷಿತ ವರ್ಗಗಳ ಏಳಿಗೆಗೆ ಕ್ರಾಂತಿಕಾರಕ ನಿರ್ಧಾರಗಳನ್ನು ತೆಗೆದುಕೊಂಡರು, ಹಾವನೂರು ಆಯೋಗ ರಚಿಸಿ, ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದ ವರ್ಗದವರಿಗೆ ಮೀಸಲಾತಿ ಒದಗಿಸಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ ಎಂದರು.

> ಯದುವಂಶದ ಅರಸರು ಮೈಸೂರು ಸಂಸ್ಥಾನಕ್ಕೆ ನೀಡಿರುವ ಕೊಡುಗೆಯನ್ನು ಯುವ ಪೀಳಿಗೆ ನೆನೆದುಕೊಳ್ಳಬೇಕು. ಅದರಂತೆ ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿ ಹಿಂದುಳಿದ, ಶೋಷಿತ ವರ್ಗಗಳಿಗೆ ನೀಡಿರುವ ಒಂದೊಂದು ನೀತಿಯೂ ಸಂಶೋಧನೆಗೆ ಅರ್ಹವಾಗಿವೆ. ನಾವು–ನೀವೆಲ್ಲಾ ಒಂದೆಡೆ ಕುಳಿತು ಚರ್ಚಿಸಿ, ದೇವರಾಜ ಅರಸು ಅವರನ್ನು ಮುಂದಿನ ಪೀಳಿಗೆಯೂ ನೆನೆಯುವಂತಹ ಕಾರ್ಯಕ್ಕೆ ಅವರ ಹೆಸರಿನಲ್ಲಿರುವ ಅಭಿವೃದ್ಧಿ ನಿಗಮ, ಅಧ್ಯಯನ ಕೇಂದ್ರಗಳನ್ನು ಒಗ್ಗೂಡಿಸಿ ಪ್ರಾಧಿಕಾರ ರಚಿಸುವ ಕುರಿತು ಸರ್ಕಾರದ ಮೇಲೆ ಒತ್ತಡ ತರಬೇಕು.
>
> **–ಎ.ಎಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ**

ಇಂದಿರಾ ಗಾಂಧಿ ನಂತರ ದೇಶದ ಚುಕ್ಕಾಣಿ ಅಲಂಕರಿಸಿದ್ದ ರಾಜೀವ್‌ಗಾಂಧಿ ಅವರು, ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಿಗೆ ಅವಕಾಶ ಇರಬೇಕೆಂಬ ಆಶಯದಿಂದ ಗ್ರಾಪಂ, ತಾಪಂ ಹಾಗೂ ಜಿಪಂಗೆ ಸ್ಥಳೀಯ ಸಂಸ್ಥೆಗಳ ಆಯ್ಕೆಗೆ ಅವಕಾಶ ಕಲ್ಪಿಸಿದರು. ಅದೇ ಕರ್ನಾಟಕದಲ್ಲೂ ದೇವರಾಜ ಅರಸು ಸ್ಥಳೀಯ ಸಂಸ್ಥೆಗಳಿಗೆ ಜನಪ್ರತಿನಿಧಿಗಳ ಆಯ್ಕೆಗೆ ಅವಕಾಶ ಕಲ್ಪಿಸಿದರಲ್ಲದೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಥಾಪಿಸಿ ಮಹಿಳಾ, ಮಕ್ಕಳ ಸಬಲೀಕರಣಕ್ಕೆ ಅವಕಾಶ ಕಲ್ಪಿಸಿದ್ದಾರೆ ಎಂದರು.

ಮೈಸೂರು ಅಭಿವೃದ್ಧಿಗೆ ಮೈಸೂರು ಒಡೆಯರ್ ಕೊಡುಗೆ ಅಪಾರ. ಅದರಂತೆ ದೇವರಾಜ ಅರಸು ಆಡಳಿತಾವಧಿಯಲ್ಲಿ ಎಲ್ಲಾ ವರ್ಗದವರೂ ಒಪ್ಪುವಂತಹ ಆಡಳಿತ ನೀಡಿ, ರಾಜ್ಯದ ಮನೆಮನೆ ಮಾತಾಗಿದ್ದಾರೆ. ಇಂತಹವರ ಬಗ್ಗೆ ವರ್ಷ ಪೂರ್ತಿ ನೆನೆಯುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಎಂ.ಯಶಸ್ವಿ ಅರಸ್, ಎ.ಬಿಂದು, ಭವಾನಿ ಅರಸ್, ಎಚ್.ಎಸ್. ಪ್ರಿಯಾಂಕ ಅರಸ್, ಕೆ.ಸ್ನೇಹ, ಎಂ.ವೈ. ಅಂಕಿತಾ, ಎ.ಆರ್.ವೈಷ್ಣವಿ, ಬಿ.ಎನ್. ತನುಶ್ರೀ, ಪಿ.ಎಂ.ಲಾವಣ್ಯ ಅರಸ್, ಎಂ.ಜಿ.ಧನ್ಯಶ್ರೀ, ಹೆಚ್.ಆರ್.ವರ್ಷ ಅರಸ್, ನಂದಿನಿ, ಎಂ.ಸಿಂಧುಶ್ರೀ ಅರಸ್, ಎ.ಎನ್.ಪಾರ್ವತಮ್ಮಮಣಿ, ಅನನ್ಯ ಬಿ.ಅರಸ್, ಮೇಘನಾ, ಕೆ.ಎಂ.ಧೃತಿ ಅರಸ್ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಅರಸು ಮಹಿಳಾ ಸಂಘ ಅಧ್ಯಕ್ಷೆ ಸುಜಯ ಕಾಂತಮಣಿ, ಈ ವೇಳೆ ನಿವೃತ್ತ ಪ್ರಾಧ್ಯಾಪಕಿ ಡಾ.ಬಿ.ವಿ. ಸುಧಾಮಣಿ, ಹೆಚ್.ಎಸ್.ಬಿಂದ್ಯಾ, ಪ್ರೊ.ಕೆ.ವಿ.ಅಯ್ಯಣ್ಣ, ಡಾ.ಎಂ.ಜಿ.ಆರ್. ಅರಸ್, ಲಕ್ಷ್ಮೀಕಾಂತರಾಜೇ ಅರಸ್, ಬಿ.ಕೆ.ವಿಜಯಲಕ್ಷ್ಮಿ ಅರಸ್, ಭವಾನಿ ಅರಸ್, ಬಿ.ನಾಗಲಕ್ಷ್ಮಿ ಸೇರಿದಂತೆ ಇತರರಿದ್ದರು.

51 ವರ್ಷಗಳಲ್ಲಿ 2ನೇ ದಾಖಲೆಯ ಗರಿಷ್ಠ ಮಳೆ: ಸೆಪ್ಟೆಂಬರ್ ಆರಂಭದಲ್ಲೇ 709 ಮಿ.ಮೀ ವರ್ಷಧಾರೆ

ಬೆಂಗಳೂರು: ಬೆಂಗಳೂರಿನಲ್ಲಿ ಸುರಿಯುತ್ತಿರುವ ಭಾರಿ ಮಳೆ ಹಲವು ಅವಾಂತರಗಳನ್ನು ಸೃಷ್ಟಿ ಮಾಡುತ್ತಿರುವಂತೆಯೇ ಈ ಹಿಂದಿನ ದಾಖಲೆಗಳನ್ನೂ ಕೂಡ ಮುರಿಯುತ್ತಾ ಸಾಗಿದೆ. ನಗರದಲ್ಲಿ ಸುರಿಯುತ್ತಿರುವ ಭಾರಿ ಮಳೆ 51 ವರ್ಷಗಳಲ್ಲಿ ಬಿದ್ದ 2ನೇ ದಾಖಲೆಯ ಗರಿಷ್ಠ ಮಳೆಯಾಗಿದೆ. ನಗರದಲ್ಲಿ 1971ರಲ್ಲಿ ಮಳೆಗಾಲದಲ್ಲಿ 725 ಮಿ.ಮೀ. ಮಳೆಯಾಗಿತ್ತು. ಈ ವರ್ಷ ಸೆಪ್ಟೆಂಬರ್‌ನಲ್ಲಿ ಈಗಾಗಲೇ 709 ಮಿ.ಮೀ. ಮಳೆಯಾಗಿದ್ದು, ಇದು 51 ವರ್ಷಗಳಲ್ಲಿ ಎರಡನೇ ದಾಖಲೆ ಮಳೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಆ.31ರ ರಾತ್ರಿಯಿಂದ ನಿರಂತರ ಮಳೆಯಾಗುತ್ತಿದ್ದು, ಭಾನುವಾರ ರಾತ್ರಿ ಅತಿ ಹೆಚ್ಚು ಪ್ರಮಾಣದಲ್ಲಿ ಮಳೆಯಾಗಿದೆ. ಪೂರ್ವ ಹಾಗೂ ಬೊಮ್ಮನಹಳ್ಳಿ ಭಾಗದಲ್ಲಿ ಹೆಚ್ಚಾಗಿ ಮಳೆಯಾಗಿದ್ದು, ಸೆಪ್ಟೆಂಬರ್‌ವರೆಗೆ ಸಾಮಾನ್ಯವಾಗಿ ಈ ಭಾಗದಲ್ಲಿ 313 ಮಿ.ಮೀ. ಮಳೆಯಾಗುತ್ತಿತ್ತು. ಆದರೆ, 709 ಮಿ.ಮೀ. ಆಗಿದೆ. 1998 ಹೊರತುಪಡಿಸಿದರೆ ನಗರದಲ್ಲಿ ಹೆಚ್ಚು ಮಳೆಯಾಗಿರುವುದು ಇದೇ ವರ್ಷ. 1975ರಲ್ಲಿ ಒಟ್ಟಾರೆ 725 ಮಿ.ಮೀ. ಮಳೆಯಾಗಿತ್ತು. 1971ರ ನಂತರ ಅತಿಹೆಚ್ಚು ಮಳೆ ಇದಾಗಿದೆ ಎಂದು ಹೇಳಿದ್ದಾರೆ.

ವಾಡಿಕೆಗಿಂತ 4 ಪಟ್ಟು ಹೆಚ್ಚು ಮಳೆ: 2017 ಬಿಟ್ಟರೆ ಇದೀಗ ಮಹದೇವಪುರ, ಪೂರ್ವವಲಯದಲ್ಲಿ ಅತಿ ಹೆಚ್ಚು ಮಳೆಯಾಗಿದ್ದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ 700 ಮಿ.ಮೀ. ಹೆಚ್ಚು ಮಳೆಯಾಗಿದೆ. ಹೀಗಾಗಿ, ಸಮಸ್ಯೆ ಹೆಚ್ಚಾಗಿದೆ. 4 ಪಟ್ಟು ಹೆಚ್ಚು ಮಳೆ ಆಗಸ್ಟ್ 30ರಿಂದ ಸೆಪ್ಟೆಂಬರ್ 5ರವರೆಗೆ ಆಗಿದೆ. ಬೊಮ್ಮನಹಳ್ಳಿಯಲ್ಲಿ 9 ಪ್ರದೇಶಗಳಲ್ಲಿ ಸಾಕಷ್ಟು ಸಮಸ್ಯೆ ಆಗಿದೆ. ಪೂರ್ವ ಭಾಗದಲ್ಲಿ 24 ಕಡೆ ಹಾಗೂ ಮಹದೇಪುರದಲ್ಲಿ 22 ಕಡೆ ಸಮಸ್ಯೆ ಆಗಿದೆ ಎಂದು ತುಷಾರ್ ಗಿರಿನಾಥ್ ವಿವರಿಸಿದರು.



90 ವರ್ಷಗಳಲ್ಲೇ ಆಗದ ಅತಿವೃಷ್ಟಿ: ಸಿಎಂ

ಬೆಂಗಳೂರು, ಸೆ.6(ಕೆಎಂಶಿ)–ಬೆಂಗಳೂರಿನಲ್ಲಿ ಕಳೆದ 90 ವರ್ಷಗಳಲ್ಲಿ ಆಗದಷ್ಟು ಅತಿವೃಷ್ಟಿಯಾಗಿದೆ. ಸವಾಲಿನ ಪರಿಸ್ಥಿತಿಯಲ್ಲಿಯೂ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸತತವಾಗಿ ಮಳೆಯಾಗುತ್ತಿರುವುದರಿಂದ ಎಲ್ಲಾ ಕೆರೆಗಳು ತುಂಬಿದ್ದು ಕೆಲವು ಕೋಡಿ ಹರಿದಿವೆ. ಕೆಲವು ಕೆರೆಗಳು ಬಿರುಕು ಬಿಟ್ಟಿವೆ. ಇಡೀ ಬೆಂಗಳೂರು ಜಲಾವೃತವಾಗಿದೆ ಎಂದು ಬಿಂಬಿಸಲಾಗುತ್ತಿದೆ. ಎರಡು ವಲಯಗಳು, ಅದರಲ್ಲೂ ಮಹದೇವಪುರ ವಲಯ ಸಮಸ್ಯೆಗೆ ಒಳಗಾಗಿದೆ. 69 ಕೆರೆಗಳು ಈ ಪ್ರದೇಶದಲ್ಲಿವೆ. ಎಲ್ಲವೂ ಕೋಡಿ ಹರಿದಿವೆ. ಎಲ್ಲಾ ಕಟ್ಟಡಗಳು ಕೆಳ ಮಟ್ಟದಲ್ಲಿವೆ ಹಾಗೂ ಒತ್ತುವರಿ ಕೂಡ ಆಗಿದೆ.

ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ನಮ್ಮ ಅಧಿಕಾರಿಗಳು, ಇಂಜಿನಿಯರ್‌ಗಳು, ಎಸ್‌ಡಿಆರ್‌ಎಫ್ ತಂಡಗಳು 24/7 ಕೆಲಸ ಮಾಡುತ್ತಿವೆ. ಸಾಕಷ್ಟು ಒತ್ತುವರಿ ನಾವು ತೆರವುಗೊಳಿಸಿದ್ದೇವೆ. ತೆರವುಗೊಳಿಸುವ ಕಾರ್ಯವನ್ನು ಮುಂದುವರೆಸಲಾಗುವುದು. ಕೆರೆಗಳ ನಿರ್ವಹಣೆಗೆ ಸ್ಲೂಯಿಸ್ ಗೇಟ್‌ಗಳನ್ನು ಅಳವಡಿಸಲಾಗುತ್ತಿದೆ. ಎಲ್ಲಾ ಅಧಿಕಾರಿಗಳು ಸ್ಥಳದಲ್ಲಿಯೇ ಮೊಕ್ಕಾಂ ಹೂಡುವಂತೆ ಸೂಚಿಸಿದ್ದು, ಕರೆ ಬಂದ ಕೂಡಲೇ ಸಮಸ್ಯೆ ಬಗೆಹರಿಸಲು ತಿಳಿಸಲಾಗಿದೆ ಎಂದರು.

ಮೈಸೂರು ರೈಲ್ವೆ ಪೊಲೀಸರಿಂದ ಸರಗಳ್ಳನ ಬಂಧನ

ಮೈಸೂರು, ಸೆ.6– ಮಾಂಗಲ್ಯ ಸರ ಕಳವು ಮಾಡಿದ್ದ ಆರೋಪಿ ಬಂಧಿಸುವಲ್ಲಿ ಮೈಸೂರಿನ ರೈಲ್ವೆ ಪೊಲೀಸರು ಯಶಸ್ವಿಯಾಗಿದ್ದಾರೆ. ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಸಂಜೀವರೆಡ್ಡಿ (31) ಬಂಧಿತ ಆರೋಪಿ. ಇತನಿಂದ 60 ಗ್ರಾಂ ತೂಕದ ಸುಮಾರು 3 ಲಕ್ಷ ರೂ. ಬೆಲೆಬಾಳುವ ಮಾಂಗಲ್ಯ ಸರ ವಶಪಡಿಸಿಕೊಂಡಿದ್ದಾರೆ.

ವಿವರ: ಸೆ.4ರಂದು ಬೆಳಗ್ಗೆ ಶ್ರೀಮತಿ ಸುಮಾ ಉದಯ್ ಎಂಬುವರು ತಮ್ಮ ಮಗಳು ಸಾಗರೀಕಾಳನ್ನು ಕೆ.ಆರ್.ನಗರ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂ ನಂ.2ಕ್ಕೆ ಆಗಮಿಸಿದ ಮೈಸೂರು–ದಾದರ್ ಎಕ್ಸ್‌ಪ್ರೆಸ್ ರೈಲಿಗೆ ಹತ್ತಿಸಿ, ಲಗೇಜ್‌ಗಳನ್ನು ಮಗಳಿಗೆ ನೀಡುತ್ತಿದ್ದ ವೇಳೆ ಅಲ್ಲಿಗೆ ಆಗಮಿಸಿದ ಸಂಜೀವರೆಡ್ಡಿ ಸುಮಾ ಅವರ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ. ಈ ಸಂಬಂಧ ಸುಮಾ ಮೈಸೂರು ರೈಲ್ವೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರು ರೈಲ್ವೆ ಪೊಲೀಸರು ಆರೋಪಿಯನ್ನು ಬಂಧಿಸಿ, ಮಾಂಗಲ್ಯ ಸರ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಬೆಂಗಳೂರಿನ ರೈಲ್ವೆಸ್ ಪೊಲೀಸ್ ಅಧೀಕ್ಷಕಿ ಸಿರಿಗೌರಿ, ರೈಲ್ವೆ ಡಿಎಸ್‌ಪಿ ಗೀತಾ ಮಾರ್ಗದರ್ಶನದಲ್ಲಿ ರೈಲ್ವೆ ಸಿಪಿಐ ಮಂಜು, ಎಸ್‌ಐ ಮಹೇಶ್, ಎಎಸ್‌ಐ ಪಿ.ಶ್ರೀನಿವಾಸ್, ಜಗನ್ನಾಥ್, ಮೋಹನ್, ರಘು, ಚಂದ್ರಶೇಖರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಇಂದು ಶಿಕ್ಷಕ ಸೇವಾರತ್ನ ಪ್ರಶಸ್ತಿ ಪ್ರದಾನ

ಮೈಸೂರು,ಸೆ.6–ಮೈಸೂರಿನ ಸುಜೀವ ಫೌಂಡೇಷನ್‌ನಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿದ ಶಿಕ್ಷಕರಿಗೆ 'ಶಿಕ್ಷಕ ಸೇವಾರತ್ನ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ (ಸೆ.7) ಬೆಳಗ್ಗೆ 11.30 ಗಂಟೆಗೆ ಅಕ್ಕನ ಬಳಗದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಇಳೈ ಆಳ್ವಾರ್ ಸ್ವಾಮೀಜಿ, ಕಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತ ಗಂಗೋತ್ರಿ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಅಧ್ಯಕ್ಷೆ ಡಾ.ಆರ್.ಎಚ್.ಪವಿತ್ರಾ, ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಸುಜೀವ್ ಫೌಂಡೇಶನ್ ಅಧ್ಯಕ್ಷ ರಾಜಾರಾಮ್, ಸುಂದರ್‌ಮೂರ್ತಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ಗಾಯಕಿ ಶ್ವೇತಾ ಮಡಪ್ಪಾಡಿ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್ ಭಾಗವಹಿಸುವರು. ಇದೇ ವೇಳೆ ವಿದುಷಿ ವಿಜಯ ಸುದರ್ಶನ್ (ಸಂಗೀತ ಶಿಕ್ಷಕಿ), ವಿದೂಷಿ ಅನುಸೂಯ ಸುದರ್ಶನ್ (ಸಂಗೀತ ಶಿಕ್ಷಕಿ), ವಿದೂಷಿ ನಾಗಲಕ್ಷ್ಮಿ ನಾಗರಾಜನ್ (ನೃತ್ಯ ಶಿಕ್ಷಕಿ), ಮಿತ್ರ ನವೀನ್ (ನೃತ್ಯ ಶಿಕ್ಷಕಿ), ಅನಂತರಾಮು ಕೆ.ಎಲ್. (ಕ್ರೀಡಾ ಶಿಕ್ಷಕರು), ಡಾ.ಶಶಿಕುಮಾರ್ (ಕ್ರೀಡಾ ಶಿಕ್ಷಕರು), ರೋಷನ್ ಅರೆಹೊಳೆ(ಯೋಗ ಶಿಕ್ಷಕರು), ಡಾ.ಬಿ.ಶ್ರೀನಾಥ(ಯೋಗ ಶಿಕ್ಷಕರು), ವಿದ್ವಾನ್ ವೆಂಕಟೇಶ್‌ಮೂರ್ತಿ (ಆಗಮಿಕ ಶಿಕ್ಷಕರು), ವಿದ್ವಾನ್ ಕೃಷ್ಣಮೂರ್ತಿ (ಆಗಮಿಕ ಶಿಕ್ಷಕ), ಎಂ.ಜಿ.ಸುಗುಣಾವತಿ (ಶಿಕ್ಷಣ), ಟಿ.ಎಸ್.ಪ್ರಭುಸ್ವಾಮಿ (ಶಿಕ್ಷಣ ಕ್ಷೇತ್ರ) ಅವರಿಗೆ ಶಿಕ್ಷಕ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ: ಶಾಸಕ ಜಿಟಿಡಿ

ಮೈಸೂರು, ಸೆ.6– ಪ್ರತಿಯೊಬ್ಬರ ಜೀವನದಲ್ಲಿ ಗುರಿ ಎಷ್ಟು ಮುಖ್ಯವೋ, ಗುರುಗಳೂ ಅಷ್ಟೇ ಮುಖ್ಯ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಹೂಟಗಳ್ಳಿಯ ಸರಸ್ವತಿ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸೀಮಿತ ಗ್ರಹಿಕೆಗಳ ಮೂಲಕ ಅರ್ಥವಾಗದಂತಹ ವಿಷಯಗಳನ್ನು ಅರ್ಥ ಮಾಡಿಸುವ ಕಲೆ ಶಿಕ್ಷಕರಿಗೆ ಚೆನ್ನಾಗಿ ಗೊತ್ತಿದೆ ಎಂದ ಅವರು ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದುದು. ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ತಂದೆ–ತಾಯಿಯಿಂದ ಸಾಧ್ಯವಾಗದನ್ನು ಶಿಕ್ಷಕರು ಮಾಡುತ್ತಾರೆ. ಶಿಕ್ಷಕರು ಒಗ್ಗೂಡಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಲ್ಲಿ ಪ್ರಬಲ ರಾಷ್ಟ್ರ ನಿರ್ಮಾಣ ಸಾಧ್ಯ ಎಂದರು.

ಶಿಕ್ಷಕ ವೃತ್ತಿ ಪವಿತ್ರವಾದುದು. ಶಿಕ್ಷಕರು ವಿದ್ಯಾರ್ಥಿಗಳಿಗೆ ವಾತ್ಸಲ್ಯ ಪೂರ್ವಕ ಹಾಗೂ ದಕ್ಷತೆಯಿಂದ ವಿದ್ಯಾದಾನ ಮಾಡುತ್ತಾರೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಗ್ರಹಿಸಬೇಕು ಎಂದು ಕಠೋಪನಿಷತ್ತು ಹೇಳುತ್ತದೆ.





ಶಿಕ್ಷಕರ ಜವಾಬ್ದಾರಿ ಎಷ್ಟು ದೊಡ್ಡದೋ ಅವರ ಸಮಸ್ಯೆಗಳೂ ಅಷ್ಟೇ ದೊಡ್ಡವು. ಶಿಲ್ಪಿಯೊಬ್ಬ ಕಲ್ಲನ್ನು ಕೆತ್ತಿ ಸುಂದರವಾದ ಮೂರ್ತಿ ತಯಾರು ಮಾಡುವುದಕ್ಕಿಂತ ಕಷ್ಟ ಸಾಧ್ಯವಾದ ಕೆಲಸ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಶಿಕ್ಷಕರು ಶ್ರಮಿಸುವುದಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಮನ ಮುಟ್ಟುವಂತೆ ಪಾಠ ಮಾಡುವುದರ ಜೊತೆ ಜೊತೆಗೆ ಅವರ ವಿವಿಧ ಸಮಸ್ಯೆಗಳಿಗೆ ಪರಿಹಾರೋಪಾಯ ನೀಡುವುದು, ಸಂದರ್ಭೋಚಿತ ಸಲಹೆ ನೀಡುವುದು ಶಿಕ್ಷಕನ ಮುಖ್ಯ ಕರ್ತವ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಪ್ರೇಮದ ಬೀಜವನ್ನು ಬಿತ್ತಿ ಪ್ರಬಲ ರಾಷ್ಟ್ರ ಪ್ರಜ್ಞೆ ಜಾಗೃತಗೊಳಿಸಿ ಉತ್ತಮ ದೇಶ ಭಕ್ತರನ್ನು ಬೆಳೆಸುವವರು ಶಿಕ್ಷಕರು. ಆದ್ದರಿಂದ ಶಿಕ್ಷಕರು ಮಾತ್ರ ಸಮಸ್ತ ರಾಷ್ಟ್ರವನ್ನು ಸರ್ವ ವಿಧದಿಂದಲೂ ಸದೃಢಗೊಳಿಸಿ ಸರ್ವಾಂಗೀಣ ಸುಂದರ ರಾಷ್ಟ್ರ ನಿರ್ಮಾಣಕ್ಕೆ ಕಾರಣವಾಗಬಲ್ಲರು ಎಂದರು.

ಶಿಕ್ಷಕನಿಗೂ ವಿದ್ಯಾರ್ಥಿಗೂ ಅವಿನಾಭಾವ ಸಂಬಂಧವಿದೆ. ಮಗು ಮೊದಲು ಶಾಲೆಗೆ ಹೋದಾಗ ಶಿಕ್ಷಕ ಹೇಳಿದ್ದನೆಲ್ಲ ನಂಬುತ್ತದೆ. ಮಗುವಿಗೆ ಶಿಕ್ಷಕರೇ ಮೊದಲ ಆದರ್ಶ. ಇಂಥ ಸ್ಥಿತಿಯಲ್ಲಿ ಶಿಕ್ಷಕನ ಜವಾಬ್ದಾರಿ ನಿಜವಾಗಿಯೂ ಮಹತ್ವದ್ದಾಗಿರುತ್ತದೆ. ಹಸಿ ಮಣ್ಣಿನ ಮುದ್ದೆಯಂತೆ ಇರುವ ಮಗುವಿನ ಮನಸ್ಸನ್ನು ತಿದ್ದಿ ತೀಡಿ ಆರೋಗ್ಯ ಪೂರ್ಣ ಪ್ರಜೆಯಾಗಿ ರೂಪಿಸುವ ಜವಾಬ್ದಾರಿ ಗುರುವಿನದು. ಗುರು ಎಂದರೆ ಒಂದು ಶಕ್ತಿ ಅಜ್ಞಾನದ ಕತ್ತಲೆ ಕಳೆದು ಸುಜ್ಞಾನದ ಬೆಳಕಿನ ಕರೆದುಕೊಂಡು ಹೋಗುವ ಮಾರ್ಗದರ್ಶಕ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.09.2022 ಬುಧವಾರ, ಮಳೆ ನಕ್ಷತ್ರ: ಪುಬ್ಬ, 31.08.2022ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ : ದ್ವಾದಶಿ, ನಕ್ಷತ್ರ : ಉಷಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ವಾಮನ ಜಯಂತಿ, ಸಂತಾನ ಗೋಪಾಲ ಯಾಗ ಪರಿಸಮಾಪ್ತಿ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಸಂವಿಧಾನ ರಕ್ಷಣಾ ಸಮಿತಿ, ಮೈಸೂರು :** ಗುಂಪು ಅತ್ಯಾಚಾರ, ಕೊಲೆ ಅಪರಾಧಿಗಳ ಬಿಡುಗಡೆ ನ್ಯಾಯವಲ್ಲ, ನ್ಯಾಯಕ್ಕಾಗಿ ಒತ್ತಾಯಿಸಿ ಪ್ರತಿಭಟನಾ ಸಭೆ, ಮುಖ್ಯ ಅತಿಥಿಗಳು : ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಸಬೀಹಾ ಭೂಮಿಗೌಡ, ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲ, ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಸ್ಥಳ: ಗಾಂಧಿಚೌಕ, ಬೆಳಗ್ಗೆ 10.30ಕ್ಕೆ.

■ **ಸುಜೀವ ಫೌಂಡೇಷನ್, ವಿಜಯನಗರ :** ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿದ ಶಿಕ್ಷಕರಿಗೆ 'ಶಿಕ್ಷಕ ಸೇವಾರತ್ನ' ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತ ಗಂಗೋತ್ರಿ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಅಧ್ಯಕ್ಷೆ ಡಾ.ಆರ್. ಎಚ್.ಪವಿತ್ರ, ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಸುಜೀವ್ ಫೌಂಡೇಶನ್ ಅಧ್ಯಕ್ಷ ರಾಜಾರಾಮ್, ಸುಂದರ್ ಮೂರ್ತಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ಗಾಯಕಿ ಶ್ವೇತಾ ಮಡಪ್ಪಾಡಿ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್ ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ವಿದುಷಿ ಭಾಗ್ಯಲಕ್ಷ್ಮಿ ಮತ್ತು ಶ್ರೀನಿವಾಸ ಫಣಿ ಅವರಿಂದ ಶಂಬರಾಸುನ ವಧೆ ಕುರಿತು ಕಾವ್ಯವಾಚನ, ಸಂಜೆ 6.45ಕ್ಕೆ ವಿದುಷಿ ಭಾರ್ಗವಿ ವೆಂಕಟರಾಂ ಅವರಿಂದ ಗಾಯನ, ವಿದ್ವಾನ್ ಎಚ್.ಕೆ. ವೆಂಕಟರಾಂ–ವಯೋಲಿನ್, ವಿದ್ವಾನ್ ಕೆ.ವಿ. ಪ್ರಸಾದ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖಶಿಖಾಂತ–ಆರೋಗ್ಯ, ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನಮಹೋತ್ಸವ–ಅರಣ್ಯ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ, 10.00 ಉಸ್ತಾದ್ ಸಬ್ರಿ ಖಾನ್–ಸಾರಂಗಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಲಾಕ್‌ಡೌನ್ ಕಥಾ ನಾಟಕ– ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಚಪ್ಪಲಿದಾನ', ಮೂಲಕಥೆ– ವೆಂಕಟೇಶ್ ಚಾಗಿ, ನಾಟಕರೂಪ– ಜಿ.ಎಲ್. ತ್ರಿಪುರಾಂತಕ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ವಿಶೇಷ ಕಾರ್ಯಕ್ರಮ 'ತಸ್ಮೈ ಶ್ರೀ ಗುರುವೇನಮಃ', ರಚನೆ ಮತ್ತು ಪ್ರಸ್ತುತಿ–ಡಾ.ಜ್ಯೋತಿ ಶಂಕರ್, ಪರಿಕಲ್ಪನೆ– ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ ನೇರ ಕಾರ್ಯಕ್ರಮದಲ್ಲಿ ಭಾಗವಹಿಸುವವರು, ಲೇಖಕಿ ಹಾಗೂ ಸಸ್ಯಶಾಸ್ತ್ರಜ್ಞೆ ಪದ್ಮಾ ಶ್ರೀರಾಮ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 6.50 ಕಿಸಾನ್‌ವಾಣಿ–ತೆಂಗಿನ ಬೆಳೆಯಲ್ಲಿ ತಾಂತ್ರಿಕ ಕೃಷಿ ಕ್ರಮಗಳು ಕುರಿತು ಡಾ.ಜಿ.ಎಂ.ವಿನಯ್ ಅವರೊಡನೆ ಸಂದರ್ಶನ, 10.00 ಹಳ್ಳಿಹಾಡು–ಹಿರೇನಂದಿ ಗ್ರಾಮದ ಚಾಮಮ್ಮ ಮತ್ತು ಲಕ್ಷ್ಮಮ್ಮ

ಮೈಸೂರು ಮಿತ್ರ

ಬುಧವಾರ 7 ಸೆಪ್ಟೆಂಬರ್ 2022



ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ನೂತನ ಕುಲಪತಿಯಾಗಿ ಆಯ್ಕೆಗೊಂಡ ಪ್ರೊ.ಸಿ.ಬಸವರಾಜ್ ಅವರನ್ನು ತಮ್ಮ ನಿವಾಸದಲ್ಲಿ ಅಭಿನಂದಿಸಿದರು. ಚಿತ್ರದಲ್ಲಿ ಪಿ.ನಂದಕುಮಾರ್, ಭರತ್ ರಾಮಸ್ವಾಮಿ, ಸಿ.ಜಿ.ಶಿವಕುಮಾರ್, ಡಿ.ವೆಂಕಟರಾಜು, ಲೋಹಿತ್ ರಾಮಸ್ವಾಮಿ, ಮುಡಾ ಸದಸ್ಯರಾದ ಲಿಂಗಯ್ಯ, ಎಚ್.ಜಿ.ರಮೇಶ್, ಶಾಂತರಾಮ್ ಶೆಟ್ಟಿ, ಗಿರೀಶ್, ಮೋಹನ್ ಇದ್ದಾರೆ.



ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್‌ನ 2022–23ನೇ ಸಾಲಿನ ನೂತನ ಪದಾಧಿಕಾರಿಗಳು ಇತ್ತೀಚೆಗೆ ಅಧಿಕಾರ ಸ್ವೀಕರಿಸಿದರು. ಚಿತ್ರದಲ್ಲಿ ಕುಳಿತಿರುವವರು (ಎಡದಿಂದ): ವಿ.ಟಿ.ಶೆಟ್ಟಿ, ಹೆಚ್.ಎನ್.ಜಯಪಾಲ್, ಗಿರೀಶ್‌ಗೌಡ ವಿ., ಮಾಜಿ ಅಧ್ಯಕ್ಷ ಸಿ.ನಾರಾಯಣಗೌಡ, ಜಿ.ಸಂಜಯ್. ನಿಂತಿರುವವರು (ಎಡದಿಂದ): ಉಮಾ ಅನಿಲ್, ಪ್ರಮೋದ್ ಎಂ.ವಿ., ಲಕ್ಷ್ಮಣ್ ಸ್ವರೂಪ್‌ರಾಜ್ ಅರಸ್, ಹೆಚ್.ಆರ್.ಯಶ್ವಂತ್‌ಕುಮಾರ್, ಆರ್.ಗುರುಶಾಂತಪ್ಪ ಯು.ಎಂ., ವೆಂಕಟೇಶ್ ಹೆಚ್.ಎಸ್. ಮತ್ತು ಸಿ.ಮೋಹನ್‌ಕುಮಾರ್ ಅವರನ್ನು ಕಾಣಬಹುದು.



ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ವತಿಯಿಂದ ಶಾಸಕ ತನ್ವೀರ್ ಸೇಠ್ ಅವರಿಗೆ ಆದರ್ಶ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮಿತಿ ಗೌರವಾಧ್ಯಕ್ಷ ಎಂ.ಚಂದ್ರಶೇಖರ್, ಸಲಹೆಗಾರ ವೈ.ಡಿ.ರಾಜಣ್ಣ, ಅಧ್ಯಕ್ಷ ಜಾಕೀರ್ ಹುಸೇನ್, ಸಂಚಾಲಕರಾದ ರಿಷಿ ವಿಶ್ವಕರ್ಮ, ಪ್ರಶಾಂತ್ ಆರ್ಯ, ದ್ಯಾವಪ್ಪ ನಾಯಕ, ಅರವಿಂದ ಶರ್ಮಾ, ಕಮಲ ಅನಂತರಾಮ್ ಇನ್ನಿತರರಿದ್ದರು.

ಕುದುರೆಗಳ ಆರೋಗ್ಯ ತಪಾಸಣೆ



ಮೈಸೂರು,ಸೆ.6(ಎಂಟಿವೈ)– ಮೈಸೂರಿನ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆ ವತಿಯಿಂದ ಕುದುರೆಗಳ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ನಡೆಸಲಾಯಿತು.

ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮಂಗಳವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ನಡೆದ ತಪಾಸಣಾ ಶಿಬಿರಕ್ಕೆ ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್ ಅವರು ಚಾಲನೆ ನೀಡಿ, ಕುದುರೆಗಳಿಗೆ ಹುಲ್ಲು ನೀಡಿ, ಉಪಚರಿಸಿದರು.

ಇದೇ ವೇಳೆ ಮೈಸೂರಿನಲ್ಲಿ ಟಾಂಗಾಗಳಿಗೆ ಬಳಸುವ ಕುದುರೆ ಹಾಗೂ ಬೀಡಾಡಿ ಕುದುರೆಗಳಿಗೆ ನುರಿತ ಪಶುವೈದ್ಯರು ಆರೋಗ್ಯ ತಪಾಸಣೆ ನಡೆಸಿ, ಚಿಕಿತ್ಸೆ ನೀಡಿದರು. ಅಪರಿಚಿತ ವಾಹನ ಡಿಕ್ಕಿಯಿಂದಾಗಿ ಗಾಯಗೊಂಡಿದ್ದ ಕೆಲವು ಕುದುರೆಗಳಿಗೆ ಸ್ಥಳದಲ್ಲೇ ಚಿಕಿತ್ಸೆ ನೀಡಲಾಯಿತು. ಅಲ್ಲದೆ, ಕೆಲವು ಕಿಡಿಗೇಡಿಗಳು ಗಾಯಗೊಳಿಸಿದ್ದ ಕುದುರೆಗೂ ಚಿಕಿತ್ಸೆ ನೀಡಿ, ಉಪಚರಿಸಲಾಯಿತು. ಬಳಿಕ ಟಾಂಗಾಗಳಿಗಾಗಿ ಬಳಸುವ 26 ಕುದುರೆಗಳಿಗೆ ಲಸಿಕೆ ಹಾಕಲಾಯಿತು. ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯ ಪಶುವೈದ್ಯ ಡಾ.ಅಮರ್ ದೀಪ್ ಸಿಂಗ್, ಊಟಿಯಲ್ಲಿನ ವರ್ಲ್ಡ್ ವೈಡ್ ವೆಟ್ ಇಂಟರ್‌ನ್ಯಾಷನಲ್ ಸೊಸೈಟಿಯ ವೈದ್ಯ ಡಾ.ಹರೀಶ್ ಕುಂಡರಗಿ ಅವರು ಕುದುರೆಗಳ ಆರೋಗ್ಯ ತಪಾಸಣೆ ನಡೆಸಿ, ಚಿಕಿತ್ಸೆ ನೀಡಿದರು. ಈ ಸಂದರ್ಭದಲ್ಲಿ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯ ಮುಖ್ಯಸ್ಥೆ ಸವಿತಾ ನಾಗಭೂಷಣ್, ಸ್ವಯಂ ಸೇವಕಿ ಭಾಗ್ಯಲಕ್ಷ್ಮೀ, ಜೀವ ದಯಾ ಚಾರಿಟಬಲ್ ಟ್ರಸ್ಟ್ ಸ್ವಯಂ ಸೇವಕರು ಪಾಲ್ಗೊಂಡು ಆರೋಗ್ಯ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರದ ಯಶಸ್ಸಿಗೆ ಸಹಕರಿಸಿದರು.

ನಾಳೆಯಿಂದ ಟ್ರಾನ್ಸ್‌ಲೇಷನ್ ರಿಸರ್ಚ್ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು,ಸೆ.6–ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗವು, ಇಂಡಿಯನ್ ಅಕಾಡೆಮಿ ಆಫ್ ಬಯೊಮೆಡಿಕಲ್ ಸೈನ್ಸ್ ಸಹಯೋಗದೊಂದಿಗೆ ಟ್ರಾನ್ಸ್‌ಲೇಷನ್ ರಿಸರ್ಚ್ ಕುರಿತು ದಕ್ಷಿಣ ಭಾರತದ ಮೊದಲ ಅಂತರರಾಷ್ಟ್ರೀಯ ಸಮ್ಮೇಳವನ್ನು ಸೆ.8 ಮತ್ತು 9ರಂದು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಏರ್ಪಡಿಸಲಾಗಿದೆ. ಸಮ್ಮೇಳನವನ್ನು ಸೆ.8ರಂದು ಮಧ್ಯಾಹ್ನ 12.30ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಉದ್ಘಾಟಿಸಲಿದ್ದಾರೆ.

ಮುಖ್ಯ ಭಾಷಣಕಾರರಾಗಿ ಬೆಂಗಳೂರು ಜಯದೇವ ಹೃದಯ ರೋಗ ವಿಜ್ಞಾನ ಸಂಸ್ಥೆಯ ಖ್ಯಾತ ಹೃದಯರೋಗ ತಜ್ಞ ಡಾ.ಸಿ.ಎನ್.ಮಂಜುನಾಥ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರೊ.ಕೆ.ಎಸ್.ರಂಗಪ್ಪ, ಡಾ.ಹರಿ ಎಸ್. ಶರ್ಮ, ಪ್ರೊ. ಅಬ್ಬಾಸ್ ಆಲಿ ಮೇದಿ, ಕಾರ್ಯಕ್ರಮದ ಆಯೋಜಕರಾದ ಪ್ರೊ.ಎಸ್.ಎಸ್ ಮಾಲಿನಿ ಅಧ್ಯಕ್ಷರು ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಉಪಸ್ಥಿತರಿರುವರು. ದೇಶ ವಿದೇಶದ ಹೆಸರಾಂತ ವೈದ್ಯರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಮುಕ್ತಾಯ ಸಮಾರಂಭವು ಸೆ. 9 ರಂದು ಸಂಜೆ 4 ಗಂಟೆಗೆ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದು, ಜೆ.ಎಸ್.ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಹೆಚ್.ಬಸವನಗೌಡಪ್ಪ, ಡಾ.ಮೇದಾ ಆರ್.ಜಿ.ಐ.ಪಿ.ಎಮ್.ಇ.ಆರ್ ಪಾಂಡಿಚೇರಿ ಹಾಗೂ ಡಾ.ಹೆಚ್.ಪಿ.ಗುರು ಶಂಕರ್, ಕೇರಳದ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಾಸರಗೋಡು ಭಾಗವಹಿಸಲಿದ್ದಾರೆ.

ಬೀರಿಹುಂಡಿ ಗೇಟ್ ಬಳಿ ಅಬಕಾರಿ ದಾಳಿ

ಮೈಸೂರು,ಸೆ.6–ಮೈಸೂರು ಗ್ರಾಮಾಂತರ ಪ್ರದೇಶಗಳಲ್ಲಿ ಸೆ.4ರಂದು ಸಾಮೂಹಿಕ ಗೌರಿಗಣೇಶ ವಿಸರ್ಜನೆ ಪ್ರಯುಕ್ತ ಜಿಲ್ಲಾಧಿಕಾರಿಗಳು ಒಣದಿನ (Dry day) ಘೋಷಿಸಿದ ಹಿನ್ನೆಲೆಯಲ್ಲಿ ಅಬಕಾರಿ ಉಪಆಯುಕ್ತರ ಆದೇಶದ ಮೇರೆಗೆ ಮೈಸೂರು ಗದ್ದಿಗೆ ರಸ್ತೆಯ ಸುತ್ತಮುತ್ತ ಗಸ್ತು ನಡೆಸುತ್ತಿದ್ದ ವೇಳೆ ಬೀರಿಹುಂಡಿ ಗೇಟ್ ಬಳಿ ಇರುವ ಕೊಠಡಿಯೊಂದರಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಸಂಗ್ರಹಿಸಿದ್ದು ಕಂಡು ಬಂದಿದ್ದರಿಂದ ಅಬಕಾರಿ ದಾಳಿ ನಡೆಸಿ ಒಟ್ಟು71.555 ಮೌಲ್ಯದ 155.160 ಲೀ ಮದ್ಯ ಹಾಗೂ 22.750 ಲೀಟರ್ ಬಿಯರ್ ಅನ್ನು ಇಲಾಖೆ ವತಿಯಿಂದ ವಶಕ್ಕೆ ಪಡೆದು, ಮೊಕದ್ದಮೆ ದಾಖಲಿಸಲಾಗಿದೆ. ಕಾರ್ಯಾಚರಣೆಯಲ್ಲಿ ಡಿ.ಸಿ. ಸ್ಕ್ವಾಡ್‌ನ ಅಬಕಾರಿ ನಿರೀಕ್ಷಕರಾದ ಸಂತೋಷ್‌ಕುಮಾರ್, ಕಾನ್‌ಸ್ಟೇಬಲ್ ಲೋಕೇಶ್ ಹಾಗೂ ವಾಹನ ಚಾಲಕ ಮಂಜು ಪಾಲ್ಗೊಂಡಿದ್ದರು.

ಇನ್ಫೋಸಿಸ್ ಸ್ಟ್ರಿಂಗ್‌ಬೋರ್ಡ್ ವ್ಯವಸ್ಥೆಯಡಿ 12,300 ಕೋರ್ಸ್ ಉಚಿತ ವ್ಯಾಸಂಗಕ್ಕೆ ಅವಕಾಶ

6ನೇ ತರಗತಿಯಿಂದ ಪಿಹೆಚ್.ಡಿವರೆಗೆ ಕಲಿಕೆ ಲಭ್ಯ

ಮೈಸೂರು ವಿವಿ ಸೇರಿದಂತೆ ರಾಜ್ಯದ 24 ವಿವಿಗಳ ಕುಲಪತಿಗಳಿಂದ ಒಡಂಬಡಿಕೆ

ಬೆಂಗಳೂರು, ಸೆ.6(ಕೆಎಂಶಿ)–ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ವ್ಯವಸ್ಥೆಯಡಿ 12,300 ಕೋರ್ಸುಗಳನ್ನು ಉಚಿತವಾಗಿ 6ನೇ ತರಗತಿಯಿಂದ ಪಿಎಚ್.ಡಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಕಲಿಕೆ ಮಾಡಲು ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಇನ್ಫೋಸಿಸ್ ಸಂಸ್ಥೆ ಹಾಗೂ ಬೆಂಗಳೂರು, ಮಂಗಳೂರು, ಮೈಸೂರು, ಕರ್ನಾಟಕ, ತುಮಕೂರು, ಗುಲ್ಬರ್ಗ, ಕುವೆಂಪು, ಸಂಗೀತ, ಜಾನಪದ ಸೇರಿದಂತೆ ಎಲ್ಲಾ 24 ವಿ.ವಿ.ಗಳ ಕುಲಪತಿಗಳು ಒಡಂಬಡಿಕೆ ಮಾಡಿಕೊಂಡರು. ಒಡಂಬಡಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್‌ನಾರಾಯಣ್, ಈ ಕೋರ್ಸ್‌ಗಳನ್ನು ಆನ್‌ಲೈನ್‌ನಲ್ಲಿ ಕಲಿಯಬಹುದು. ಜತೆಗೆ, ಅದು 800ಕ್ಕೂ ಹೆಚ್ಚು ಶಿಕ್ಷಣ ಪರಿಣಿತರ ನೆರವನ್ನು ಉನ್ನತ ಶಿಕ್ಷಣ ಕಲಿಯುತ್ತಿರುವ ವಿದ್ಯಾರ್ಥಿಗಳು ಮತ್ತು ಬೋಧಕ ವೃಂದಕ್ಕೆ ನೀಡಲಿದೆ ಎಂದರು.

ಈ ಸಲುವಾಗಿ ಇನ್ಫೋಸಿಸ್ ಸುಮಾರು ನೂರು ಕೋಟಿ ಖರ್ಚು ಮಾಡಿರುವುದು ಮೆಚ್ಚುವಂತಹದ್ದು ಎಂದು ಹೇಳಿದರು. ಈ ಒಡಂಬಡಿಕೆಯಿಂದಾಗಿ ನಮ್ಮ ವಿವಿಗಳು ಸ್ಪ್ರಿಂಗ್‌ಬೋರ್ಡ್ ವೇದಿಕೆಯಲ್ಲಿರುವ ಕೋರ್ಸುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅವಕಾಶ ಸಿಗಲಿದೆ. ಈ ಮೂಲಕ ವಿವಿಗಳು ತಮ್ಮ ಪಠ್ಯಕ್ರಮಗಳನ್ನು ಪ್ರಸ್ತುತಗೊಳಿಸಿಕೊಳ್ಳಬೇಕು. ಬಳಿಕ, ಇವುಗಳ ಮೂಲಕ ಬೋಧಕರಿಗೆ ಹಲವು



ಉಪಯುಕ್ತ ಬೋಧನಾ ತಂತ್ರಗಳನ್ನು ಕಲಿಸಬೇಕು. ಜತೆಗೆ ಇಲ್ಲಿರುವ ಪರಿಣತರನ್ನು ಕಾಲೇಜುಗಳು ಮತ್ತು ವಿ.ವಿ.ಗಳು ತಮ್ಮ ಅಧ್ಯಯನ ಮಂಡಳಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ಒತ್ತಿ ಹೇಳಿದರು.

ಜಾಗತಿಕ ಗುಣಮಟ್ಟದ ಶಿಕ್ಷಣ ಇಂದಿನ ತುರ್ತುಗಳಲ್ಲಿ ಒಂದಾಗಿದೆ. ಇದು ಸಾಧ್ಯವಾಗಬೇಕೆಂದರೆ ದಕ್ಷ ಬೋಧಕ ವೃಂದ ಮತ್ತು ಸಮಕಾಲೀನ ಅಗತ್ಯಗಳಿಗೆ ಸ್ಪಂದಿಸುವ ಪಠ್ಯಕ್ರಮ ಅತ್ಯಗತ್ಯವಾಗಿವೆ. ಹೀಗಾಗಿ ಸರಕಾರವು ಉನ್ನತ ಶಿಕ್ಷಣ ವಲಯವನ್ನು ಅಂತಾರಾಷ್ಟ್ರೀಕರಣ ಪ್ರಕ್ರಿಯೆಗೆ ತೆರೆದಿದ್ದು, ಜಗತ್ತಿನ ಅತ್ಯುತ್ತಮ ಸಂಸ್ಥೆಗಳು ಮತ್ತು ಉದ್ಯಮಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ನಾಸ್ಕಾಂ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಸಂಸ್ಥೆಗಳೊಂದಿಗೆ ಇಂತಹ ಉಪಕ್ರಮ ಆರಂಭಿಸಲಾಗಿದ್ದು, ಆಧುನಿಕ ಕೋರ್ಸುಗಳನ್ನು ಕಲಿಕೆಯಲ್ಲಿ ಕಡ್ಡಾಯಗೊಳಿಸಲಾಗಿದೆ. ಇನ್ಫೋಸಿಸ್ ಜತೆಗಿನ ಈ ಒಡಂಬಡಿಕೆ ಮೈಲಿಗಲ್ಲಾಗಿದೆ ಎಂದು ವಿವರಿಸಿದರು.

ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ವ್ಯವಸ್ಥೆಯಿಂದ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರವರ್ಧಮಾನಕ್ಕೆ ಬರುತ್ತಿರುವ ನೂತನ ಮತ್ತು ಡಿಜಿಟಲ್ ತಂತ್ರಜ್ಞಾನದ ಕಲಿಕೆ ಸಾಧ್ಯವಾಗಲಿದೆ. ಪರಿಣಾಮಕಾರಿ ಕಲಿಕೆಗೆ ಆನ್‌ಲೈನ್ ವ್ಯವಸ್ಥೆಯನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವುದನ್ನು ಇದು ಸಾಬೀತುಪಡಿಸಲಿದೆ. ವರ್ಚುಯಲ್ ತರಗತಿಗಳನ್ನು ನಡೆಸುವ ಮೂಲಕ, ಆನ್‌ಲೈನ್‌ನಲ್ಲೇ ವಿದ್ಯಾರ್ಥಿಗಳ ಮೌಲ್ಯಮಾಪನವನ್ನೂ ಕೈಗೊಳ್ಳಬಹುದು ಎಂದು ಮಾಹಿತಿ ನೀಡಿದರು.

ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ವೇದಿಕೆಯ ಮೂಲಕ ವಿದ್ಯಾರ್ಥಿಗಳು ಉಚಿತವಾಗಿ ಜಾವಾ, ಪೈಥಾನ್, ಸಿ# ಮುಂತಾದ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್‌ಗಳು, ಬ್ಯಾಂಕಿಂಗ್, ಸ್ಪೇಸ್ ನೆಟ್‌ವರ್ಕ್, ರೀಟೇಲ್ ಟೆಲಿಕಾಂ, ಉದ್ಯಮಗಳಿಗೆ ಬೇಕಾದ ಮೂಲಭೂತ ಕೌಶಲ್ಯಗಳು ಮುಂತಾದವನ್ನು ಕಲಿಯಲು ಅವಕಾಶವಿದೆ. ಇದಲ್ಲದೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಬಿಗ್ ಡೇಟಾ, ಅನಲಿಟಿಕ್ಸ್, ಬ್ಲಾಕ್ ಚೈನ್, ಎಪಿಐ ಎಕಾನಮಿ, ಕೋಡಿಂಗ್, ಕ್ಲೌಡ್ ತಂತ್ರಜ್ಞಾನ, ಸೈಬರ್ ಸೆಕ್ಯುರಿಟಿ, ಡಿಸೈನ್ ಥಿಂಕಿಂಗ್, ಡೇಟಾ ವಿಶುಯಲೈಸೇಷನ್, ಎಡ್ಜ್ ಕಂಪ್ಯೂಟಿಂಗ್, ಡೇಟಾ ಪ್ರೈವೆಸಿ ಮತ್ತು ಸೆಕ್ಯುರಿಟಿ (ಇ–ಸುರಕ್ಷತೆ) ಇವುಗಳನ್ನು ಕೂಡ ಕಲಿಯಬಹುದು. ಇದಕ್ಕೆ ಸಂಬಂಧಿಸಿದಂತೆ ಇನ್ಫೋಸಿಸ್ ಕೂಡ ಕೋರ್ಸೆರಾ, ಸ್ಕಿಲ್‌ಸಾಫ್ಟ್, ಐಐಎಚ್‌ಟಿ, ಲರ್ನ್‌ಶಿಪ್ ಮುಂತಾದ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಿದೆ.

ಬೋಧಕರು ತಮ್ಮ ಸಂಸ್ಥೆಗಳ ಪರವಾಗಿ ಸ್ಪ್ರಿಂಗ್ ಬೋರ್ಡ್ ಮೂಲಕ ಮೈಕ್ರೋಸೈಟ್‌ಗಳನ್ನು ತೆರೆಯಬಹುದು. ಇದರಿಂದಾಗಿ ಪದವಿ ಮತ್ತು ಸ್ನಾತಕೋತ್ತರ ಹಂತದ ಕೋರ್ಸುಗಳಿಗೆ ಆಧುನಿಕ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಅತ್ಯುತ್ತಮ ಅವಕಾಶವಿದೆ ಎಂದರು.

ಕೈಗಾರಿಕೆಗಳಿಗೆ ಭೂಮಿ ಹಂಚಿಕೆ ಸರಳೀಕರಣ

ಬೆಂಗಳೂರು, ಸೆ.6(ಕೆಎಂಶಿ)–ಕೈಗಾರಿಕೆಗಳಿಗೆ ಭೂಮಿ ಹಂಚಿಕೆ ವ್ಯವಸ್ಥೆ ಸರಳೀಕರಣಗೊಳಿಸಲಾಗಿದೆ. 'ಈಸ್ ಆಫ್ ಡುಯಿಂಗ್ ಬಿಸಿನೆಸ್' ಮಾದರಿಯಲ್ಲಿ 'ಈಸ್ ಆಫ್ ಲ್ಯಾಂಡ್ ಅಲಾಟ್ ಮೆಂಟ್' ಪದ್ಧತಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೊಸ ಆದೇಶದ ಮೂಲಕ ಜಾರಿಗೊಳಿಸಿದೆ.



ಭೂಪರಿಶೋಧನಾ ಸಮಿತಿಯಲ್ಲಿ(LAC) 10 ಎಕರೆವರೆಗಿನ ಭೂಮಿ ಹಂಚಿಕೆಗೆ ಪರಿಶೀಲನೆ ಅವಶ್ಯವಿಲ್ಲ ಎಂದು ಹೊಸ ಆದೇಶ ಸ್ಪಷ್ಟಪಡಿಸಿದೆ. ಹೂಡಿಕೆ ಪ್ರಸ್ತಾವನೆಗಳು ಈಗ ನೇರವಾಗಿ ರಾಜ್ಯಮಟ್ಟದ ಸಮಿತಿಯ ಮುಂದೆ ಮಂಡನೆಯಾಗಲಿವೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಮುಂದೆ ಬರುವ ಉದ್ಯಮಿಗಳಿಗೆ ಅಗತ್ಯವಿರುವ ಭೂಮಿಯನ್ನು ಸುಲಭವಾಗಿ ನೀಡುವುದು ಇದರ ಮುಖ್ಯ ಉದ್ದೇಶ. ಸುಲಲಿತ ವ್ಯವಹಾರದಲ್ಲಿ ದೇಶದಲ್ಲೇ ಮುಂಚೂಣಿ ಸ್ಥಾನದಲ್ಲಿರುವ ರಾಜ್ಯಕ್ಕೆ ಹೆಚ್ಚು ಹೆಚ್ಚು ಉದ್ಯಮಗಳನ್ನು ಆಕರ್ಷಿಸಲು ಈ ನಿರ್ಧಾರವನ್ನು ತೆಗೆದುಕೊಂಡಿದೆ. "10 ಎಕರೆಗಿಂತ ಕಡಿಮೆ ವಿಸ್ತೀರ್ಣದ ಭೂಮಿಗಾಗಿ ಜಮೀನು ಪರಿಶೀಲನಾ ಸಮಿತಿಗೆ ಹೋಗುವ ಬದಲು ನೇರವಾಗಿ ಜಿಲ್ಲಾ ಅಥವಾ ರಾಜ್ಯಮಟ್ಟದ ಅನುಮೋದನಾ ಸಮಿತಿಯಲ್ಲಿ ಅನುಮೋದನೆ ನೀಡುವುದರಿಂದ ಪ್ರಸ್ತಾವನೆಗಳಿಗೆ ತ್ವರಿತವಾಗಿ ಅನುಮೋದನೆ ದೊರೆಯುತ್ತದೆ. ಇದರಿಂದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮದಾರರಿಗೆ ಅನುಕೂಲವಾಗುವುದು" ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ.ಮುರುಗೇಶ ಆರ್.ನಿರಾಣಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬರುವ ನವೆಂಬರ್ 2, 3 ಮತ್ತು 4ರಂದು ನಡೆಯಲಿರುವ ಮಹತ್ವಾಕಾಂಕ್ಷೆಯ ಜಾಗತಿಕ ಹೂಡಿಕೆದಾರರ ಸಭೆ (ಜಿಐಎಂ) ಪೂರ್ವಭಾವಿಯಾಗಿ ಈ ನಿರ್ಧಾರವನ್ನು ಇಲಾಖೆ ಕೈಗೊಂಡಿದೆ. ಹತ್ತು ಎಕರೆಗಿಂತ ಹೆಚ್ಚಿನ ವಿಸ್ತೀರ್ಣ ಮತ್ತು ರೂ. 15 ಕೋಟಿಯಿಂದ ರೂ.500 ಕೋಟಿವರೆಗಿನ ಹೂಡಿಕೆಯ ಪ್ರಸ್ತಾವನೆಗಳನ್ನು ಭೂ ಲೆಕ್ಕ ಪರಿಶೋಧನಾ ಸಮಿತಿಯ ಮುಂದೆ ಮಂಡಿಸಬಹುದು. ಇಲ್ಲಿ ತೆರವುಗೊಳಿಸಿದ ನಂತರ, ಅಂತಿಮ ಅನುಮೋದನೆಗಾಗಿ ರಾಜ್ಯಮಟ್ಟದ ಏಕಗವಾಕ್ಷಿ ತೆರವು ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ ಎಂದಿದ್ದಾರೆ.

ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಕದಸಂಸ ಪ್ರತಿಭಟನೆ



ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಸೆ.6(ಆರ್‌ಕೆಬಿ)–ಚಿತ್ರದುರ್ಗದ ಮುರುಘಾ ಮಠದ ಸ್ವಾಮೀಜಿಯಿಂದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ನಿಷ್ಪಕ್ಷಪಾತ ತನಿಖೆಗಾಗಿ ಪರ ರಾಜ್ಯದ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಸಂಚಾಲಕ ಭುಗತಹಳ್ಳಿ ಕೆ.ಮಣಿಯಯ್ಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪರ ರಾಜ್ಯದ ಪ್ರಾಮಾಣಿಕ, ದಕ್ಷ ನ್ಯಾಯಾಧೀಶರಿಂದ ವಿಶೇಷ ತನಿಖಾ ದಳ ನೇಮಕ ಮಾಡಿ ನ್ಯಾಯಾಂಗ ತನಿಖೆ ನಡೆಸಬೇಕು. ನ್ಯಾಯಾಧೀಶರ ತಂಡದಲ್ಲಿ ಮಹಿಳಾ ಸಂಘಟನೆ ಮತ್ತು ಒಡನಾಡಿ ಸಂಸ್ಥೆಯ ಸದಸ್ಯರನ್ನು ಒಳಗೊಂಡ ಪ್ರಾಮಾಣಿಕ ಅಧಿಕಾರಿಗಳನ್ನು ನಿಯೋಜಿಸಬೇಕು. ಮಠದ ಸುಪರ್ದಿಯಲ್ಲಿರುವ ಶಾಲಾ ವಿದ್ಯಾರ್ಥಿನಿಯರನ್ನು ಸರ್ಕಾರ ವಶಕ್ಕೆ ಪಡೆಯಬೇಕು. ರಾಜ್ಯ ಸರ್ಕಾರದಿಂದ ವಿವಿಧ ಮಠಗಳಿಗೆ ನೀಡುವ ಸಾರ್ವಜನಿಕ ಹಣವನ್ನು ಸ್ಥಗಿತಗೊಳಿಸಬೇಕು. ಸಂತ್ರಸ್ತ ಹೆಣ್ಣು ಮಕ್ಕಳು ಮತ್ತು ಅವರ ಕುಟುಂಬ ಹಾಗೂ ಒಡನಾಡಿ ಸ್ವಯಂ ಸೇವಾ ಸಂಸ್ಥೆಗೆ ಸೂಕ್ತ ರಕ್ಷಣೆ, ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು. ನಂತರ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ಶಶಿಕಾಂತ್ ಸೋಸಲೆ, ರಾಜಶೇಖರ ಕೋಟೆ, ಜಯಲಕ್ಷ್ಮಿ, ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು

ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣ

ಬಿಡುಗಡೆಗೊಂಡ 11 ಮಂದಿಯ ಶಿಕ್ಷೆ ಮುಂದುವರೆಸಲು ಒತ್ತಾಯ

ಮೈಸೂರು,ಸೆ.6(ಪಿಎಂ)–ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ 7 ಮಂದಿ ಹತ್ಯೆ ಮಾಡಿದ್ದ ಪ್ರಕರಣ ಸಂಬಂಧ ಜೀವಾವಧಿ



ಶಿಕ್ಷೆಗೆ ಒಳಗಾಗಿದ್ದ ಎಲ್ಲಾ 11 ಮಂದಿಯನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ಕ್ರಮ ಖಂಡಿಸಿರುವ ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ, ಎಲ್ಲಾ 11 ಮಂದಿಯ ಶಿಕ್ಷೆಯನ್ನು ಮುಂದುವರೆಸಬೇಕೆಂದು ಒತ್ತಾಯಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ, 2002ರಲ್ಲಿ ಗುಜರಾತ್‌ನಲ್ಲಿ ನಡೆದ ಕೋಮು ಗಲಭೆ ಸಂದರ್ಭದಲ್ಲಿ ಈ ಹಿಂಸಾಚಾರ ನಡೆಸಲಾಗಿದೆ. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ 11 ಮಂದಿಯನ್ನು ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಸನ್ನಡತೆ ಹೆಸರಿನಲ್ಲಿ ಬಿಡುಗಡೆ ಮಾಡಲಾಗಿದೆ. ಆ ಮೂಲಕ ಸರ್ಕಾರವೇ ಅಪರಾಧ ಮಾಡಿದಂತೆ ಆಗಿದೆ. ಕೂಡಲೇ ಈ ಎಲ್ಲಾ 11 ಮಂದಿಯ ಶಿಕ್ಷೆ ಮುಂದುವರೆಸಲು ಕ್ರಮ ವಹಿಸಬೇಕು. ಜೊತೆಗೆ ಇವರಿಗೆ ಮರಣ ದಂಡನೆ ವಿಧಿಸಬೇಕು ಎಂದು ಆಗ್ರಹಿಸಿದರು.

ಮುರುಘಾ ಶರಣರ ವಿರುದ್ಧದ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಆ ಮೂಲಕ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಅವರ ವಿರುದ್ಧ ಕೇಳಿ ಬಂದಿರುವ ಆರೋಪ ಸಾಬೀತು ಆದಲ್ಲಿ ಅವರಿಗೆ ಮರಣ ದಂಡನೆ ವಿಧಿಸಬೇಕು ಎಂದು ಒತ್ತಾಯಿಸಿದರಲ್ಲದೆ, ಸಂತ್ರಸ್ತರಿಗೆ ನೆರವಾದ ಒಡನಾಡಿ ಸಂಸ್ಥೆಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು. ವೇದಿಕೆ ಮುಖಂಡರಾದ ಬಂಗವಾದಿ ನಾರಾಯಣಪ್ಪ, ಸತೀಶ್ ಸುದ್ದಿಗೋಷ್ಠಿಯಲ್ಲಿದ್ದರು.

ಸೆ.26ರಂದು ವಿಧಾನಸೌಧ ಚಲೋ

ಕಬ್ಬಿಗೆ ನ್ಯಾಯಯುತ ದರ ನಿಗದಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಒತ್ತಾಯ

ಮೈಸೂರು, ಸೆ.6 (ಪಿಎಂ)– ಕಬ್ಬಿಗೆ ನ್ಯಾಯಯುತ ದರ ನಿಗದಿ ಮಾಡಬೇಕು ಹಾಗೂ ಕೇಂದ್ರ ಸರ್ಕಾರ, ವಿದ್ಯುತ್ ಖಾಸಗೀಕರಣ ಮಸೂದೆ ಕೈಬಿಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಸೆ.26ರಂದು ವಿಧಾನಸೌಧ ಚಲೋ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯ ಕುವೆಂಪು ಉದ್ಯಾನವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನ ಕಬ್ಬಿನ ಎಫ್‌ಆರ್‌ಪಿ ದರವನ್ನು ಟನ್‌ಗೆ 3,050 ರೂ. ನಿಗದಿ ಮಾಡಿರುವುದು ನ್ಯಾಯಸಮ್ಮತವಲ್ಲ. ಇದನ್ನು ವಿರೋಧಿಸಿ ಪುನರ್ ಪರಿಶೀಲನೆಗಾಗಿ ಒತ್ತಾಯಿಸಿ ತಾಲೂಕು, ಜಿಲ್ಲಾಧಿಕಾರಿಗಳ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು. ಅಲ್ಲದೆ, ಆ.12ರಂದು ರಾಜ್ಯಾದ್ಯಂತ ರಸ್ತೆತಡೆ ಚಳವಳಿ ನಡೆಸಲಾಯಿತು. ಆದರೂ ಈ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಕ್ರಮ ವಹಿಸದೇ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರ ವಿದ್ಯುತ್ ಖಾಸಗೀಕರಣಕ್ಕಾಗಿ ಸಂಸತ್ತಿನಲ್ಲಿ ಮಸೂದೆ ಮಂಡಿಸಿದೆ. ಈ ಮಸೂದೆ ಕಾಯ್ದೆಯಾಗಿ ಜಾರಿಯಾದರೆ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಮೂಲಕ ರೈತರು ವ್ಯವಸಾಯ ಮಾಡಲಾಗದ ಪರಿಸ್ಥಿತಿ ಉದ್ಭವಿಸಲಿದೆ. ಕೇಂದ್ರ ಸರ್ಕಾರದ ಈ ನಡೆಯನ್ನು ಈಗಾಗಲೇ ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಪಂಜಾಬ್, ಕೇರಳ ಹಾಗೂ ಬಿಹಾರ ರಾಜ್ಯ ಸರ್ಕಾರಗಳು ವಿರೋಧಿಸಿವೆ. ಅಂತೆಯೇ ನಮ್ಮ ರಾಜ್ಯ ಸರ್ಕಾರವೂ ವಿರೋಧ ವ್ಯಕ್ತಪಡಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಅತಿವೃಷ್ಟಿಯಿಂದ ಬೆಳೆ ನಷ್ಟದಿಂದ ರೈತರು ಕಂಗಾಲಾಗಿದ್ದು, ಬೆಳೆ ಸಾಲ ಪಾವತಿಸಲು ಕಷ್ಟಸಾಧ್ಯವಾಗಿದೆ. ಹಾಗಾಗಿ



ರೈತರ ಸಾಲವನ್ನು ಒಂದು ವರ್ಷ ನವೀಕರಣ ಮಾಡಿ ಇರುವ ಸಾಲದ ಮೇಲೆ ಶೇ.25ರಷ್ಟು ಹೆಚ್ಚುವರಿಯಾಗಿ ಸಾಲ ನೀಡುವ ಯೋಜನೆಯನ್ನು ಕೂಡಲೇ ಜಾರಿಗೆ ತರಬೇಕು. ರೈತರಿಗೆ ಕೃಷಿ ಸಾಲ ನೀಡುವಾಗ, ಬ್ಯಾಂಕುಗಳು ಸಿಬಿಲ್ ಸ್ಕೋರ್ ಪರಿಗಣಿಸುವ ಪರಿಪಾಠ ಕೈಬಿಡಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಮಳೆಯಿಂದ ಹಾನಿ, ಅನಾಹುತಗಳು ಸಂಭವಿಸಿದ್ದರೂ ಸರ್ಕಾರದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹಳ್ಳಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಹೆಚ್‌ಡಿ ಕೋಟೆ ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ 16 ಮನೆಗಳು ಮುಳುಗಡೆಯಾಗಿವೆ. ಈ ಸಂಬಂಧ ಗ್ರಾಮಸ್ಥರು ದೂರು ನೀಡಿದ್ದರೂ ಯಾವುದೇ ಪರಿಹಾರದ ಕ್ರಮ ಕೈಗೊಂಡಿಲ್ಲ. ಅತಿವೃಷ್ಟಿಯಿಂದ ರಾಜ್ಯದಲ್ಲಿ 7,600 ಕೋಟಿ ರೂ.ನಷ್ಟು ಬೆಳೆ ನಷ್ಟ ಉಂಟಾಗಿದೆ ಎಂದು ಸರ್ಕಾರ ಅಂದಾಜಿಸಿದೆ. ಆದರೆ ಪರಿಹಾರಕ್ಕೆ ಕೇವಲ 250 ಕೋಟಿ ರೂ. ಬಿಡುಗಡೆಗೆ ಮುಂದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಂಘದ ಮುಖಂಡರಾದ ಪಿ.ಸೋಮಶೇಖರ್, ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಬರಡನಪುರ ನಾಗರಾಜ್, ಸಿದ್ದೇಶ್, ಮಾದಪ್ಪ, ಮಹದೇವಸ್ವಾಮಿ, ದೇವಮಣಿ ಸುದ್ದಿಗೋಷ್ಠಿಯಲ್ಲಿದ್ದರು.

ಬಂಧಿತ ಮುರುಘಾ ಶ್ರೀಗಳ ಸಮರ್ಥನೆಗೆ ನಿಂತಿರುವ ಮಾದಾರ ಚೆನ್ನಯ್ಯ ಸ್ವಾಮೀಜಿ ಪೀಠ ತ್ಯಾಗಕ್ಕೆ ಆದಿಜಾಂಬವ ಸಂಘ ಆಗ್ರಹ

ಮೈಸೂರು,ಸೆ.6(ಆರ್‌ಕೆಬಿ)– ಲೈಂಗಿಕ ದೌರ್ಜನ್ಯದ ಆರೋಪ ಹೊತ್ತು ಪೋಕ್ಸೋ ಕಾಯ್ದೆ ಅಡಿಯಲ್ಲಿ ಚಿತ್ರದುರ್ಗದ ಮುರುಘಾ ಶ್ರೀಗಳು ಬಂಧಿತರಾಗಿದ್ದಾರೆ. ಆದರೆ ಆದಿಜಾಂಬವ ಪೀಠದ ಮಾದಾರ ಚನ್ನಯ್ಯ ಸ್ವಾಮೀಜಿಗಳು ಅವರ ಸಮರ್ಥನೆಗೆ ನಿಂತಿರುವುದು ಸರಿಯಲ್ಲ. ಹೀಗಾಗಿ ಸ್ವಾಮೀಜಿ ಪೀಠ ತ್ಯಾಗ ಮಾಡಬೇಕೆಂದು ರಾಜ್ಯ ಆದಿಜಾಂಬವ ಸಂಘ ಆಗ್ರಹಿಸಿದೆ.



ಆದಿಜಾಂಬವ ಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ


ಈ ಕುರಿತು ಜಿಲ್ಲಾ ಪತ್ರಕರ್ತರ ಭವನದಲ್ಲಿ ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಧ್ಯಕ್ಷ ಎಡತೊರೆ ಎಂ.ನಿಂಗರಾಜು, ಆದಿಜಾಂಬವ ಸಮಾಜದ ಹೆಸರಿನಲ್ಲಿ ಪೀಠಸ್ಥರಾಗಿರುವ ಮಾದಾರ ಚನ್ನಯ್ಯ ಸ್ವಾಮೀಜಿ ಮೊದಲು ವಿಚಾರವಾದಿಯಂತೆ ಹಾಗೂ ಸಮಾಜ ಚಿಂತಕರಾಗಿ ನಡೆದುಕೊಳ್ಳುವವರಂತೆ ಇದ್ದರು. ಆದರೆ ಈಗ ಆದಿಜಾಂಬವ ಸಮಾಜದ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಅಭಿವೃದ್ಧಿಯ ಕಾರ್ಯ ಚಟುವಟಿಕೆ ನಡೆಸದೇ ಮಠದ ಕಟ್ಟಡವನ್ನು ಆರ್‌ಎಸ್‌ಎಸ್‌ನವರಿಗೆ ನೀಡಿರುವುದು ಖಂಡನೀಯ. ಬಸವಣ್ಣನವರು ವೈದಿಕಶಾಹಿ ವಿರುದ್ಧ ಸಿಡಿದೆದ್ದರೆ, ಈ ಸ್ವಾಮೀಜಿ ವೈದಿಕಶಾಹಿಗೆ ಶರಣಾಗಿದ್ದಾರೆ. ಅಲ್ಲದೆ, ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮುರುಘಾ ಶ್ರೀಗಳ ಬೆಂಬಲಕ್ಕೆ ನಿಂತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಇನ್ನು, ಆದಿಜಾಂಬವ ಸಮುದಾಯ ಮತ್ತು ಹಿಂದುಳಿದ ಸಮಾಜದ ಹೆಣ್ಣು ಮಕ್ಕಳೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಹೀಗಿದ್ದರೂ ಸ್ವಾಮೀಜಿ ಈ ಹೆಣ್ಣು ಮಕ್ಕಳಿಗೆ ನೈತಿಕ ಸ್ಥೈರ್ಯ ತುಂಬುವ ಬದಲು ಆರೋಪಿ ಮುರುಘಾ ಶ್ರೀ ಪರ ನಿಂತು ಸಮುದಾಯಕ್ಕೆ ದ್ರೋಹ ವೆಸಗಿದ್ದಾರೆ. ಆದ್ದರಿಂದ ಮಾದಾರ ಚನ್ನಯ್ಯ ಸ್ವಾಮೀಜಿ ತಾವೇ ಆದಿಜಾಂಬವ ಪೀಠದಿಂದ ಕೆಳಗಿಳಿಯಬೇಕು. ಇಲ್ಲದಿದ್ದರೆ ಸಮುದಾಯದವರೇ ಕೆಳಗಿಳಿಸಬೇಕಾಗುತ್ತದೆ ಎಂದು ನಿಂಗರಾಜು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ನಿಟ್ರೆ ಮಹದೇವಯ್ಯ, ಬಿ.ಕುಮಾರ್, ಮಧುವನಹಳ್ಳಿ ಲೋಕೇಶ್ ಉಪಸ್ಥಿತರಿದ್ದರು.

ಸ್ವಾಮೀಜಿ ವಿರುದ್ಧದ ಹೇಳಿಕೆಗೆ ಖಂಡನೆ

ಮೈಸೂರು,ಸೆ.6(ಪಿಎಂ)– ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಪೀಠ ತೊರೆಯುವಂತೆ ಆಗ್ರಹಿಸಿದ್ದ ರಾಜ್ಯ ಆದಿಜಾಂಬವ ಸಂಘದ ಪದಾಧಿಕಾರಿಗಳ ವಿರುದ್ಧ ಕಿಡಿಕಾರಿರುವ ಮಾದಿಗ ಸಂಘಟನೆಗಳ ಒಕ್ಕೂಟ, ಮಾದಾರ ಚೆನ್ನಯ್ಯ ಶ್ರೀಗಳ ಬಗ್ಗೆ ಹಗುರವಾಗಿ ಮಾತನಾಡದಂತೆ ಎಚ್ಚರಿಕೆ ನೀಡಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಮುಖಂಡ ಡಾ.ಆನಂದಕುಮಾರ್, ಅಪ್ರಾಪ್ತರಿಗೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಹೊತ್ತಿರುವ ಮುರುಘಾ ಮಠದ ಶ್ರೀಗಳ ಬೆಂಬಲಿಸಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿಕೆ ನೀಡಿದ್ದಾರೆ ಎಂದು ರಾಜ್ಯ ಆದಿಜಾಂಬವ ಸಂಘದ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಆರೋಪಿಸಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಅಲ್ಲದೆ, ಮಾದಾರ ಚನ್ನಯ್ಯ ಶ್ರೀಗಳು ಪೀಠ ತ್ಯಜಿಸಲು ಹೋರಾಟ ಮಾಡುತ್ತೇವೆ ಎಂದು ಹೇಳಿಕೆ ನೀಡಿದ್ದಾರೆ. ಇವರು ಸಮುದಾಯದವರೇ ಆದರೂ ಮಾದಾರ ಚನ್ನಯ್ಯ ಗುರುಪೀಠ ಹಾಗೂ ಸಮುದಾಯದೊಂದಿಗೆ ಒಡನಾಟ ಹೊಂದಿಲ್ಲ. ಮಾದಾರ ಚನ್ನಯ್ಯ ಶ್ರೀಗಳನ್ನು ಗುರಿಯಾಗಿಸಿ ಇದೇ ರೀತಿ ವರ್ತಿಸಿದರೆ ಶ್ರೀಗಳ ಭಕ್ತರು ಇವರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಬಸವಮೂರ್ತಿ ಮಾದಾರ ಚೆನ್ನಯ್ಯಸ್ವಾಮಿ ಯುವಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಸಿದ್ದರಾಜು, ಒಕ್ಕೂಟದ ಮುಖಂಡರಾದ ಎನ್.ಆರ್.ಚಂದ್ರಶೇಖರ್, ಶಿವಮೂರ್ತಿ ಮತ್ತಿತರರು ಗೋಷ್ಠಿಯಲ್ಲಿದ್ದರು.



ನಕ್ಕರೆ ಅದೇ ಸ್ವರ್ಗ

ಅಪ್ಪ : (ಬೆಡ್ ಲ್ಯಾಂಪ್ ತಗೊಂಡು ಬಾ ಎಂದು ಹೇಳಿ ಹತ್ತು ನಿಮಿಷದ ನಂತರ ಬರೀಗೈಲಿ ಬಂದ ಮಗನಿಗೆ) ಯಾಕೋ ಹಾಗೆ ಬಂದೆ ? ಇಲ್ಲಿಲ್ವಾ?

ಮಗ : ಅಪ್ಪ ಲ್ಯಾಂಪ್ ಸಿಂಗಲ್ ಬೆಡ್ಡಿಗೋ ಡಬಲ್ ಬೆಡ್ಡಿಗೋ ಹೇಳ್ಲಿಲ್ಲಾ!

ಮೈಸೂರು ಮಿತ್ರ

ಬುಧವಾರ, 7 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಮ್ಮೆಲೆ ದುಡುಕಬಾರದು. ಆವೇಶ ಆಪತ್ತುಗಳ ಮೂಲ –ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಂಬಲಿಯಂತ ಊಟವಿಲ್ಲ, ಕಂಬಳಿಯಂತ ಹೊದಿಕೆಯಿಲ್ಲ...

ನಿಮ್ಮ ಪತ್ರಗಳು

ಶಿಕ್ಷಕರ ಶೋಷಣೆ ಸರಿಪಡಿಸಲು ಮನವಿ

ಮಾನ್ಯರೇ,

ಪ್ರತಿ ವರ್ಷದ ಸೆಪ್ಟೆಂಬರ್ 5, ಶಿಕ್ಷಕರ ದಿನಾಚರಣೆ. ಇದರ ಅರ್ಥ ಶಿಕ್ಷಕರನ್ನು ಅಥವಾ ಗುರುವನ್ನು ಗೌರವಿಸುವುದು. ಗುರುವಿನ ಮಹತ್ವವನ್ನು ಮುಂದಿನ ತಲೆಮಾರುಗಳಿಗೆ ತಿಳಿಯಪಡಿಸುವುದಕ್ಕೆ, ಪೂಜ್ಯ ಭಾವನೆಯಿಂದ ನೆನೆಯುವುದಕ್ಕಾಗಿ ಶಿಕ್ಷಣ ತಜ್ಞ ಡಾ.ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನವನ್ನು "ಶಿಕ್ಷಕರ ದಿನಾಚರಣೆ" ಆಚರಿಸಲಾಗುತ್ತಿದೆ.

ಗುರು ಎಂದರೆ ಬೆಳಕು ಶಿಕ್ಷಣ ಎಂದರೆ ಶಿಸ್ತು, ಮಾರ್ಗ, ಮಾನವೀಯತೆ, ಪ್ರಗತಿ, ಅಭಿವೃದ್ಧಿ, ನಡೆ, ನುಡಿ, ದೇಶ–ವಿದೇಶ ಹೀಗೆ ಎಲ್ಲವು ಎಂತಲೇ ಹೇಳಬಹುದು. ಇಂತಹ ಸ್ಥಾನವನ್ನು ಸ್ವೀಕರಿಸಿ ಇವೆಲ್ಲವನ್ನು ಕಲ್ಪಿಸಿಕೊಡುವ ಪ್ರಸ್ತುತ ಶಿಕ್ಷಕ–ಶಿಕ್ಷಕಿಯರ ಸ್ಥಿತಿಗತಿಗಳ ಬಗ್ಗೆ ಚಿಂತಿಸಬೇಕಾಗಿದೆ. ಶಿಕ್ಷಕ ತರಬೇತಿ ಪಡೆದ ಸಾವಿರಾರು ಮಂದಿಯಲ್ಲಿ ಸರ್ಕಾರಿ ನೇಮಕಾತಿಯ ಹಲವು ಅಂಕುಶಗಳ ನಿಯಮಾವಳಿಗಳನ್ನು ಜಯಿಸಿ ನೇಮಕವಾಗುವವರು ನೂರಾರು ಮಂದಿ ಮಾತ್ರ. ಇನ್ನುಳಿದವರಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳೆಡೆಗೆ ಮುಖ ಮಾಡುತ್ತಾರೆ. ಇಲ್ಲಿಯೂ ಸಹ ಅವರ ಮರ್ಜಿಗೊಳಪಟ್ಟರೆ ಮಾತ್ರ ಉದ್ಯೋಗ. ಅದೂ ಕೆಲಸ ಹೆಚ್ಚು ಕೂಲಿ ಕಡಿಮೆ. ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸಿ ಹಲವು ಶಿಕ್ಷಣ ಸಂಸ್ಥೆಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿ ನಿಯಮ ಬೈಲಾಗಳನ್ನು ಪಕ್ಕಕ್ಕಿಟ್ಟು ಸಂಸ್ಥೆಯಲ್ಲಿ ಮಾಡಬೇಕಾದ ಬೇರೆ ನೌಕರರ ಕೆಲಸಗಳನ್ನು ಶಿಕ್ಷಕ–ಶಿಕ್ಷಕಿಯರಿಂದಲೇ ಮಾಡಿಸುತ್ತಾರೆ. ಇದಕ್ಕೆ ಪ್ರತಿಫಲವಾಗಿ ಪಡೆಯುವ ವೇತನ ಕನಿಷ್ಠ ವೇತನಕ್ಕಿಂತಲು ಕಡಿಮೆ. ಇದರಲ್ಲಿ ತಿಂಗಳ ಜೀವನ ನಿರ್ವಹಣೆ ದುಸ್ತರವಾಗಿದೆ. ತಿಂಗಳಿಗೊಮ್ಮೆ ಈ ಅಲ್ಪ ವೇತನ ಪಡೆಯಬೇಕಾದರೆ ಅದರ ಪರಿಪಾಟಲು ಅಷ್ಟಿಷ್ಟಲ್ಲ. ಸಂಸ್ಥೆಗಳ ಸ್ವಯಂ ನಿಯಮ ಹಲವು, ಅದರಲ್ಲೊಂದು ಉದಾಹರಣೆ ಹೀಗಿದೆ ನೋಡಿ ವೃತ್ತಿಗೆ ಸೇರುವಾಗ 12 ತಿಂಗಳುಗಳ ಖಾಲಿ ಚೆಕ್ಕನ್ನು ಸಹಿ ಮಾಡಿಕೊಡಬೇಕು. ತಿಂಗಳ ನಂತರ ವೇತನ 24500/–ರೂ.ಗಳನ್ನು ಖಾತೆಗೆ ಹಾಕಿ ಸಹಿ ಮಾಡಿಸಿದ ಚೆಕ್‌ನಿಂದ 20000 ರೂ. ಗಳನ್ನು ತಕ್ಷಣ ವಾಪಸ್ಸು ಪಡೆಯುತ್ತಾರೆ. ಅಲ್ಲಿಗೆ ಇವರ ವೇತನ ಬರಿ 4500/–ರೂಗಳು ಮಾತ್ರ! ಅಥವಾ ನಗದು 20000 ರೂ.ಗಳನ್ನು ಕೈಯಿಂದ ಕೊಟ್ಟರೆ ಖಾತೆಗೆ ಒಟ್ಟು 24500/–ರೂ.ಗಳು ಜಮೆ ಯಾಗುತ್ತದೆ. ಶಿಕ್ಷಕರಿಗಾಗುವ ಇಂತಹ ಶೋಷಣೆಗಳನ್ನು, ತಾರತಮ್ಯಗಳನ್ನು ಸರಿಪಡಿಸುವ ಸಲುವಾಗಿಯೇ ಶಿಕ್ಷಕರನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇವರಾದರೂ ಇತ್ತ ಗಮನಿಸಬಾರದೇ? ಪದವೀಧರ ಶಿಕ್ಷಕರೇ ಇಂತಹ ಯಾತನೆಯನ್ನು ಅನುಭವಿಸುತ್ತಿದ್ದಾರೆ. ವಿಧಿಯಿಲ್ಲದೇ ಜೀವನ ದೂಡುತ್ತಿದ್ದಾರೆ.

–ಕಣ್ಣನ್ ಹೆಬ್ಬಸೂರು, ಕನ್ನಡ ಬೋಧಕರು, ಚಾಮರಾಜನಗರ.

ದಸರಾದಲ್ಲಿ ಚುಟುಕು ಕವಿಗೋಷ್ಠಿ ಇರಲಿ

ಮಾನ್ಯರೆ,

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಜನಪ್ರಿಯ ಕಾರ್ಯಕ್ರಮಗಳಲ್ಲಿ ಕವಿಗೋಷ್ಠಿ ಒಂದು. ಈ ಹಿಂದೆ ಎಲ್ಲ ಚಿಗುರು ಕವಿಗೋಷ್ಠಿ, ದಸರಾ ಕವಿಗೋಷ್ಠಿ, ಅರಳು ಕವಿಗೋಷ್ಠಿ, ಚುಟುಕು ಕವಿಗೋಷ್ಠಿ, ಹಾಸ್ಯಮೇಳ ಇರುತ್ತಿದ್ದವು. ಇವುಗಳಲ್ಲಿ ಚುಟುಕು ಕವಿಗೋಷ್ಠಿ ಪ್ರಮುಖವಾದ ಆಕರ್ಷಣೆಯ ಗೋಷ್ಠಿಯಾಗಿತ್ತು. ಈ ಬಾರಿ ದಸರಾ ಕಾವ್ಯ ಸಂಭ್ರಮ ಶೀರ್ಷಿಕೆಯಡಿ ಪ್ರಧಾನ ಕವಿಗೋಷ್ಠಿ, ಹಾಸ್ಯ ಕವಿಗೋಷ್ಠಿ, ಯುವ ಕವಿಗೋಷ್ಠಿ, ಚಿಗುರು ಕವಿಗೋಷ್ಠಿ ಸೆ.28 ರಿಂದ ಅ.3 ರವರೆಗೆ ನಡೆಯಲಿದೆ ಎಂದು ಕವಿಗೋಷ್ಠಿ ಸಮಿತಿಯವರು ತಿಳಿಸಿದ್ದಾರೆ.

ಚುಟುಕು ಕವಿಗೋಷ್ಠಿಯನ್ನು ರದ್ದು ಮಾಡಲಾಗಿದೆ. ಇದರಿಂದ ಚುಟುಕು ಪ್ರಿಯರಿಗೆ ಬಹಳ ನಿರಾಸೆಯಾಗಿದೆ. ಚುಟುಕು ಕವಿಗೋಷ್ಠಿ ಆರಂಭಿಸುವುದರಿಂದ ದಸರೆಗೂ ಕಳೆ ಬರಲಿದೆ. ಚುಟುಕು ಹೆಸರಿಗೆ ತಕ್ಕಂತೆ ಚುಟುಕಾಗಿದ್ದರೂ ಅದರ ಮಹತ್ವ ಬಹಳ ದೊಡ್ಡದು. ಚುಟುಕು ಕೇಳುಗರಿಗೆ ಖುಷಿ ಕೊಡುವ ಜತೆಗೆ ಕೇಳುಗರನ್ನು ಚಿಂತೆಗೆ ಒಳಪಡಿಸುತ್ತದೆ. ಇಂತಹ ಚುಟುಕು ಕವಿಗೋಷ್ಠಿಯನ್ನು ರದ್ದು ಮಾಡಿರುವುದು ಚುಟುಕು ಸಾಹಿತಿಗಳಿಗೆ ಮತ್ತು ಚುಟುಕು ಪ್ರಿಯರಿಗೆ ಬಹಳ ನಿರಾಸೆಯಾಗಿದೆ. ಚುಟುಕು ಸಾಹಿತ್ಯದಲ್ಲಿ ಬದುಕಿನ ಲಾಲಿತ್ಯವಿದೆ. ಆದ್ದರಿಂದ ದಯವಿಟ್ಟು ಕವಿಗೋಷ್ಠಿ ಸಮಿತಿಯವರು ಈ ದಸರಾ ಮಹೋತ್ಸವದಲ್ಲಿ ಚುಟುಕು ಕವಿಗೋಷ್ಠಿಯನ್ನು ಏರ್ಪಡಿಸಲಿ.

–ಅಹಲ್ಯ ಸಿ.ನಾ.ಚಂದ್ರ, ಜನತಾನಗರ, ಮೈಸೂರು

ಕಳಪೆ ಕಾಮಗಾರಿಯಿಂದ ತೊಂದರೆ

ಮಾನ್ಯರೇ,



ಮೈಸೂರಿನ ಗಾಂಧಿನಗರದ ಹಲವಾರು ಗಲ್ಲಿಗಳಲ್ಲಿ ಕಾಮಗಾರಿ ಕಳಪೆಯಾಗಿದೆ. ಹಲವಾರು ಬಾರಿ ಕಾಮಗಾರಿ ಮಾಡಿದರೂ ಸಹ ಸರಿಯಾದ ರೀತಿಯಲ್ಲಿ ಮಾಡದೆ ಇರುವುದು ನಗರ ಪಾಲಿಕೆ ಸದಸ್ಯರ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಇದರಿಂದ ಹಿರಿಯರಿಗೆ ಮತ್ತು ಮಕ್ಕಳಿಗೆ ತೊಂದರೆಯಾಗುತ್ತಿದೆ. ಮಕ್ಕಳಿಗೆ ಆಟವಾಡಲು ಮನೆಯಿಂದ ಹೊರಗೆ ಕಳುಹಿಸುವುದಕ್ಕೂ ಯೋಚನೆ ಮಾಡುವಂತಾಗಿದೆ ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭಿಸಿ ಮುಂದೆ ಯಾವುದೇ ರೀತಿಯ ತೊಂದರೆ ಆಗದಂತೆ ಎಚ್ಚರ ವಹಿಸಿ.

– ವರ್ಷಿತಾ.ಎಸ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ಸ್ವಾತಂತ್ರ್ಯ ಹೋರಾಟಗಾರರು, ಯೋಧರಿಂದ ದಸರಾ ಉದ್ಘಾಟನೆಯಾಗಲಿ

ಮಾನ್ಯರೆ,

ವಿಶ್ವ ವಿಖ್ಯಾತ ದಸರಾ ಆರಂಭಕ್ಕೆ ಕೆಲವೇ ದಿನಗಳು ಉಳಿದಿವೆ. ದಸರಾ ಉದ್ಘಾಟನೆಗೆ ಹಲವಾರು ಕಲಾವಿದರನ್ನು ಕರೆಸಿ ಉದ್ಘಾಟನೆಯನ್ನು ಮಾಡಿಸುತ್ತಾರೆ. (ನಟ ನಟಿಯರು, ಸಾಹಿತಿಗಳು, ಕ್ರೀಡಾಪಟುಗಳು, ಇತ್ಯಾದಿ) ಆದರೆ 75 ವರ್ಷ ತುಂಬಿದ ಸ್ವಾತಂತ್ರ್ಯೋತ್ಸವ ಅಂಗವಾಗಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೋರಾಡಿದವರು ಹಾಗೂ ದೇಶ ಕಾಯುವ ಸೈನಿಕರುಗಳನ್ನು ಕರೆಸಿ ದಸರಾ ಉದ್ಘಾಟನೆ ಮಾಡಿದರೆ 75 ವರ್ಷ ಪೂರೈಸಿರುವ ಸ್ವಾತಂತ್ರ್ಯಕ್ಕೆ ಬೆಲೆ ಕಟ್ಟಿದಂತಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅವರ ಅನುಭವದ ಮಾತುಗಳು ಜನರಿಗೆ ಮತ್ತಷ್ಟು ಸ್ಫೂರ್ತಿಯಾಗುತ್ತದೆ. ಸಾರ್ವಜನಿಕರಿಗೆ ಅವರ ಮೇಲೆ ಅಭಿಮಾನ ಹೆಚ್ಚಾಗುತ್ತದೆ. ಎಲ್ಲರಿಗೂ ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮೂಡುತ್ತದೆ. ಈ ದಸರಾ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ದೇಶ ಕಾಯುವ ಸೈನಿಕರಿಂದ ದಸರಾ ಉದ್ಘಾಟನೆಯಾಗಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಮೂರು ಗುಣಗಳು

ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯವು ಪ್ರಕೃತಿಯ ಮೂರು ಗುಣಗಳನ್ನು ವರ್ಣಿಸುವುದಕ್ಕೆ ಮೀಸಲಾಗಿದೆ. ಈ ಅಧ್ಯಾಯವನ್ನು ಗುಣತ್ರಯ ವಿಭಾಗಯೋಗ ಎಂದೂ ಕರೆಯುತ್ತಾರೆ. ದೇಹದಲ್ಲಿ ಆತ್ಮನು ಬದ್ಧನಾಗಿರುವುದಕ್ಕೆ ಕಾರಣ ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳು. ಇವು ಆತ್ಮನನ್ನು ಕಟ್ಟಿ ಹಾಕಿರುವ ಹಗ್ಗಗಳಂತೆ

ಸಾಂಖ್ಯ ದರ್ಶನವು ಅತಿಪ್ರಾಚೀನ. ಅದು ಬುದ್ಧನ ಕಾಲಕ್ಕಿಂತ ಹಳೆಯದು. ಅದರಲ್ಲಿ ಹೇಳಿರುವ ಎರಡು ಅನಾದಿ ತತ್ತ್ವಗಳೆಂದರೆ ಪ್ರಕೃತಿ ಮತ್ತು ಪುರುಷ. ಪ್ರಕೃತಿಯು ತ್ರಿಗುಣಾತ್ಮಕ, ಎಂದರೆ ಮೂರು ಗುಣಗಳನ್ನುಳ್ಳದ್ದು. ಆದರೆ ಪುರುಷ ನಿರ್ಗುಣ. ಪ್ರಕೃತಿಯಿಂದ ಸೃಜಿಸಲ್ಪಟ್ಟ ಪ್ರತಿಯೊಂದು ವಸ್ತುವಿನಲ್ಲೂ ಅದರ ಮೂರು ಗುಣಗಳು, ಎಂದರೆ ಸತ್ತ್ವ, ರಜಸ್, ತಮಸ್ ಎಂಬವು ಇರುತ್ತವೆ. ಪುರುಷ ತತ್ತ್ವಕ್ಕೆ ಗುಣಗಳ ಸ್ಪರ್ಶವಿಲ್ಲ. ಅದು ತಾವರೆ ಎಲೆಯಂತೆ ನಿರ್ಲೇಪ. ಅದು ಯಾವುದನ್ನೂ ಅಂಟಿಸಿಕೊಳ್ಳುವುದಿಲ್ಲ. ಜೀವಿಯಲ್ಲಿರುವ ಬುದ್ಧಿ ಪ್ರಕೃತಿಜನ್ಯ ಎಂದರೆ ನಮ್ಮ ಬುದ್ಧಿ, ಮನಸ್ಸು, ಇಂದ್ರಿಯಗಳು, ದೇಹ ಇವೆಲ್ಲ ಪ್ರಕೃತಿಯ ಕೊಡುಗೆ. ಇವೆಲ್ಲವೂ ಮೂರು ಗುಣಗಳ ಪ್ರಭಾವಕ್ಕೆ ಒಳಗಾಗಿರುವುವೇ. ಪ್ರಕೃತಿಯ ಗುಣಗಳಿಂದಲೇ ನಾವು ವಿವಿಧ ಕರ್ಮಗಳನ್ನು ಮಾಡಲು ಪ್ರೇರಿತರಾಗುತ್ತೇವೆ.

ಅಹಂಕಾರದ ಮೋಹದಿಂದ ನಾನು ಈ ಕರ್ಮವನ್ನು ಮಾಡಿದೆ ಎಂಬ ಭಾವನೆ ಅಥವಾ ಭ್ರಾಂತಿ ಉಂಟಾಗುತ್ತದೆ ಎಂದು ಭಗವಂತನು ಹೇಳಿದ್ದಾನೆ –

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ॥ (3.27)

ಎಂಬ ಶ್ಲೋಕವನ್ನಿಲ್ಲಿ ಗಮನಿಸಬೇಕು.

ಪ್ರಪಂಚದಲ್ಲಿರುವ ಮೂಲ ತತ್ತ್ವಗಳಾದ ಪ್ರಕೃತಿಯೂ ಪುರುಷನೂ ಅನಾದಿಗಳು, ಎಂದರೆ ಅವಕ್ಕೆ ಹುಟ್ಟು ಸಾವುಗಳಿಲ್ಲ. ಪ್ರಕೃತಿಯ ವಿಕಾರಗಳಾದ ನಕ್ಷತ್ರ, ಸೂರ್ಯ, ಚಂದ್ರ, ಭೂಮಿ–ಇವೆಲ್ಲಕ್ಕೂ ಹುಟ್ಟು ಸಾವುಗಳುಂಟು. ಇವುಗಳಲ್ಲಿ ಗುಣಗಳು ಸೇರಿಕೊಂಡೇ ಇರುತ್ತವೆ. ಇದನ್ನು ಕೆಳಗಿನ ಶ್ಲೋಕವು ಸ್ಪಷ್ಟಪಡಿಸಿವೆ–

ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿ ಸಂಭವಾನ್ ॥ (13.79)

ಪ್ರಕೃತಿಯಿಂದಲೇ ಎಲ್ಲ ಗುಣಗಳ ಸಂಭವ ಎಂಬುದನ್ನು ಈ ಶ್ಲೋಕವು ಹೇಳುತ್ತದೆ. ಪ್ರಕೃತಿಯಿಂದ ಹುಟ್ಟುವ ಗುಣಗಳ ಕಾರಣದಿಂದಲೇ ಜನರು ವಿವಿಧವಾಗಿ ಪ್ರವೃತ್ತಿಗಳನ್ನು ಹೊಂದಿದವರಾಗಿರುತ್ತಾರೆ.

ಭಗವದ್ಗೀತೆಯ ಹದಿನಾಲ್ಕನೆಯ ಅಧ್ಯಾಯವು ಪ್ರಕೃತಿಯ ಮೂರು ಗುಣಗಳನ್ನು ವರ್ಣಿಸುವುದಕ್ಕೆ ಮೀಸಲಾಗಿದೆ. ಈ ಅಧ್ಯಾಯವನ್ನು ಗುಣತ್ರಯ ವಿಭಾಗಯೋಗ ಎಂದೂ ಕರೆಯುತ್ತಾರೆ. ದೇಹದಲ್ಲಿ ಆತ್ಮನು ಬದ್ಧನಾಗಿರುವುದಕ್ಕೆ ಕಾರಣ ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳು. ಇವು ಆತ್ಮನನ್ನು ಕಟ್ಟಿ ಹಾಕಿರುವ ಹಗ್ಗಗಳಂತೆ ಎಂಬ ವಿಚಾರವನ್ನು ಇಲ್ಲಿ ಭಗವಂತನು ಹೇಳಿದ್ದಾನೆ.

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್॥ (14.5)

ಗುಣ ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ರೂಪ, ರಸ, ಗಂಧ ಮುಂತಾದ ವಸ್ತುಧರ್ಮ ಎಂಬ ಅರ್ಥವಿರುವಂತೆ ಹಗ್ಗ, ಕಟ್ಟಿ ಹಾಕುವ ಸಾಧನ ಎಂಬ ಅರ್ಥವೂ ಇದೆ. ಈ ಗುಣಗಳು ಆತ್ಮನನ್ನು ಕಟ್ಟಿ ಹಾಕುವುದು ಹೇಗೆ ಎಂಬುದನ್ನು ಭಗವದ್ಗೀತೆಯ ಇನ್ನೊಂದು ಶ್ಲೋಕವು ತಿಳಿಸಿದೆ–

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ॥ (14.6)

ಸತ್ತ್ವಗುಣವು ಸ್ವಭಾವದಿಂದಲೇ ನಿರ್ಮಲವಾದದ್ದು, ಬೆಳಕಿನಂತೆ ಎಲ್ಲವೂ ಪ್ರತ್ಯಕ್ಷವಾಗುವಂತೆ ಮಾಡುವುದು. ಇದರಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮತ್ಸರ ಮುಂತಾದ ದೋಷಗಳಿಗೆ ಅವಕಾಶವಿಲ್ಲ. ಸುಖದಿಂದ ಬಾಳೋಣ, ಶಾಂತಿ, ನೆಮ್ಮದಿ, ಸಮಾಧಾನದಿಂದ ಇರೋಣ ಎಂಬ ಆಶೆ–ಆಕಾಂಕ್ಷೆಗಳನ್ನು ಸತ್ತ್ವಗುಣವು ಹುಟ್ಟಿಸಿ ಆತ್ಮನನ್ನು ದೇಹದಲ್ಲಿ ಬಂಧಿಸುತ್ತದೆ. ಈ ಗುಣಕ್ಕೆ ಜ್ಞಾನದ ಹಂಬಲ ಹೆಚ್ಚು, ಎಲ್ಲವನ್ನೂ ತಿಳಿದುಕೊಳ್ಳಬೇಕು, ಅರಿವಿಗಿಂತ ದೊಡ್ಡದಿಲ್ಲ. ಗುರುಗಳನ್ನು ಆಶ್ರಯಿಸಿ ಅಜ್ಞಾನದ ಕತ್ತಲೆಯನ್ನು ತೊಲಗಿಸೋಣ, ಎಲ್ಲ ಜನರಲ್ಲಿ ತಿಳಿವನ್ನು ಹೆಚ್ಚಿಸಲು ಪ್ರಯತ್ನಿಸೋಣ ಎಂಬ ಇಚ್ಛೆ ಸಾತ್ತ್ವಿಕದಲ್ಲಿರುತ್ತದೆ. ಜ್ಞಾನಿಗಳು, ವಿಜ್ಞಾನಿಗಳು, ಪ್ರವಚನಕಾರರು ಈ ಬಗೆಯ ಆಸೆಗಳನ್ನಿಟ್ಟುಕೊಂಡಿರುವುದನ್ನು ಕಾಣುತ್ತೇವೆ. ಹೊಸ ವಿಷಯವನ್ನು ತಿಳಿದುಕೊಂಡಾಗ, ಅದನ್ನು ಇತರರಿಗೆ ತಿಳಿಸಿದಾಗ ಸಾತ್ತ್ವಿಕರಿಗೆ ಆನಂದ ಉಂಟಾಗುತ್ತದೆ. ಇಂತಹ ಸಾತ್ತ್ವಿಕರಿಂದಲೇ ಜಗತ್ತಿನ ಜ್ಞಾನ ಭಂಡಾರ ಬೆಳೆಯುತ್ತದೆ. ಇವರೇ ನಿಜವಾದ ಅರ್ಥದಲ್ಲಿ ಋಷಿಗಳು.

ಇನ್ನು ರಜೋಗುಣದ ಸ್ವಭಾವವನ್ನು ಹೇಳಬೇಕಾದರೆ ಅದು ಕ್ರಿಯಾಶೀಲವಾದದ್ದು. ಸತ್ತ್ವ ಗುಣಕ್ಕೆ ಜ್ಞಾನದಲ್ಲಿ ಸ್ವಾಭಾವಿಕ ಒಲವು ಇರುವಂತೆ ರಜೋಗುಣಕ್ಕೆ ಕ್ರಿಯೆಯಲ್ಲಿ ಸೃಷ್ಟಿಯಲ್ಲಿ ಆಸಕ್ತಿ. ಇದನ್ನು ವಿವರಿಸುವ ಶ್ಲೋಕ ಮುಂದಿನದು.

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥ (14.7)

ರಜಸ್ಸಿಗೆ ವಸ್ತುಗಳಿಗಾಗಿ ಆಶೆ ಪಡುವುದು ಸ್ವಭಾವಸಿದ್ಧ. ಇದು ತೃಷ್ಣೆಯನ್ನು, ಎಂದರೆ ಎಲ್ಲವೂ ಬೇಕು ಎಂಬ ಬಯಕೆಯನ್ನು ಹುಟ್ಟಿಸುತ್ತದೆ. ಎಷ್ಟಿದ್ದರೂ ಸಾಲದು. ಹಣ, ಅಧಿಕಾರ, ಶಕ್ತಿ, ಸಾಮಾಜಿಕ ಪ್ರತಿಷ್ಠೆ, ಪ್ರಭಾವ ಇವುಗಳನ್ನು ಪಡೆಯಲು, ಹೆಚ್ಚಿಸಿಕೊಳ್ಳಲು ರಾಜಸಜನರು ಸತತ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತಾರೆ. ಇವರು ರಾಜರಾಗಿ, ಅಧಿಕಾರಿಗಳಾಗಿ, ಜನನಾಯಕರಾಗಿ ಮೆರೆಯಲು ಬಯಸುತ್ತಾರೆ. ಅದಕ್ಕಾಗಿ ಇವರು ಸದಾ ಕರ್ಮಾಸಕ್ತರು. ರಜೋಗುಣವು ಮನುಷ್ಯನನ್ನು ಸದಾ ಕರ್ಮಗಳಲ್ಲಿ ತೊಡಗಿಸಿ ಕಟ್ಟಿ ಹಾಕುತ್ತದೆ. ಸ್ಪರ್ಧೆ, ಯುದ್ಧ, ಪಿತೂರಿ, ದಬ್ಬಾಳಿಕೆ ಇವೆಲ್ಲ ರಜೋಗುಣದ ಪರಿಣಾಮಗಳೇ. ಜಗತ್ತು ಜ್ಞಾನಿಗಳನ್ನು ಗೌರವಿಸುತ್ತದೆ. ಆದರೆ ಅವರ ಉಪದೇಶಗಳನ್ನು ಅನುಸರಿಸುವುದು ಕಡಿಮೆ. ಆದರೆ ರಜೋಗುಣ ಪ್ರಧಾನರಾದ ರಾಜರ, ಸರ್ವಾಧಿಕಾರಿಗಳ ಆಜ್ಞೆಗಳನ್ನು ಎಲ್ಲರೂ ಭಯದಿಂದ ಅನುಸರಿಸಲೇ ಬೇಕಾಗುತ್ತದೆ. ರಜೋಗುಣವು ಬಂಧನಕ್ಕೆ ಬಲವತ್ತಾದ ಕಾರಣ. ಸತ್ತ್ವಗುಣವು ಮೋಕ್ಷಕ್ಕೆ, ಬಿಡುಗಡೆಗೆ ಕಾರಣ. ರಜೋಗುಣವಾದರೋ ಹೆಚ್ಚು ಹೆಚ್ಚು ಕರ್ಮಗಳಲ್ಲಿ ಮಾನವನನ್ನು ತೊಡಗಿಸಿ ಬಂಧನದ ಸರಪಳಿಗಳಿಂದ ಕಟ್ಟಿ ಹಾಕುತ್ತದೆ. ಜನರು ಇಷ್ಟ ಪಡುವುದಿದನ್ನೇ. ಕೋಟಿಯಲ್ಲೊಬ್ಬರು ಮೋಕ್ಷಾಕಾಂಕ್ಷಿಗಳಾಗಿರಬಹುದೇನೋ? ಮಗನು ಅಧಿಕಾರಿಯಾಗಲಿ, ಹಣವಂತನಾಗಲಿ, ಜನರ ನಾಯಕನಾಗಿ ಮೆರೆಯಲಿ, ರಾಜವೈಭವವನ್ನು ಹೊಂದಲಿ ಎಂದು ತಾಯಿ ತಂದೆಯರು ಆಸೆಪಡುವುದನ್ನು ಕಂಡಿದ್ದೇವೆ. ಮಗನು ಋಷಿಯಾಗಲಿ ಎಂದು ಅಪೇಕ್ಷಿಸುವವರು ವಿರಳಾತಿವಿರಳ. ಇನ್ನು ತಮೋಗುಣ. ಅದು ಅಜ್ಞಾನದಿಂದ ಹುಟ್ಟುತ್ತದೆ. ಅಜ್ಞಾನವನ್ನೇ ಬೆಳೆಸುತ್ತದೆ. ಇದು ಎಲ್ಲ ಜೀವಾತ್ಮರನ್ನು ಆವರಿಸಿದ್ದರೂ ಕೆಲವರಲ್ಲಿ ಅತ್ಯಧಿಕವಾಗಿರಬಹುದು. ಇದು ಹೇಗೆ ಜೀವಾತ್ಮನನ್ನು ಬಂಧಿಸುತ್ತದೆ ಎಂದು ಗೀತೆ ತಿಳಿಸುತ್ತದೆ–

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।
ಪ್ರಮಾದಾಲಸ್ಯ ನಿದ್ರಾಭಿಸ್ತನ್ನಿಬಧ್ನಾತಿ ಭಾರತ॥

ತಮಸ್ಸು ಎಲ್ಲರಿಗೂ ಮೋಹವನ್ನುಂಟು ಮಾಡುತ್ತದೆ. ಸತ್ಯ ಏನೆಂದು ತಿಳಿಯದಂತೆ ಮಾಡುವುದು, ಅಸತ್ಯವನ್ನು ಸತ್ಯ ಎಂದು ತಪ್ಪಾಗಿ ತಿಳಿದುಕೊಳ್ಳುವಂತೆ ಮಾಡುವುದು ತಮೋಗುಣದ ಕೆಲಸ. ಇದರಿಂದ ಮನುಷ್ಯನು ಮಾಡಬೇಕಾದ ಕೆಲಸಗಳಲ್ಲಿ ಪ್ರಮಾದ ಉಂಟಾಗುತ್ತದೆ. ಹಾಗೆಂದರೆ ಏನೋ ಮಾಡಲು ಹೊರಟು ಇನ್ನು ಏನೋ ಬೇರೆ ಮಾಡುವಂತಾಗುತ್ತದೆ ಅಥವಾ ಆಲಸ್ಯ ಮನುಷ್ಯನನ್ನು ಆವರಿಸುತ್ತದೆ. ಆಲಸ್ಯವೇ ಸೋಮಾರಿತನ. ಇಂದು ಮಾಡಬೇಕಾದ ಕೆಲಸವನ್ನು ನಾಳೆ ಮಾಡಿದರಾಯಿತು, ನಾಡಿದ್ದು ಮಾಡೋಣ ಎಂದು ಮುಂದೂಡುವುದು, ಎಂದೂ ಮಾಡದಿರುವುದು, ಅರ್ಧದಲ್ಲೇ ಕೆಲಸವನ್ನು ನಿಲ್ಲಿಸಿ ಬಿಡುವುದು–ಇವೆಲ್ಲ ಆಲಸ್ಯದ ಲಕ್ಷಣಗಳು. ಇನ್ನು ನಿದ್ದೆಯೂ ಅಧಿಕವಾದಾಗ ತಮೋಗುಣದ ಪರಿಣಾಮವೇ ಆಗಿರುತ್ತದೆ. ಇವುಗಳಿಂದ ಜೀವನದ ಉದ್ದೇಶಗಳಲ್ಲಿ ವಿಫಲರಾಗುವರೇ ಹೆಚ್ಚು.


ಸುಖದಲ್ಲಿ, ಜ್ಞಾನದಲ್ಲಿ, ಒಳ್ಳೆಯ ಚಿಂತನೆಯಲ್ಲಿ ನಮ್ಮನ್ನು ತೊಡಗಿಸುವುದು ಸತ್ತ್ವಗುಣ. ಕಾರ್ಯಗಳಲ್ಲಿ ನಾವು ಪ್ರವೃತ್ತರಾಗುವಂತೆ, ನಾನಾ ಫಲಗಳಿಗಾಗಿ ಹೊಡೆದಾಡುವಂತೆ, ಪರಸ್ಪರ ಸ್ಪರ್ಧಿಸುವಂತೆ ಮಾಡುವುದು ರಜೋಗುಣ. ಸುಮ್ಮನಿದ್ದು ಹಗಲುಗನಸಿನಲ್ಲಿ, ನಿದ್ದೆಯಲ್ಲಿ ವ್ಯರ್ಥವಾಗಿ ನಾವು ಕಾಲವನ್ನು ಕಳೆಯುವಂತೆ ಪ್ರೇರಿಸುವುದು ತಮೋಗುಣ. ಈ ಮೂರು ಗುಣಗಳೂ ನಮ್ಮಲ್ಲಿವೆ. ನಮ್ಮಲ್ಲಿ ಯಾರೂ ಶೇಕಡಾ ನೂರರಷ್ಟು ಸಾತ್ತ್ವಿಕರಾಗಲಿ, ರಾಜಸರಾಗಲಿ, ತಾಮಸರಾಗಲಿ ಇಲ್ಲ. ಯಾವುದು ಹೆಚ್ಚಾಗಿದೆಯೋ ಅದನ್ನು ಆಧಾರವಾಗಿ ಇಟ್ಟುಕೊಂಡು ಇವನು ಸಾತ್ತ್ವಿಕ. ಅವನು ರಾಜಸ ಎಂಬ ವ್ಯವಹಾರವನ್ನು ಮಾಡುತ್ತೇವೆ. ಸತ್ತ್ವಗುಣವನ್ನು ಹೆಚ್ಚಿಸಿಕೋ, ಸಾತ್ತ್ವಿಕನಾಗು ಎಂಬುದು ಗೀತೆಯ ಉಪದೇಶ. ಅದನ್ನು ಸಾಧಿಸಲು ಪ್ರಯತ್ನ ಮಾಡಬೇಕು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಸಾಹಿತ್ಯ ಲೋಕದ ಪೂರ್ಣಚಂದ್ರ



ಸೆಪ್ಟೆಂಬರ್ 8, ಖ್ಯಾತ ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ

ಇಳೆ–ಬೆಳೆ, ಕಾಡು–ಮೇಡು ಅಂತ ಸದಾ ನಿಸರ್ಗದಲ್ಲೇ ಸ್ವರ್ಗ ಕಾಣುತ್ತಿದ್ದ ತೇಜಸ್ವಿಯವರು ಜನಾರಣ್ಯದಿಂದ ದೂರ ವಿದ್ದು ಒಂದು ರೀತಿ ಮಲೆನಾಡಿನ ಕಾಡಿನಲ್ಲಿ ಸಂತನಂತೆ ಬದುಕಿದವರು. ಕಾಡಿನ ಬದುಕಿನಲ್ಲೂ ನಾಡಿನ ಹಿತವೇ ಮುಖ್ಯವಾಗಿತ್ತೆಂಬುದು ಇವರ ಬದುಕಿನ ಶೈಲಿಯಲ್ಲೇ ಕಾಣಬಹುದಿತ್ತು. ತೇಜಸ್ವಿ ಬದುಕನ್ನು ರಾಬಿನ್ಸನ್ ಕ್ರೂಸೋ ಬದುಕಿಗೆ ಹೋಲಿಸುವುದುಂಟು.

ಹೆಸರಾಂತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಸಾಹಿತಿಯಷ್ಟೇ ಆಗಿರಲಿಲ್ಲ. ಅದ್ಭುತ ಫೋಟೋಗ್ರಾಫರ್, ಅಪ್ರತಿಮ ಸಹಜ ಕೃಷಿಕ. ಅನನ್ಯ ಚಿತ್ರ ಕಲಾವಿದ, ಅಸಾಮಾನ್ಯ ಬೇಟೆಗಾರ, ಅಪೂರ್ವ ಸಂಗೀತಗಾರ, ಅಸಮಬಲ ಹೋರಾಟಗಾರ, ಕನ್ನಡ ಸಾಫ್ಟ್‌ವೇರ್ ಅಭಿವೃದ್ಧಿಗಾರ, ಅರಣ್ಯ ಸುತ್ತುವ ಸಾಹಸಿಗ, ಪರಿಸರ ಸಂರಕ್ಷಕ... ಹೀಗೆ ತೇಜಸ್ವಿಯವರ ಆಸಕ್ತಿಯ ಕ್ಷೇತ್ರ ಹಲವು.

ಹಾಗಾಗಿ ಸಾಹಿತ್ಯ ಕ್ಷೇತ್ರದಲ್ಲಿ ಏರಿದಷ್ಟೇ ಎತ್ತರಕ್ಕೆ ಅಥವಾ ಅದಕ್ಕಿಂತಲೂ ಮಿಗಿಲಾಗಿ ಸಾಹಿತ್ಯದಿಂದಾಚೆಗೂ ಅವರು ಮಿಂಚಿದ್ದು ಈಗಲೂ ಕನ್ನಡಿಗರ ಕಣ್ಮುಂದೆ ವಿಸ್ಮಯವಾಗಿ ನಿಂತಿದೆ. ತೇಜಸ್ವಿಯವರು ಕ್ಲಿಕ್ಕಿಸಿರುವ ಫೋಟೋಗಳೇ ಇದಕ್ಕೆ ಉತ್ತಮ ಉದಾಹರಣೆ. ಗಿಡ–ಮರ, ಹಕ್ಕಿ–ಪಕ್ಷಿ, ಹೂವು–ಹಣ್ಣು, ಮಣ್ಣು–ನೀರು, ಇಳೆ–ಬೆಳೆ, ಕಾಡು–ಮೇಡು ಅಂತ ಸದಾ ನಿಸರ್ಗದಲ್ಲೇ ಸ್ವರ್ಗ ಕಾಣುತ್ತಿದ್ದ ತೇಜಸ್ವಿಯವರು ಜನಾರಣ್ಯದಿಂದ ದೂರವಿದ್ದು ಒಂದು ರೀತಿ ಮಲೆನಾಡಿನ ಕಾಡಿನಲ್ಲಿ ಸಂತನಂತೆ ಬದುಕಿದವರು. ಕಾಡಿನ ಬದುಕಿನಲ್ಲೂ ನಾಡಿನ ಹಿತವೇ ಮುಖ್ಯವಾಗಿತ್ತೆಂಬುದು ಇವರ ಬದುಕಿನ ಶೈಲಿಯಲ್ಲೇ ಕಾಣಬಹುದಿತ್ತು. ತೇಜಸ್ವಿ ಬದುಕನ್ನು ರಾಬಿನ್ಸನ್ ಕ್ರೂಸೋ ಬದುಕಿಗೆ ಹೋಲಿಸುವುದುಂಟು.

ತಮ್ಮ ಉದಾತ್ತ ಚಿಂತನೆಗಳಿಂದ, ಪ್ರಾತಿಪರ ಧೋರಣೆಯಿಂದ, ವಿಚಾರಾತ್ಮಕ ಸೃಜನಶೀಲ ಕೃತಿಗಳಿಂದ, ಸಾಹಿತ್ಯ; ವೈಜ್ಞಾನಿಕ ಬರವಣಿಗೆ ಯಿಂದ ಕನ್ನಡ ಸಾರಸ್ವತ ಲೋಕವನ್ನು 'ಪೂರ್ಣಚಂದ್ರ'ನಂತೆಯೇ ಬೆಳಗಿದವರು ತೇಜಸ್ವಿಯವರು. ಅವರು ಹುಟ್ಟಿದ್ದು 1938ರ ಸೆಪ್ಟೆಂಬರ್ 8ರಂದು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಗ್ರಾಮ ಇವರ ಜನ್ಮಸ್ಥಳ. ತಂದೆ ಕನ್ನಡವನ್ನು ವಿಶ್ವದ ಉದ್ದಗಲಕ್ಕೂ ಮೆರೆಸಿದ ಮೇರುಕವಿ ಕುವೆಂಪು. ತಾಯಿ ಹೇಮಾವತಿ ಕುವೆಂಪು.

ಬಾಲ್ಯದಿಂದಲೂ ಗ್ರಾಮೀಣ ಬದುಕನ್ನೇ ಅಪ್ಪಿಕೊಂಡಿದ್ದರಿಂದಾಗಿ ಇವರ ಬರಹಗಳಲ್ಲಿ ಮಲೆನಾಡಿನ ದಟ್ಟ ವರ್ಣನೆಯೇ ಯಥೇಚ್ಛವಾಗಿವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಮುಗಿಸಿದ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಮಾಡಿ ನಂತರ ಮಾನಸ ಗಂಗೋತ್ರಿಯಲ್ಲಿ ಎಂ.ಎ. ಪದವಿ ಗಳಿಸಿದರು. ಆದರೆ ಎಲ್ಲರಂತೆ ನಗರ ಜೀವನಕ್ಕೆ ಅಂಟಿಕೊಂಡು ಅಧ್ಯಾಪಕ ವೃತ್ತಿಯ ದಾರಿ ಹಿಡಿಯದೆ ಸ್ವತಂತ್ರ ಪ್ರವೃತ್ತಿಯ ತೇಜಸ್ವಿ ಕಾಡಿನ ಪರಿಸರದ ಹಳ್ಳಿಯತ್ತ ಮುಖ ಮಾಡಿದ್ದರು.

ತಂದೆ ಕುವೆಂಪು ಅವರು ಮಲೆನಾಡಿನ ಹಳ್ಳಿಯಿಂದ ಮೈಸೂರು ನಗರಕ್ಕೆ ಬಂದು ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಮೈಸೂರಿನಲ್ಲೇ ಬಾಳಿ ಬದುಕಿ ಅಲ್ಲೇ ತಮ್ಮ ಸಾಹಿತ್ಯ ಕೃಷಿಯನ್ನೆಲ್ಲಾ ಮಾಡಿದರಾದರೂ ಅವರ ಮಗ ತೇಜಸ್ವಿಯವರು ಮಾತ್ರ ಇದಕ್ಕೆ ತದ್ವಿರುದ್ಧವಾಗಿ ನಗರ ಜೀವನಕ್ಕೆ ಗುಡ್‌ಬೈ ಹೇಳಿ ಮತ್ತೆ ಮಲೆನಾಡಿಗೆ ಮರಳಿ ಕೃಷಿ ಕಾಯಕಕ್ಕಿಳಿದಿದ್ದರು. ಅಲ್ಲಿಂದಾಚೆಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಅವರ ಕಾರ್ಯಕ್ಷೇತ್ರವಾಯಿತು. ನಿಜ ಅರ್ಥದಿ ಅಪ್ಪಟ ರೈತನಾಗಿ 'ಮಣ್ಣಿನ ಮಗ' ಆಗಿದ್ದರು.

ಭೂಮಿ ಕೃಷಿ ಜೊತೆ ಜೊತೆಯಲ್ಲೇ ಸಾಹಿತ್ಯ ಕೃಷಿಯನ್ನೂ ಮಾಡುತ್ತಾ ಸಾರ್ಥಕ ಪಥದಲ್ಲಿ ಬದುಕಿನ ಬಂಡಿಯನ್ನು ನೂಕಿದ ಈ ಕಾಡಿನ ಸಂತ 1950ರ ದಶಕದಲ್ಲಿ ಪ್ರಪ್ರಥಮವಾಗಿ 'ಲಿಂಗ ಬಂದ' ಕಥೆಯ ಮೂಲಕ ಸಾಹಿತ್ಯ ಲೋಕಕ್ಕೆ ಅಡಿಯಿಟ್ಟು ತಮ್ಮ ಮೊದಲ ಕೃತಿಯಲ್ಲೇ ಹೊಸ ಜಾಡು ಹಿಡಿದು ವಿಮರ್ಶಕರ ಗಮನ ಸೆಳೆದಿದ್ದರು. ತಮ್ಮ ಈ ಮೊದಲ ಕಥೆಗೇ 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದರು. ಹಾಗೆಯೇ ಅವರ ಮತ್ತೊಂದು ಕಥೆ 'ಗುಡುಗು ಹೇಳಿದ್ದೇನು' ತೀರ್ಪುಗಾರರ ಮೆಚ್ಚುಗೆ ಪಡೆದಿತ್ತು. ಬರವಣಿಗೆಯ ಆರಂಭದಲ್ಲಿ ನವ್ಯ ಚಳವಳಿಯ ಜತೆ ಹೆಜ್ಜೆಹಾಕಿದರೂ ನಂತರದ ದಿನಗಳಲ್ಲಿ ತಮ್ಮದೇ ಆದ ಹೊಸ ಹಾದಿ ಕಂಡುಕೊಂಡ ತೇಜಸ್ವಿ 'ಅಬಚೂರಿನ ಪೋಸ್ಟ್ ಆಫೀಸು' ಹೊತ್ತಿಗೆ ಆನೆ ನಡೆದದ್ದೇ ಹಾದಿ ಎಂಬಂತೆ ತಮ್ಮೊಳಗಿನ ಚಿಂತನೆಯ ಧಾರೆಯಲ್ಲಿ ನೂತನ ಕಥನ ಶೈಲಿಯಿಂದ ತಾವೇ ಒಂದು ಹೆದ್ದಾರಿಯಾಗಿ ಬೆಳೆದು ಸಾಹಿತ್ಯ ಲೋಕವನ್ನು ಬೆರಗುಗೊಳಿಸಿದ್ದರು.

ಸಾಮಾಜಿಕ ಮತ್ತು ಶೈಕ್ಷಣಿಕ ಕಾಳಜಿ, ವೈಚಾರಿಕ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಧರ್ಮಗಳು ಇವರ ಬರಹಗಳುದ್ದಕ್ಕೂ ಕಲಾತ್ಮಕವಾಗಿ ಅಭಿವ್ಯಕ್ತಿಗೊಂಡು ಒಂದು ರೀತಿ ಹೊಸ ಜಗತ್ತು ಕಂಡಂತೆ ಓದುಗ ರೋಮಾಂಚನಗೊಳ್ಳುವಂತೆ ಸಾಹಿತ್ಯ ಕೃತಿಗಳನ್ನು ಸೃಷ್ಟಿ ಮಾಡಿದ್ದು ತೇಜಸ್ವಿಯ ವಿಶೇಷ. ಇವರ 'ಮಿಲೆನಿಯಂ ಸರಣಿ'ಯಂಥ ಕೃತಿಗಳು ಓದುಗಲೋಕದಲ್ಲಿ ಮಿಂಚಿನ ಸಂಚಲನ ಉಂಟು ಮಾಡಿದ್ದವು. ತಮಗರಿವಿಲ್ಲದಂತೆಯೇ ಕನ್ನಡ ಓದು ಪ್ರಪಂಚವನ್ನು ವಿಸ್ತಾರಗೊಳಿಸಿದ್ದರು. ಅಂತೆಯೇ ತಂದೆ ಕುವೆಂಪು ಪ್ರಭಾವಲಯದಿಂದ ಹೊರಬಂದು ಸಾರಸ್ವತ ಪ್ರಪಂಚದಲ್ಲಿ ತಮ್ಮದೇ ಆದಂಥ ಛಾಪು ಮೂಡಿಸಿದ ಅದ್ಭುತ ಪ್ರತಿಭೆ ತೇಜಸ್ವಿಯವರದು!

ತಬರನ ಕಥೆ, ಕಿರಗೂರಿನ ಗಯ್ಯಾಳಿಗಳು, ಹುಲಿಯೂರಿನ ಸರಹದ್ದು, ಚಿದಂಬರ ರಹಸ್ಯ, ಮಾಯಾಲೋಕ, ಜುಗಾರಿ ಕ್ರಾಸ್, ಕರ್ವಾಲೋ, ಮಲೆನಾಡಿನ ಹಕ್ಕಿಗಳು, ಪರಿಸರದ ಕಥೆ, ಹೆಜ್ಜೆ ಮೂಡದ ಹಾದಿಯಲ್ಲಿ, ಕಾಡಿನ ಕಥೆಗಳು ಕೃತಿಗಳ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ತೇಜಸ್ವಿಯವರು ಹೊಸತೊಂದು ಪ್ರಭಾವಳಿಯನ್ನೇ ತೊಡಿಸಿದ್ದಾರೆ. ಹಾಗೆಯೇ ತಂದೆ ಕುವೆಂಪು ಅವರನ್ನು ಕುರಿತ 'ಅಣ್ಣನ ನೆನಪು' ಮತ್ತು 'ಅಲೆಮಾರಿಯ ಅಂಡಮಾನ್' ಕೃತಿಗಳು ಇವರಿಂದ ಸೃಷ್ಟಿಯಾದ ಅಪೂರ್ವ ಸಾಹಿತ್ಯ ರತ್ನಗಳು. ಇವು ಸೃಜನಶೀಲ ಮತ್ತು ಸೃಜನೇತರ ಎಂಬ ಸಾಹಿತ್ಯಕ್ಕೆ ಪರಿಭಾಷೆಗಳನ್ನೇ ಬದಲಾಯಿಸುವಂತೆ ಮಾಡಿ ಶ್ರೇಷ್ಠತೆಯಿಂದ ಮೆರೆದಿವೆ. ಸಹಜ ಕೃಷಿ, ವಿಕಾಸವಾದ, ಇಕಲಾಜಿ, ಫ್ಲೈಯಿಂಗ್ ಸಾಸರ್, ಕನ್ನಡ ನಾಡಿನ ಹಕ್ಕಿಗಳು ಕೃತಿಗಳೂ ಸಹಾ ತೇಜಸ್ವಿಯವರ ದೈತ್ಯ ಪ್ರತಿಭೆಗೆ ಸಾಕ್ಷಿಗಲ್ಲುಗಳಾಗಿವೆ. ಹಾಗೆಯೇ ಇವರು ಬರೆದದ್ದು 'ಯಮಳ ಪ್ರಶ್ನೆ' ಎಂಬ ಒಂದೇ ನಾಟಕವಾದರೂ ಕೂಡ ವೃತ್ತಿನಿರತ ನಾಟಕಕಾರರಿಗಿಂತಲೂ ಹೆಚ್ಚಾಗಿ ರಂಗದಲ್ಲಿ ಹೆಜ್ಜೆ ಮೂಡಿಸಿದ್ದಾರೆ. ಕಾರಣ 'ಕೃಷ್ಣೇಗೌಡರ ಆನೆ'ಯಂಥ ಕಿರು ಕಾದಂಬರಿಯಿಂದ ಹಿಡಿದು 'ಚಿದಂಬರ ರಹಸ್ಯ'ದವರೆಗೆ ಇವರ ಬಹುತೇಕ ಕೃತಿಗಳು ನಾಟಕಕ್ಕೆ ರೂಪಾಂತರಗೊಂಡಿವೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡ್, ಕೆ.ವಿ. ಸುಬ್ಬಣ್ಣ, ಟಿ.ಎಸ್. ನಾಗಾಭರಣ, ಗಿರೀಶ್ ಕಾಸರವಳ್ಳಿ, ಟಿ.ಎನ್. ನರಸಿಂಹನ್‌ರಂಥ ಘಟಾನುಘಟಿಗಳು ತೇಜಸ್ವಿಯವರ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ತೇಜಸ್ವಿಯವರ ಅಬಚೂರಿನ ಪೋಸ್ಟ್ ಆಫೀಸು, ಕುಬಿ ಮತ್ತು ಇಯಾಲ, ತಬರನ ಕಥೆ ಕೃತಿಗಳು ಬೆಳ್ಳಿತೆರೆಯನ್ನು ಅಲಂಕರಿಸಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ಬಾಚಿಕೊಳ್ಳುವುದರ ಮುಖೇನ ಕನ್ನಡ ಚಿತ್ರರಂಗದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ತೇಜಸ್ವಿಯವರು ಎಂದೂ ಕೂಡ ಪ್ರಶಸ್ತಿ, ಪುರಸ್ಕಾರಗಳ ಬೆನ್ನುಹತ್ತಿದವರಲ್ಲ. ಆದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿಗಳಂಥ ಅನೇಕ ಪ್ರಶಸ್ತಿಗಳು ತೇಜಸ್ವಿಯವರನ್ನು ಅಲಂಕರಿಸಿ ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿವೆ. ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ ಕೃಪಾಕರ–ಸೇನಾನಿ ನಿರ್ದೇಶನದಲ್ಲಿ ತೇಜಸ್ವಿ ಅವರನ್ನು ಕುರಿತು 'ಮಾಯಾಲೋಕ' ಎಂಬ ಸಾಕ್ಷ್ಯ ಚಿತ್ರ ನಿರ್ಮಿಸಿ ಗೌರವ ಸಲ್ಲಿಸಿದೆ.

ಸಾಹಿತ್ಯದ ಜೊತೆಗೆ ಸಾಂಸ್ಕೃತಿಕವಾಗಿಯೂ ನಾಡುಕಟ್ಟುವ ಕೆಲಸದಲ್ಲಿಯೂ ಮುಂಚೂಣಿಯಲ್ಲಿದ್ದ ತೇಜಸ್ವಿಯವರು ಗೆಳೆಯರೊಡಗೂಡಿ 1974ರಲ್ಲಿ 'ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ವನ್ನು ಸ್ಥಾಪಿಸಿದ್ದರು. ಇದು ಇವರ ಸಾಂಸ್ಕೃತಿಕ ಮನಸ್ಸಿಗೆ ಸಾಕ್ಷಿಯಾಗಿದೆ. ಇದೇ ಸಂಘಟನೆ ಮುಂದೆ ರೈತ ಚಳವಳಿ, ದಲಿತ ಚಳವಳಿ, ಬಂಡಾಯ ಸಾಹಿತ್ಯ ಚಳವಳಿಗಳಿಗೆ ಮುನ್ನುಡಿಯಾದದ್ದು ಈಗ ಇತಿಹಾಸ. ಆ ಕಾಲದಲ್ಲಿ ಈ ಎಲ್ಲಾ ಚಳವಳಿಗಳಲ್ಲೂ ತೇಜಸ್ವಿಯವರಿದ್ದರು. ತಮ್ಮ ಬದುಕಿನುದ್ದಕ್ಕೂ ವಿಶ್ವಮಾನವರಾಗಿಯೇ ಪ್ರಜ್ವಲಿಸಿದ ತೇಜಸ್ವಿಯವರು 1966ರಲ್ಲಿ ತಾವು ಪ್ರೀತಿಸಿದ ಆರ್.ರಾಜೇಶ್ವರಿಯವರನ್ನು ಅಂತರ್ಜಾತಿ ವಿವಾಹವಾಗಿ, ಸುಸ್ಮಿತಾ ಮತ್ತು ಈಶಾನ್ಯೆ ಎಂಬ ಎರಡು ಹೆಣ್ಣು ಮಕ್ಕಳ ತಂದೆಯಾಗಿ ಪಟ್ಟಣದ ಸೋಂಕಿಲ್ಲದೆ ಪ್ರಕೃತಿಯ ತೊಟ್ಟಿಲು ಮೂಡಿಗೆರೆಯ 'ಚಿತ್ರಕೂಟ' ಎಂಬ ತೋಟದ ಮನೆಯಲ್ಲಿ ಬದುಕು ಕಳೆದು ಸಾಹಿತ್ಯ ಲೋಕಕ್ಕೆ ತಮ್ಮ ಅಮೂಲ್ಯ ಕೃತಿಗಳನ್ನು ಕಾಣಿಕೆ ಯಾಗಿ ನೀಡಿ ಹೋಗಿದ್ದಾರೆ. ಕೃತಿಗಳ ಮೂಲಕ ಚಿರಂಜೀವಿಯಾಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com





ಯಾವ ಪಕ್ಷದ ಜೊತೆಗೂ ಮೈತ್ರಿ ಇಲ್ಲ

ಸಚಿವ ಎಸ್.ಟಿ.ಸೋಮಶೇಖರ್ ಸ್ಪಷ್ಟನೆ

ಮೈಸೂರು, ಸೆ.6(ಆರ್‌ಕೆಬಿ)–ಮೇಯರ್ ಚುನಾವಣೆಯಲ್ಲಿ ಬಿಜೆಪಿ ಯಾವ ಪಕ್ಷದೊಂದಿಗೂ ಮೈತ್ರಿಯಾಗಲೀ, ಹೊಂದಾಣಿಕೆಯಾಗಲೀ ಮಾಡಿಕೊಂಡಿಲ್ಲ. ಮೇಯರ್ ಶಿವಕುಮಾರ್ ಅವರು ಎಲ್ಲಾ ಪಕ್ಷದವರ ವಿಶ್ವಾಸ ಹೊಂದಿರುವುದರಿಂದ ಅವರ ಗೆಲುವು ಸಾಧ್ಯವಾಗಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಚುನಾವಣೆ ಬಳಿಕ ಪಾಲಿಕೆ ಆವರಣದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾವು ಹೊಂದಾಣಿಕೆ ಮಾಡಿಕೊಂಡಿಲ್ಲ. ಆದರೂ ಇತರೆ ಪಕ್ಷದ ಸದಸ್ಯರು ಶಿವಕುಮಾರ್ ಅವರನ್ನು ಬೆಂಬಲಿಸಿದ್ದಾರೆ. ಓಟು ಕೊಡುವವರನ್ನು ಬೇಡ ಎನ್ನಲಾಗುತ್ತದೆಯೇ. ಅವರಾಗಿ ಓಟು ಕೊಟ್ಟಿದ್ದಾರೆ. ಎಲ್ಲರೂ ಪಕ್ಷ ಭೇದ ಮರೆತು ಓಟು ಮಾಡಿದ್ದಾರೆ. ಹಾಗಾಗಿ ಶಿವಕುಮಾರ್ ಸರಾಗವಾಗಿ ಗೆಲುವು ಸಾಧಿಸಿದ್ದಾರೆ ಎಂದರು.

ಮೇಯರ್ ಶಿವಕುಮಾರ್ ಸರಳ, ಸಜ್ಜನಿಕೆಯ ವ್ಯಕ್ತಿ. ಮೂರು ಬಾರಿ ನಗರಪಾಲಿಕೆ ಸದಸ್ಯರಾಗಿದ್ದಾರೆ. ನಾಯಕ ಸಮುದಾಯದವರು. ಸಾಮಾನ್ಯ ವರ್ಗಕ್ಕೆ ಮೇಯರ್ ಸ್ಥಾನ ಮೀಸಲಾಗಿದ್ದರೂ ಮುಖ್ಯಮಂತ್ರಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದ ಅವರನ್ನು ಆಯ್ಕೆ ಮಾಡುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಪಕ್ಷವು ನಾಯಕ ಜನಾಂಗದ ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಟ್ಟಿದೆ ಎಂದು ತಿಳಿಸಿದರು. ಮೇಯರ್ ಸ್ಥಾನ ಬಿಜೆಪಿ ವಶಕ್ಕೆ ಪಡೆಯಲು ತಂತ್ರಗಾರಿಕೆ ಮಾಡಿ, ಬಿಜೆಪಿ ಉಸ್ತುವಾರಿ ನಿರ್ಮಲ್ ಕುಮಾರ್ ಸುರಾನಾ ಅವರು ನನ್ನನ್ನೂ ಸೇರಿದಂತೆ ಕಾರ್ಪೊರೇಟರ್‌ಗಳು, ಶಾಸಕರು, ಸಂಸದರು ಮತ್ತು ಪಕ್ಷದ ಎಲ್ಲಾ ಮುಖಂಡರ ಪ್ರತ್ಯೇಕ ಹೇಳಿಕೆಗಳನ್ನು ಪಡೆದುಕೊಂಡರು. ಏಕೆಂದರೆ ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಸೇರಿದ್ದರಿಂದ 3–4 ಜನ ಆಕಾಂಕ್ಷಿಗಳಿದ್ದರು. ಮುಖ್ಯಮಂತ್ರಿಗಳು ಮತ್ತು ಪಕ್ಷದ ರಾಜ್ಯಾಧ್ಯಕ್ಷರು ನಿರ್ಧಾರ ಮಾಡಿದ್ದ ಪ್ರಕಾರ ನಾಯಕ ಜನಾಂಗದವರಿಗೆ ಈ ಬಾರಿ ಮೇಯರ್ ಮಾಡಬೇಕು ಎಂಬುದಿತ್ತು. ಸುರಾನಾ ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ತಂಡದಂತೆ ಕೆಲಸ ಮಾಡಿದರು. ಶಿವಕುಮಾರ್ ಅವರನ್ನು ಆಯ್ಕೆ ಮಾಡುತ್ತಿದ್ದೇವೆ. ಎಲ್ಲರೂ ಸಹಕರಿಸುವಂತೆ ಕೋರಿದರು. ಹಾಗಾಗಿ ನಮ್ಮ ಪಕ್ಷ ಶೇಕಡ ನೂರರಷ್ಟು ಗೆಲುವು ಪಡೆಯಲು ಸಾಧ್ಯವಾಯಿತು ಎಂದರು. ಅದೇ ರೀತಿ ಉಪಮೇಯರ್ ಕೂಡ ನಮ್ಮ ಪಕ್ಷದವರೇ ಆಗಿದ್ದು, ಹಿಂದುಳಿದ ಉಪ್ಪಾರ ಜನಾಂಗದವರಾಗಿದ್ದಾರೆ. ಎಷ್ಟೋ ವರ್ಷಗಳಿಂದ ಈ ಜನಾಂಗದವರಿಗೆ ಅವಕಾಶ ನೀಡಿರಲಿಲ್ಲ. ಈ ಬಾರಿ ಕೊಟ್ಟಂತಾಗಿದೆ. ಅದಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುವುದಾಗಿ ಹೇಳಿದರು.

ಮೇಯರ್ ಶಿವಕುಮಾರ್ 3 ಬಾರಿ ಕಾರ್ಪೊರೇಟರ್ ಆಗಿದ್ದಾರೆ. ಉಪಮೇಯರ್ ರೂಪಾ ಅವರೂ ಆ ಸ್ಥಾನಕ್ಕೆ ಅರ್ಹರು. ಇಬ್ಬರೂ ಪಕ್ಷದ ಬಗ್ಗೆ ಬದ್ಧತೆ ಹೊಂದಿರುವವರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಆಡಳಿತ ನೀಡುತ್ತಾರೆಂಬ ವಿಶ್ವಾಸವಿದೆ ಎಂದರು.

ಅಧಿಕಾರಿಗಳದ್ದೇ ತಪ್ಪು

ಮೈಸೂರು, ಸೆ.6(ಆರ್‌ಕೆ)–ನಾಮಪತ್ರ ಸ್ವೀಕರಿಸುವಾಗ ಬಿಸಿಎ ಪ್ರಮಾಣ ಪತ್ರ ಕೇಳಿ ಪಡೆಯದೇ ಇರುವುದು ಅಧಿಕಾರಿಗಳು ಮಾಡಿದ ತಪ್ಪು ಎಂದು ರೇಷ್ಮಾ ಬಾನು ಅವರ ನಾಮಪತ್ರ ದಾಖಲೆ ಸಿದ್ಧಪಡಿಸಿದ್ದ ಮಾಜಿ ಮೇಯರ್ ಆರ್.ಲಿಂಗಪ್ಪ ದೂರಿದ್ದಾರೆ.



ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಶಾಸಕ ಸಾ.ರಾ.ಮಹೇಶ್ ಅವರ ಕಚೇರಿಯಲ್ಲೇ ಕುಳಿತು ನಾನೇ ಮೇಯರ್, ಉಪ ಮೇಯರ್ ಅಭ್ಯರ್ಥಿಗಳ ನಾಮಪತ್ರದ ನಮೂನೆ ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ಕಳುಹಿಸಿದ್ದೆ. ಆದರೆ ರೇಷ್ಮಾಬಾನು ಅವರು ಸಾಮಾನ್ಯ ವರ್ಗದಿಂದ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ ಎಂಬುದು ನಮಗೆ ಗೊತ್ತಿರಲಿಲ್ಲ ಎಂದರು. ಬಿಸಿಎಯಿಂದಲೇ ಗೆದ್ದಿರಬಹುದೆಂದು ತಿಳಿದು ಜಾತಿ ಪ್ರಮಾಣ ಪತ್ರ ಲಗತ್ತಿಸಿರಲಿಲ್ಲ. ಆದರೆ ಪಾಲಿಕೆ ಕಚೇರಿಯಲ್ಲಿ ಅಭ್ಯರ್ಥಿಗಳ ನಾಮಪತ್ರ ಸ್ವೀಕರಿಸಿದ ಕೌನ್ಸಿಲ್ ಕಾರ್ಯದರ್ಶಿಗಳು, ಹೇಳಿ ಅವರ ಪ್ರಮಾಣ ಪತ್ರ ತರಿಸಿಕೊಳ್ಳಬಹುದಿತ್ತು. ಅಧಿಕಾರಿಗಳು ಮಾಡಿದ ಮಹಾ ಎಡವಟ್ಟಿನಿಂದಾಗಿ ನಮ್ಮ ಪಕ್ಷದ ಉಪ ಮೇಯರ್ ಅಭ್ಯರ್ಥಿ ರೇಷ್ಮಾಭಾನು ಅವರಿಗೆ ಅವಕಾಶ ಕೈತಪ್ಪಿತೇ ಹೊರತು, ಬೇರೆ ಯಾರೂ ಅದಕ್ಕೆ ಕಾರಣರಲ್ಲ ಎಂದು ದೂರಿದರು. ಪ್ರಕ್ರಿಯೆ ಆರಂಭವಾದಾಗ ಪರಿಶೀಲನೆ ವೇಳೆ ಚುನಾವಣಾಧಿಕಾರಿಗಳು ಈ ವಿಷಯ ತಿಳಿಸಿದಾಗ ನಮ್ಮವರು ಬಿಸಿಎ ಪ್ರಮಾಣ ಪತ್ರ ತಂದುಕೊಡುತ್ತೇವೆ. ಹತ್ತೇ ನಿಮಿಷ ಅವಕಾಶ ಕೊಡಿ ಎಂದು ಕೇಳಿದರೂ, ಅಡ್ಡಿಪಡಿಸಿದ ಕಾಂಗ್ರೆಸ್ ಸದಸ್ಯರಿಗೆ ನಮ್ಮ ಜಾತ್ಯತೀತ ಜನತಾ ದಳದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದ ಲಿಂಗಪ್ಪ, ಒಬ್ಬ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಯನ್ನು ಉಪ ಮೇಯರ್ ಮಾಡಲು ನಮ್ಮ ಪಕ್ಷ ಪ್ರಯತ್ನಿಸಿತ್ತು. ಅದನ್ನು ತಡೆದವರೇ ಕಾಂಗ್ರೆಸ್‌ನವರು ಎಂದು ಕಿಡಿಕಾರಿದ್ದಾರೆ.

ರಾಜೀನಾಮೆ?: ಬಿಸಿಎ ಪ್ರಮಾಣ ಪತ್ರ ಲಗತ್ತಿಸಿಲ್ಲ ಎಂಬ ಕಾರಣಕ್ಕೆ ಕೈತಪ್ಪಿರುವ ಉಪ ಮೇಯರ್ ಸ್ಥಾನವನ್ನು ಈಗ ಆಯ್ಕೆಯಾಗಿರುವ ರೂಪಾ ಅವರಿಂದ ರಾಜೀನಾಮೆ ಕೊಡಿಸಿ ಮತ್ತೆ ಚುನಾವಣೆ ಮಾಡಿ, ಜೆಡಿಎಸ್‌ಗೆ ನ್ಯಾಯ ಒದಗಿಸಬೇಕೆಂದು ಕೆಲವರು ಒತ್ತಾಯ ಮಾಡಿದಾಗ ಕೆಲ ಬಿಜೆಪಿ ಮುಖಂಡರು ಸಮ್ಮತಿಸಿದ್ದು, ಆ ಬಗ್ಗೆ ಪಾಲಿಕೆ ಕಚೇರಿಯಲ್ಲಿ ಚರ್ಚೆ ನಡೆಯುತ್ತಿತ್ತು ಎಂದರು.

ಈ ರೀತಿಯ ರಾಜಕಾರಣ ನಾವು ಮಾಡಿಲ್ಲ

ಕಾಂಗ್ರೆಸ್ ವಿರುದ್ಧ ಶಾಸಕ ಸಾ.ರಾ.ಮಹೇಶ್ ಆಕ್ರೋಶ



ಮೈಸೂರು, ಸೆ.6(ಆರ್‌ಕೆಬಿ)–ಮೇಯರ್ ಚುನಾವಣೆಯ ಅಂತಿಮ ಘಟ್ಟದಲ್ಲಿ ಕಾಂಗ್ರೆಸ್ ಪಕ್ಷ ಜೆಡಿಎಸ್ ಸದಸ್ಯೆಯನ್ನು ಹೈಜಾಕ್ ಮಾಡಿದೆ. ಎಲ್ಲವನ್ನೂ ಮತದಾರರು ಗಮನಿಸುತ್ತಿದ್ದಾರೆ. ಈ ರೀತಿಯ ರಾಜಕೀಯ ನಾವು ಮಾಡಿಲ್ಲ ಎಂದು ಕೆ.ಆರ್. ನಗರ ಶಾಸಕ ಸಾ.ರಾ.ಮಹೇಶ್ ಕಾಂಗ್ರೆಸ್ ಪಕ್ಷದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚುನಾವಣೆ ಆರಂಭಕ್ಕೂ ಮುನ್ನ ತಮ್ಮ ಪಕ್ಷದ ಪಾಲಿಕೆ ಸದಸ್ಯರೊಂದಿಗೆ ನಗರಪಾಲಿಕೆ ಆವರಣಕ್ಕೆ ಆಗಮಿಸಿದ ಸಾ.ರಾ.ಮಹೇಶ್ ಅವರು ಪಕ್ಷದ ಕಾರ್ಯತಂತ್ರಗಳ ಬಗ್ಗೆ ಪಕ್ಷದ ಮುಖಂಡರು ಮತ್ತು ಪಾಲಿಕೆ ಸದಸ್ಯರೊಂದಿಗೆ ಚರ್ಚಿಸಿದರು. ನಂತರ ಅವರು ಚುನಾವಣೆಗೆ ಕೆಲ ನಿಮಿಷಗಳಿರುವ ವೇಳೆ ಅಲ್ಲಿಂದ ಹೊರ ನಡೆದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಾ.ರಾ.ಮಹೇಶ್, ಎಲ್ಲವನ್ನೂ ಮತದಾರರು ಗಮನಿಸುತ್ತಿದ್ದಾರೆ. ಇಂತಹ ರಾಜಕೀಯ ನಾವು ಮಾಡಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಕಿಡಿ ಕಾರಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಆಪರೇಷನ್ ಕಮಲ ನಡೆದಿತ್ತು... ಜೆಡಿಎಸ್ ಮುಖವಾಡ ಬಯಲಾಗಿದೆ...

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಆರೋಪ



ಮೈಸೂರು, ಸೆ.6(ಆರ್‌ಕೆಬಿ)–ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಸೆಳೆಯಲು ಆಪರೇಷನ್ ಕಮಲಕ್ಕೆ ಬಿಜೆಪಿ ಮುಂದಾಗಿತ್ತು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ದೂರಿದ್ದಾರೆ.

ಮೇಯರ್ ಚುನಾವಣೆ ಬಳಿಕ ಮೈಸೂರು ನಗರಪಾಲಿಕೆ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಹಾನಗರ ಪಾಲಿಕೆಯಲ್ಲಿ ನಮ್ಮ ಪಕ್ಷದ ಸದಸ್ಯರು ನ್ಯಾಯಯುತವಾಗಿ ಮತದಾನ ಮಾಡಿದ್ದಾರೆ. ಜೆಡಿಎಸ್ ಒಂದು ಕಡೆ ಜಾತ್ಯತೀತ ಅಂತಾ ಹೇಳಿಕೊಂಡು ಈಗ ಬಿಜೆಪಿಗೆ ಬೆಂಬಲ ನೀಡಿದೆ. ಈ ಮೂಲಕ ಜೆಡಿಎಸ್ ತನ್ನ ಮುಖವಾಡವನ್ನು ಜನರ ಮುಂದೆ ಮತ್ತೊಮ್ಮೆ ಕಳಚಿದೆ. ಕೋಮುವಾದಿ ಪಕ್ಷಕ್ಕೆ ಬೆಂಬಲ ಸೂಚಿಸಿದೆ. ಹಾಗಾಗಿ ರಾಜ್ಯದ ಜನತೆ ಮುಂಬರುವ ಚುನಾವಣೆಯಲ್ಲಿ ಅವರಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ತಿಳಿಸಿದರು. ಬಿಜೆಪಿ ದುರುದ್ದೇಶದಿಂದ ಅಲ್ಪಸಂಖ್ಯಾತ ಮಹಿಳೆಗೆ ಉಪಮೇಯರ್ ಸ್ಥಾನ ತಪ್ಪಿದೆ. ಇದು ಪೂರ್ವ ನಿಯೋಜಿತ ಪ್ಲಾನ್ ಎಂದು ಅವರು ಟೀಕಿಸಿದರು.

ನೂತನ ಮೇಯರ್, ಉಪಮೇಯರ್ ಅಭಿನಂದಿಸಿದ ಕಟೀಲ್



ಬೆಂಗಳೂರು, ಸೆ.6– ಮೈಸೂರು ನಗರಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆಯಾದ ಶಿವಕುಮಾರ್ ಮತ್ತು ಉಪ ಮೇಯರ್ ಡಾ.ಜಿ.ರೂಪ ಯೋಗೀಶ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅಭಿನಂದಿಸಿದ್ದಾರೆ.

ಮೂರು ಬಾರಿ ಕಾರ್ಪೊರೇಟರ್ ಆಗಿ ಅನುಭವ ಹೊಂದಿರುವ ಶಿವಕುಮಾರ್, ಹಿಂದುಳಿದ ವರ್ಗದ ಮುಖಂಡರಾಗಿದ್ದು, ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿದ್ದವರು. ಹಿಂದುಳಿದ ವರ್ಗಕ್ಕೆ ಸೇರಿದ ಡಾ.ಜಿ. ರೂಪ ಯೋಗೀಶ್ ಅವರು ಡಾಕ್ಟರೇಟ್ ಪದವಿ ಪಡೆದವರು. ಇವರ ನೇತೃತ್ವದಲ್ಲಿ ಮೈಸೂರು ನಗರವು ಸಮಗ್ರ ಅಭಿವೃದ್ಧಿ ಹೊಂದುವಂತಾಗಲಿ ಎಂದು ಹಾರೈಸಿದ್ದಾರೆ.

ಈ ಚುನಾವಣೆಗೆ ಪ್ರಭಾರಿಯಾಗಿ ಪಕ್ಷದ ರಾಜ್ಯ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನಾ ಮತ್ತು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದು ಪ್ರಶಂಸಿಸಿದ್ದಾರೆ.

ಜೆಡಿಎಸ್ ವಿರುದ್ಧ ನಿರ್ಮಲಾ ನಡೆ



ಮೈಸೂರು, ಸೆ.6(ಆರ್‌ಕೆ)–ನಿನ್ನೆ (ಮಂಗಳವಾರ) ವರೆಗೂ ಜೆಡಿಎಸ್‌ನಲ್ಲೇ ಇದ್ದ 45ನೇ ವಾರ್ಡ್ ಜೆಡಿಎಸ್ ಸದಸ್ಯೆ ಕೆ.ನಿರ್ಮಲಾ, ಇಂದು ನಡೆದ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿ ಅಚ್ಚರಿ ಮೂಡಿಸಿದರು.

ಪಾಲಿಕೆ ಉಪ ಮೇಯರ್ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ನಿರ್ಮಲಾಗೆ ಜೆಡಿಎಸ್‌ನಿಂದ ಗ್ರೀನ್ ಸಿಗ್ನಲ್ ಸಿಗಲಿಲ್ಲ. ಅದರಿಂದ ಬೇಸತ್ತ ಅವರು, ಇಂದು ಬೆಳಗ್ಗೆ ಮೇಯರ್ ಚುನಾವಣೆಗೆ ಮತ ಚಲಾಯಿಸಲು ಕಾಂಗ್ರೆಸ್ ಸದಸ್ಯರೊಂದಿಗೆ ಬಂದರಲ್ಲದೆ, ಜೆಡಿಎಸ್ ಬಂಡಾಯ ಅಭ್ಯರ್ಥಿಯಾಗಿ ಉಪ ಮೇಯರ್ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸಿದರು. ಮತದಾನದ ವೇಳೆ ಮೇಯರ್ ಅಭ್ಯರ್ಥಿ ಕಾಂಗ್ರೆಸ್‌ನ ಸೈಯ್ಯದ್ ಅಸ್ರತ್ ಉಲ್ಲಾ ಪರವಾಗಿ ಕೈ ಎತ್ತುವ ಮೂಲಕ ಜೆಡಿಎಸ್ ಪಾಳಯದಲ್ಲಿ ಅಚ್ಚರಿ ಮೂಡಿಸಿದರು. ರೇಷ್ಮಾಬಾನು ಬದಲಾಗಿ ನಿರ್ಮಲಾ ಅವರನ್ನೇ ಉಪ ಮೇಯರ್ ಸ್ಥಾನಕ್ಕೆ ಜೆಡಿಎಸ್ ಕಣಕ್ಕಿಳಿಸಿದ್ದರೆ, ಪಕ್ಷವು ಪಾಲಿಕೆ ಆಡಳಿತದಲ್ಲಿ ಪಾಲುದಾರರಾಗಬಹುದಿತ್ತು. ಜೆಡಿಎಸ್ ಮಾಡಿದ ಯಡವಟ್ಟಿನಿಂದಾಗಿ ಬಿಜೆಪಿಯೊಂದಿಗೆ ಕೈಜೋಡಿಸಿದ್ದರೂ, ಅತ್ತ ಮೇಯರ್ ಸ್ಥಾನವೂ ಇಲ್ಲ, ಇತ್ತ ಉಪ ಮೇಯರ್ ಸ್ಥಾನವೂ ಕೈತಪ್ಪಿದಂತಾಗಿದೆ.

ಮೈತ್ರಿಯಿಂದ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ...!?

ಎಡವಟ್ಟಿನಿಂದ ಜೆಡಿಎಸ್‌ಗೆ ತಪ್ಪಿದ ಉಪ ಮೇಯರ್ ಸ್ಥಾನ

ಮೈಸೂರು, ಸೆ.6(ಆರ್‌ಕೆ)–ಕಾಂಗ್ರೆಸ್‌ಗೆ ಅಧಿಕಾರ ತಪ್ಪಿಸಲೆಂದು ಅಂತಿಮ ಕ್ಷಣದಲ್ಲಿ ಬಿಜೆಪಿಯೊಂದಿಗೆ ಸಖ್ಯ ಬೆಳೆಸಿದರೂ ಜೆಡಿಎಸ್‌ಗೆ ಕನಿಷ್ಠ ಉಪ ಮೇಯರ್ ಸ್ಥಾನವೂ ಸಿಗದೇ ಮುಖಭಂಗ ಅನುಭವಿಸಿದೆ.

ಅಂತಿಮ ಘಟ್ಟದಲ್ಲಿ ಜೆಡಿಎಸ್‌ನ ರೇಷ್ಮಾಬಾನುವಿಗೆ ದಕ್ಕಬೇಕಾದ ಉಪ ಮೇಯರ್ ಸ್ಥಾನ ಕೈತಪ್ಪಿತು. ಇದಕ್ಕೆ ಆ ಪಕ್ಷದ ಎಡವಟ್ಟೇ ಕಾರಣ. ಇತ್ತ ಬಿಜೆಪಿಗೆ ವರದಾನವಾಗಿ ಅನಿರೀಕ್ಷಿತವಾಗಿ ಡಾ. ಜಿ.ರೂಪಾ ಅವರಿಗೆ ಅದೃಷ್ಟಲಕ್ಷ್ಮಿ ಒಲಿದದ್ದು ಅಚ್ಚರಿ ಮೂಡಿಸಿದೆ. ಅಧಿಕಾರ ಹಿಡಿಯಲೇಬೇಕೆಂದು ಕೊನೇ ಕ್ಷಣದಲ್ಲಿ ಬಿಜೆಪಿಯೊಂದಿಗೆ ಕೈಜೋಡಿಸಿದ ಜೆಡಿಎಸ್ ಮುಖಂಡರು ಶಾಸಕ ಸಾ.ರಾ.ಮಹೇಶ್ ನಿರ್ದೇಶನದಂತೆ ಪಕ್ಷದ ಕಾರ್ಪೊರೇಟರ್ ರೇಷ್ಮಾಬಾನು ಅವರನ್ನು ಉಪ ಮೇಯರ್ ಸ್ಥಾನಕ್ಕಾಗಿ ಕಣಕ್ಕಿಳಿಸಲಾಗಿತ್ತು.

ಬಿಸಿಎ ಮಹಿಳೆಗೆ ಮೀಸಲಾಗಿದ್ದ ಉಪ ಮೇಯರ್ ಗಾದಿಗೆ ಪಾಲಿಕೆ ಚುನಾವಣೆಯಲ್ಲಿ ಸಾಮಾನ್ಯ ವರ್ಗದಿಂದ ಸ್ಪರ್ಧಿಸಿ 17ನೇ ವಾರ್ಡ್‌ನಿಂದ ಆಯ್ಕೆಯಾಗಿದ್ದ ರೇಷ್ಮಾಬಾನು ನಾಮಪತ್ರ ಸಲ್ಲಿಸಿದ್ದರಾದರೂ, ಮೀಸಲಾತಿಗೆ ಪೂರಕವಾಗಿ ಅಗತ್ಯವಿದ್ದ ಬಿಸಿಎ ಪ್ರಮಾಣ ಪತ್ರ ಲಗತ್ತಿಸುವುದನ್ನು ಮರೆತಿದ್ದರು. ಆ ವೇಳೆ ನಾಮಪತ್ರ ಸ್ವೀಕರಿಸಿದ ಅಧಿಕಾರಿಗಳೂ ಈ ಬಗ್ಗೆ ತಿಳುವಳಿಕೆ ನೀಡಿರಲಿಲ್ಲ.



ರೇಷ್ಮಾಬಾನು

ಆದರೆ, ನಾಮಪತ್ರಗಳ ಪರಿಶೀಲಿಸಿದ ಚುನಾವಣಾಧಿಕಾರಿ ಜಿ.ಸಿ.ಪ್ರಕಾಶ್, ಬಿಸಿಎ ಮೀಸಲು ಸರ್ಟಿಫಿಕೇಟ್ ಇಲ್ಲದ ಕಾರಣ ರೇಷ್ಮಾಬಾನು ಅವರ ಉಮೇದುವಾರಿಕೆಯನ್ನು ತಿರಸ್ಕರಿಸಲಾಗಿದೆ ಎಂದು ಘೋಷಿಸಿದಾಗ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರಿಗೆ ದಿಕ್ಕೇ ತೋಚಲಿಲ್ಲ. ನಾಮಪತ್ರ ಸ್ವೀಕರಿಸುವಾಗಲೇ ನೀವು ಹೇಳಬೇಕಿತ್ತು. ಅಭ್ಯರ್ಥಿಗೆ ಸದರಿ ಪ್ರಮಾಣ ಪತ್ರದ ಪ್ರತಿ ತಂದುಕೊಡಲು ಈಗಲೂ ಅವಕಾಶ ನೀಡಬೇಕೆಂದು ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾರ್ಪೊರೇಟರ್ ಎಸ್‌ಬಿಎಂ ಮಂಜು ಮನವಿ ಮಾಡಿದರೂ, ನಿಮ್ಮೆಲ್ಲರ ಸಮ್ಮುಖದಲ್ಲೇ ನಾಮಪತ್ರಗಳ ಪರಿಶೀಲನೆ ನಡೆಸಿದ್ದೇವೆ. ಬೆಳಗ್ಗೆ 10 ಗಂಟೆವರೆಗೂ ನಾಮಪತ್ರ ಸಲ್ಲಿಸಲು ಅವಕಾಶವಿತ್ತು. ಜೊತೆಗೆ ಬಿಸಿಎ ಮೀಸಲಾತಿಯಡಿ ಸ್ಪರ್ಧಿಸಿ, ಆಯ್ಕೆಯಾಗಿದ್ದರೆ ಸರ್ಟಿಫಿಕೇಟ್ ಅಗತ್ಯವಿರಲಿಲ್ಲ. ಸಾಮಾನ್ಯ ವರ್ಗದಿಂದ ಆಯ್ಕೆಯಾಗಿ ಮೀಸಲಾತಿಯಲ್ಲಿ ಉಪ ಮೇಯರ್ ಸ್ಥಾನಕ್ಕೆ ಸ್ಪರ್ಧಿಸುವಾಗ ಪೂರಕ ದಾಖಲೆ ಒದಗಿಸದಿರುವುದರಿಂದ ತಾಂತ್ರಿಕ ತೊಂದರೆ ಉಂಟಾಗಿದೆ. ಆದ ಕಾರಣ ರೇಷ್ಮಾಬಾನು ಅವರ ನಾಮಪತ್ರ ತಿರಸ್ಕೃತಗೊಂಡಿದೆ ಎಂದು ಚುನಾವಣಾಧಿಕಾರಿಗಳು ಸಮಜಾಯಿಷಿ ನೀಡಿದರು.



ಒಲಿದ ಅದೃಷ್ಟ: ರೇಷ್ಮಾಬಾನು ಅವರ ನಾಮಪತ್ರ ತಿರಸ್ಕೃತಗೊಳ್ಳುತ್ತಿದ್ದಂತೆಯೇ ಉಪ ಮೇಯರ್ ಸ್ಥಾನದ ಬಿಜೆಪಿ ಅಭ್ಯರ್ಥಿ ಡಾ.ಜಿ.ರೂಪಾ ಅವರನ್ನು ಅನಿವಾರ್ಯ ವಾಗಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಪೊರೇಟರ್‌ಗಳು ಬೆಂಬಲಿಸಬೇಕಾಯಿತು. ಒಂದು ವೇಳೆ ರೇಷ್ಮಾಬಾನು ಅವರ ಉಮೇದುವಾರಿಕೆ ಸಿಂಧುವಾಗಿದ್ದರೆ ಬಿಜೆಪಿಯ ರೂಪಾ ಉಮೇದುವಾರಿಕೆ ಹಿಂಪಡೆಯಲು ಸಿದ್ಧರಾಗಿದ್ದರು. ಜೆಡಿಎಸ್‌ನ ಎಡವಟ್ಟಿನಿಂದ ಅಂತಿಮ ಕ್ಷಣದಲ್ಲಿ ರೂಪಾ ಅವರಿಗೆ ಉಪ ಮೇಯರ್ ಅದೃಷ್ಟ ಒಲಿಯಿತು.

ಜೆಡಿಎಸ್ ಯಡವಟ್ಟು: ನಾಮಪತ್ರ ಸಲ್ಲಿಸುವಾಗ ಎಚ್ಚರ ವಹಿಸದ ಜೆಡಿಎಸ್ ಮುಖಂಡರು, ಅಭ್ಯರ್ಥಿಯ ಎಡವಟ್ಟಿನಿಂದಾಗಿ ರೇಷ್ಮಾಬಾನು ಅವರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿ ಭಾರೀ ನಿರಾಸೆ ಉಂಟಾಯಿತು.

ಹೈಡ್ರಾಮಾ: ಉಪ ಮೇಯರ್ ಸ್ಥಾನ ಕೈತಪ್ಪಿದ್ದರಿಂದ ಅಸಮಾಧಾನಗೊಂಡ ಜೆಡಿಎಸ್ ಶಾಸಕರು ಹಾಗೂ ಪಾಲಿಕೆ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದಾಗ ಸಭಾಂಗಣದಲ್ಲಿ ಹೈಡ್ರಾಮಾವೇ ನಡೆಯಿತು. ಉದ್ದೇಶಪೂರ್ವಕವಾಗಿಯೇ ಅಧಿಕಾರಿಗಳು ನಾಮಪತ್ರ ಸಲ್ಲಿಸುವಾಗ ಮಾಹಿತಿ ನೀಡದೇ ಪರಿಶೀಲನೆ ವೇಳೆ ಏಕಾಏಕಿ ರೇಷ್ಮಾಬಾನು ಅರ್ಜಿ ತಿರಸ್ಕರಿಸಿದ್ದಾರೆ. ಇದರಿಂದ ಅನ್ಯಾಯವಾಗಿದೆ ಎಂದು ಏರು ಧನಿಯಲ್ಲಿ ಪ್ರಶ್ನಿಸಿದಾಗ ಗದ್ದಲ ಉಂಟಾಯಿತು.

ಕಾಂಗ್ರೆಸ್‌ನಿಂದ ಆರೋಪ: ಉದ್ದೇಶಪೂರ್ವಕವಾಗಿಯೇ ಅರ್ಜಿ ತಿರಸ್ಕೃತವಾಗುವಂತೆ ಮಾಡಿರುವ ನಿಮ್ಮ ಜಾತ್ಯತೀತ ತತ್ವದ ಮುಖವಾಡ ಇಲ್ಲಿ ಬಯಲಾಗಿದೆ. ನಿಮ್ಮ ಮೊಸಳೆ ಕಣ್ಣೀರು, ನಾಟಕ ಇಲ್ಲಿ ನಡೆಯುವುದಿಲ್ಲ ಎಂದು ಜೆಡಿಎಸ್ ವಿರುದ್ಧ ಹರಿಹಾಯ್ದ ಕಾಂಗ್ರೆಸ್ ಸದಸ್ಯರು, ವ್ಯವಸ್ಥಿತವಾಗಿ ಅಲ್ಪಸಂಖ್ಯಾತ ಮಹಿಳೆಗೆ ಮೋಸ ಮಾಡಿದ್ದೀರಿ. ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ನಿಮಗೆ ತಕ್ಕಶಾಸ್ತಿಯಾಗಿದೆ ಎಂದು ಕುಟುಕಿದರು.

ಜೆಡಿಎಸ್, ಬಿಜೆಪಿಯ ಬಿ ಟೀಂ ಎಂಬುದು ಮತ್ತೊಮ್ಮೆ ಸಾಬೀತು

ಮೈಸೂರು, ಸೆ.6(ಜಿಎ)– ಜೆಡಿಎಸ್ ಪಕ್ಷವು ಬಿಜೆಪಿಯ ಬಿ ಟೀಂ ಎಂದು ಕಾಂಗ್ರೆಸ್ ಪದೇ ಪದೆ ಹೇಳಿಕೊಂಡು ಬರುತ್ತಿದ್ದು, ಮೈಸೂರಿನಲ್ಲಿ ಇಂದು ಬಹಿರಂಗವಾಗಿಯೇ ಅದರ ಫಲಿತಾಂಶವನ್ನು ಕಾಣುತ್ತಿದ್ದೇವೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಮೇಯರ್, ಉಪಮೇಯರ್ ಚುನಾವಣೆಯ ಫಲಿತಾಂಶದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪಾಲಿಕೆ ಚುನಾವಣೆಯಲ್ಲಿ ಯಾರೊಂದಿಗೂ ಮೈತ್ರಿ ಮಾಡಿಕೊಳ್ಳಬೇಡಿ ಎಂಬ ವರಿಷ್ಠರ ಸಂದೇಶದ ಹಿನ್ನೆಲೆಯಲ್ಲಿ ನಾವು ಜೆಡಿಎಸ್, ಬಿಜೆಪಿ ಜೊತೆಗೆ ಸಮಾನ ಅಂತರವನ್ನು ಕಾಯ್ದುಕೊಂಡಿದ್ದೆವು. ಪದೇ ಪದೆ ಕಾಂಗ್ರೆಸ್ ಹೇಳುತ್ತಲೇ ಬಂದಿದೆ ಜೆಡಿಎಸ್, ಬಿಜೆಪಿಯ ಬಿ ಟೀಂ ಎಂದು. ಅದು ಮತ್ತೆ ಸಾಬೀತಾಗಿದೆ. ಈ ರೀತಿ ಒಳ ಒಪ್ಪಂದಗಳು ಬಹಳ ದಿನದಿಂದ ನಡೆಯುತ್ತಿತ್ತು. ಇಂದು ಬಹಿರಂಗವಾಗಿ ಮೈಸೂರಿನಲ್ಲಿ ಕಾಣುತ್ತಿದ್ದೇವೆ ಅಷ್ಟೇ ಎಂದರು.

ಅಲ್ಪಸಂಖ್ಯಾತ ಮಹಿಳೆಯನ್ನು ಉಪಮೇಯರ್ ಮಾಡಲು ಮುಂದಾದ ಜೆಡಿಎಸ್ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ಮಾಡಲು ಬೇಕಿರುವ ಅಗತ್ಯ ದಾಖಲಾತಿಗಳನ್ನು ನೀಡಬೇಕು ಎಂಬ ಮಾಹಿತಿ ಇದ್ದರೂ ಕೂಡ ಬಿಜೆಪಿಯವರನ್ನು ಮೇಯರ್, ಉಪ ಮೇಯರ್ ಮಾಡಬೇಕು ಎಂಬುದೇ ಇವರ ಮುಖ್ಯ ಉದ್ದೇಶವಾಗಿತು.



ಈ ಹಿನ್ನೆಲೆಯಲ್ಲಿ ನೆಪ ಮಾತ್ರಕ್ಕಾಗಿ ಉಪ ಮೇಯರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ ತಿರಸ್ಕೃತವಾಗಲು ಜೆಡಿಎಸ್‌ನವರೆ ಕಾರಣೀಕರ್ತರಾಗಿದ್ದು, ಬಿಜೆಪಿಗೂ ಬೇಕಿದ್ದಿದ್ದು ಇದೇ. ಎಲ್ಲವೂ ವ್ಯವಸ್ಥಿತವಾಗಿ ನಡೆದಿದ್ದು, ಸಿ.ಎಂ. ಇಬ್ರಾಹಿಂ ಜೆಡಿಎಸ್‌ಗೆ ಹೋದ ಮೇಲೂ ಅಲ್ಪಸಂಖ್ಯಾತರಿಗೆ ಈ ರೀತಿ ಆಗಿರುವುದು ನೋಡಿದರೆ, ತಿಳಿಯುತ್ತದೆ ಅಲ್ಪಸಂಖ್ಯಾತರ ಮೇಲೆ ಪ್ರೀತಿ ಇಲ್ಲ. ಬಿಜೆಪಿಯವರು ಹೇಳುತ್ತಾರೆ. ವಿಶ್ವಾಸದಿಂದ ಜೆಡಿಎಸ್‌ನವರು ನಮಗೆ ಮತ ನೀಡಿದ್ದಾರೆ ಎಂದು.

ಆದರೆ, ಇಲ್ಲಿ ನಡೆದಿರುವುದು ಮೈತ್ರಿ. ಅವರಿಬ್ಬರು ಮೊದಲೇ ಮಾತನಾಡಿಕೊಂಡಿದ್ದರು. ಜೆಡಿಎಸ್‌ನ ನಿರ್ಮಲಾ ಹರೀಶ್ ನಮ್ಮ ಪಕ್ಷದ ವರಿಷ್ಠರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ನೊಂದಿದ್ದರು. ಅದನ್ನು ನೋಡಿದ ವರಿಷ್ಠರು ಅವರಿಗೆ ರಕ್ಷಣೆ ನೀಡಬೇಕು ಎಂದು ತಿಳಿಸಿದ್ದರಿಂದ, ಪಕ್ಷೇತರ ಸದಸ್ಯರೂ ಅವರಿಗೆ ಅನುಮೋದನೆ ನೀಡಿದ್ದರಿಂದ ನಾವು ಅವರಿಗೆ ಅವಕಾಶ ನೀಡಿದ್ದೇವು. ಆದರೆ, ಇಲ್ಲಿ ಕಾಂಗ್ರೆಸ್ ನೇರವಾಗಿ ಭಾಗಿಯಾಗಿಲ್ಲ ಎಂದು ತಿಳಿಸಿದರು.

ಆಂಬುಲೆನ್ಸ್‌ನಲ್ಲಿ ಬಂದ ಬಿಜೆಪಿ ಕಾರ್ಪೊರೇಟರ್!



ಮೈಸೂರು, ಸೆ.6(ಆರ್‌ಕೆ)–ಮೇಯರ್, ಉಪ ಮೇಯರ್ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸಲು ಅನಾರೋಗ್ಯದಿಂದ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 28ನೇ ವಾರ್ಡ್ ಬಿಜೆಪಿ ಕಾರ್ಪೊರೇಟರ್ ಡಾ. ಅಶ್ವಿನಿ ಶರತ್ ಅವರು ಆಂಬುಲೆನ್ಸ್‌ನಲ್ಲೇ ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಬಂದಿದ್ದರು. ಶ್ವಾಸಕೋಶ ಸೋಂಕಿನಿಂದ ಬಳಲುತ್ತಿರುವ ಅವರು ಖಾಸಗಿ ಆಸ್ಪತ್ರೆ ಐಸಿಯುನಲ್ಲಿ ಆಕ್ಸಿಜನ್ ಸಪೋರ್ಟ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇಂದು ನಡೆದ ಮೇಯರ್, ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಮೇಯರ್ ಅಭ್ಯರ್ಥಿ ಪರವಾಗಿ ಆಸ್ಪತ್ರೆಯಿಂದ ಆಂಬುಲೆನ್ಸ್‌ನಲ್ಲೇ ಬಂದು ಮತ ಹಾಕಿ, ಹಿಂದಿರುಗಿದರು. ಜೆಡಿಎಸ್–ಬಿಜೆಪಿ ಮೈತ್ರಿಯಾಗಿದ್ದರಿಂದ ಉಪ ಮೇಯರ್ ಅಭ್ಯರ್ಥಿ ಅವರ ಬೆಂಬಲ ಇಲ್ಲದಿದ್ದರೂ ಗೆಲುವು ಖಚಿತ ಎಂಬುದನ್ನು ಅರಿತ ಮುಖಂಡರು, ಡಾ. ಅಶ್ವಿನಿ ಶರತ್ ಅವರನ್ನು ಕಾಯಿಸದೇ ತಕ್ಷಣವೇ ಆಸ್ಪತ್ರೆಗೆ ವಾಪಸ್ ಕಳುಹಿಸಿದರು.

ಮೈಸೂರು ಮೇಯರ್, ಉಪ ಮೇಯರ್ ಚುನಾವಣೆ; ಜೆಡಿಎಸ್, ಬಿಜೆಪಿ ಹೊಂದಾಣಿಕೆ ಪ್ರಶ್ನೆ ಇಲ್ಲಿಲ್ಲ

ಕಾಂಗ್ರೆಸ್‌ನಿಂದ ಮೈಸೂರಿಗೆ ಆದ ಹಿನ್ನಡೆ ನಮಗಿಂತ ಜೆಡಿಎಸ್‌ನವರು ಹೆಚ್ಚು ಅರ್ಥೈಸಿಕೊಂಡಿದ್ದಾರೆ...

ಮೈಸೂರು,ಸೆ.6(ಪಿಎಂ)– ಮೇಯರ್ ಚುನಾವಣೆ ಸಂಬಂಧ ಜೆಡಿಎಸ್ ಜೊತೆಗೆ ಬಿಜೆಪಿ ಮೈತ್ರಿ ಮುಂದುವರೆಯುತ್ತದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇಲ್ಲಿ ಜೆಡಿಎಸ್ ಮತ್ತು ಬಿಜೆಪಿಯ ಹೊಂದಾಣಿಕೆ ಪ್ರಶ್ನೆ ಇಲ್ಲ. ಸ್ಥಳೀಯವಾಗಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಮೈಸೂರಿಗೆ ಆದ ಹಿನ್ನಡೆ ನಮಗಿಂತ ಹೆಚ್ಚು ಜೆಡಿಎಸ್‌ನವರು ಅರ್ಥ ಮಾಡಿಕೊಂಡ ಹಿನ್ನೆಲೆಯಲ್ಲಿ ಇಂದು ಈ ಫಲಿತಾಂಶ ಬರಲು ಕಾರಣವಾಗಿದೆ ಎನ್ನುವ ಮೂಲಕ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು,



ಇಲ್ಲಿ ಜೆಡಿಎಸ್ ಮತ್ತು ಬಿಜೆಪಿಯ ಹೊಂದಾಣಿಕೆ ಪ್ರಶ್ನೆ ಇಲ್ಲ. ಸ್ಥಳೀಯವಾಗಿ ಜೆಡಿಎಸ್‌ನವರಿಗೆ ಹಿಂದಿನ ಅನುಭವಗಳು, ಕಾಂಗ್ರೆಸ್ ಅಧಿಕಾರದ ಸಂದರ್ಭದಲ್ಲಿ ಮೈಸೂರಿಗೆ ಯಾವ ರೀತಿ ಹಿನ್ನಡೆಯಾಗಿದೆ ಎನ್ನುವುದನ್ನು ಜೆಡಿಎಸ್‌ನವರು ನಮಗಿಂತ ಹೆಚ್ಚು ಅರ್ಥ ಮಾಡಿಕೊಂಡ ಕಾರಣ ಈ ನಿರ್ಣಯ (ಮೇಯರ್–ಉಪಮೇಯರ್ ಚುನಾವಣಾ ಫಲಿತಾಂಶ) ಬಂದಿದೆ ಎಂದರು. ನಾವು ಸ್ಪರ್ಧೆ ಮಾಡುವುದನ್ನು ಮುಕ್ತವಾಗಿ ಹೇಳಿದ್ದೆವು. ಬೇರೆ ಯಾರೂ ಬೇಕಾದರು ಸ್ಪರ್ಧೆ ಮಾಡಬಹುದು ಎಂದೂ ಹೇಳಿದ್ದೆವು. ಜೆಡಿಎಸ್‌ನವರು ಉಪಮೇಯರ್ ಸ್ಥಾನಕ್ಕೆ ಪ್ರಯತ್ನ ಮಾಡಿದರು. ಆದರೆ ತಾಂತ್ರಿಕ ಕಾರಣ ಉಪಮೇಯರ್ ಅವರ ಕೈತಪ್ಪಿದೆ. ಒಟ್ಟಾರೆ ಮೇಯರ್ ಮತ್ತು ಉಪಮೇಯರ್ ಆಯ್ಕೆಯಾಗಿದೆ. ಈಗ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೈಸೂರು ಸಮಗ್ರ ಅಭಿವೃದ್ಧಿ ಮಾಡುವುದು ನಮ್ಮ ಗುರಿ ಎಂದು ಹೇಳಿದರು. ನಮ್ಮ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಮೈಸೂರಿನ ಪಕ್ಷದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರು ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಹೀಗಾಗಿ ಇಂಥದೊಂದು ಸಾಧನೆಯಾಗಿದೆ ಎಂದರು.

ಇಂದು ಮೈಸೂರಿಗೆ ಬಹಳ ಶುಭ ದಿನ. ಕಳೆದ ಬಾರಿ ಮೇಯರ್ ಸ್ಥಾನ ಮಾತ್ರ ನಮ್ಮದಾಯಿತು. ಈ ಬಾರಿ ಉಪಮೇಯರ್ ಸ್ಥಾನ ಕೂಡ ಪಕ್ಷಕ್ಕೆ ಬಂದಿದೆ. ನೂತನ ಮೇಯರ್ ಮತ್ತು ಉಪಮೇಯರ್ ಇಬ್ಬರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಅವರ ಅವಧಿಯಲ್ಲಿ ಮೈಸೂರಿನ ಸಮಗ್ರ ಅಭಿವೃದ್ಧಿಯಾಗಲಿದೆ. ಮೈಸೂರು ಖ್ಯಾತಿ ಮತ್ತಷ್ಟು ಹೆಚ್ಚಾಗಲಿ. ದಸರಾ ವಿಜೃಂಭಣೆಯಿಂದ ನಡೆಯಲಿ ಎಂದು ಆಶಿಸಿದರು.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಸೆ. 28ರಿಂದ ವಿಜೃಂಭಣೆಯ ದಸರಾ ಆಚರಣೆ: ಅಶ್ವತಿ



ಮಂಡ್ಯ, ಸೆ.6- ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮವನ್ನು ಸೆ.28ರಿಂದ ಅ.2ರವರೆಗೆ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಈ ಬಾರಿ ಐದು ದಿನಗಳ ಕಾರ್ಯಕ್ರಮ ನಡೆಯುತ್ತಿದ್ದು, ಇಲಾಖೆಗಳು ವೈವಿಧ್ಯಮಯ, ಆಕರ್ಷಣೀಯ, ಸಾರ್ವಜನಿಕರಿಗೆ ಮಾಹಿತಿ ಹಾಗೂ ಮನರಂಜನೆ ಕಾರ್ಯಕ್ರಮ ಆಯೋಜಿಸಬೇಕು ಎಂದು ತಿಳಿಸಿದರು.

ಸೆ.28ರಂದು ಜಂಬೂ ಸವಾರಿ ನಡೆಯುವ ಬನ್ನಿಮಂಟಪ, ಕಲ್ಯಾಣಿ ಹಾಗೂ ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಮೆರವಣಿಗೆ ಸಾಗುವ ಸ್ಥಳದ ಸ್ವಚ್ಛತೆ ಕೈಗೊಂಡು ಸಿಂಗಾರಗೊಳ್ಳಬೇಕು. ವಿವಿಧ ಕಲಾತಂಡಗಳು, ಕೃಷಿ, ತೋಟಗಾರಿಕೆ, ಮಹಿಳಾ ಹಾಗೂ ಇನ್ನಿತರ ಇಲಾಖೆಗಳ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಲಿವೆ ಎಂದರು.

ಯುವ ದಸರಾ: ಯುವ ದಸರಾದಲ್ಲಿ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಉತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳ ತಂಡಗಳನ್ನು ಆಯ್ಕೆ ಮಾಡಿ ಅವರಿಗೆ ಅವಕಾಶ ನೀಡಿದರೆ ಜಿಲ್ಲೆಯ ವಿದ್ಯಾರ್ಥಿಗಳ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಬಹುದು. ಕಾರ್ಯಕ್ರಮವು ವಿವಿಧ ನೃತ್ಯ ವೈಖರಿಗಳಿಂದ ಕೂಡಿರಲಿ ಎಂದರು.

ಕ್ರೀಡಾ ದಸರಾ: ಕ್ರೀಡಾ ದಸರಾದಲ್ಲಿ ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಿಂದ ಕರಿಘಟ್ಟದವರೆಗೆ ಮ್ಯಾರಥಾನ್, ಕರಿಘಟ್ಟ ಬೆಟ್ಟಕ್ಕೆ ಚಾರಣ, ಕೆಸರುಗದ್ದೆ ಓಡುವ ಸ್ಪರ್ಧೆ, ಹಗ್ಗ-ಜಗ್ಗಾಟ, ಕುಸ್ತಿ, ಖೋ-ಖೋ, ವಾಲಿಬಾಲ್, ಚೆಸ್ ಪಂದ್ಯಾವಳಿಗಳನ್ನು ಆಯೋಜಿಸಲು ವ್ಯವಸ್ಥಿತವಾಗಿ ಸಿದ್ಧತೆ ಮಾಡಿಕೊಳ್ಳಬೇಕು. ಶಾಲಾ-ಕಾಲೇಜು ಗಳಿಗೆ ಮಾಹಿತಿ ನೀಡಿ, ನೋಂದಣಿ ಮಾಡಿಕೊಂಡು ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವಂತೆ ಮಾಡಿ.

ಯೋಗ ದಸರಾ: ಯೋಗ ಗುಚ್ಛ, ಸರಳ ಯೋಗಾಸನಗಳು, ಯೋಗ ನೃತ್ಯ ರೂಪಕ, ಯೋಗ ನಡಿಗೆ ಸೇರಿದಂತೆ ಕಾರ್ಯಕ್ರಮ ಆಯೋಜಿಸಲು ತರಬೇತಿ ನೀಡಬೇಕು ಎಂದು ತಿಳಿಸಿದರು.

ಈ ಬಾರಿ ಹೊಸದಾಗಿ ಆಹಾರ ಮೇಳ ಆಯೋಜಿಸಬೇಕು. ಇದಕ್ಕಾಗಿ ಉತ್ತಮವಾಗಿ ಆಹಾರ ತಯಾರಕರು, ಚಾಟ್ ಸ್ಟಾಲ್‌ಗಳನ್ನು ಮಾಡಲು ಯೋಜನೆ ಮಾಡಿ ಎಂದರು. ಸಭೆಯಲ್ಲಿ ಎಸ್‌ಪಿ ಎನ್. ಯತೀಶ್, ಎಡಿಸಿ ಡಾ.ಹೆಚ್.ಎಲ್. ನಾಗರಾಜು, ಜಿಪಂ ಉಪಕಾರ್ಯದರ್ಶಿ ಸರಸ್ವತಿ, ಉಪವಿಭಾಗಾಧಿಕಾರಿ ಶಿವಾನಂದ ಮೂರ್ತಿ, ಆರ್.ಐಶ್ವರ್ಯ ಇದ್ದರು.

ಮಳವಳ್ಳಿ ಪಂಪ್‌ಹೌಸ್‌ಗೆ ನುಗ್ಗಿದ್ದ ನೀರು ತೆರವು

- 22 ಗಂಟೆಗಳ ನಿರಂತರ ಕಾರ್ಯಾಚರಣೆ
- ಇಂದು ಸಂಜೆ ಬೆಂಗಳೂರಿಗೆ ನೀರು



ಮಂಡ್ಯ, ಸೆ.6- ಭೀಮೇಶ್ವರಿ ನದಿ ಪ್ರವಾಹದಿಂದ ಜಲಾವೃತಗೊಂಡಿದ್ದ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಬಳಿಯ ತೊರೆಕಾಡನಹಳ್ಳಿ (ಟಿ.ಕೆ.ಹಳ್ಳಿ) ಯಲ್ಲಿರುವ ಜಲಮಂಡಳಿಯ ಜಲರೇಚಕ ಯಂತ್ರಾಗಾರದ (ಪಂಪ್‌ಸ್ಟೇಷನ್) ಪಂಪ್‌ಹೌಸ್‌ನಿಂದ ನೀರನ್ನು ಮಂಗಳವಾರ ಸಂಪೂರ್ಣವಾಗಿ ಹೊರತೆಗೆಯಲಾಗಿದೆ.

ಸತತ 22 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದ ಅಗ್ನಿಶಾಮಕ ಸಿಬ್ಬಂದಿ ಹಾಗೂ ಇಂಜಿನಿಯರ್‌ಗಳು ಪಂಪ್‌ಹೌಸ್‌ನಲ್ಲಿ ಸಂಗ್ರಹವಾಗಿದ್ದ ಸುಮಾರು 23 ಅಡಿಗಳಷ್ಟು ನೀರನ್ನು ಹೊರ ತೆಗೆದಿದ್ದಾರೆ.

ಕಾರ್ಯಾಚರಣೆ ಬಳಿಕ ಇಂಜಿನಿಯರ್ ರಾಜಶೇಖರ್ ಮಾತನಾಡಿ, ಪಂಪ್‌ಹೌಸ್ ಜಲಾವೃತ್ತಗೊಂಡಿದ್ದರಿಂದ ಬೆಂಗಳೂರಿಗೆ ನೀರು ಸರಬರಾಜು ಸ್ಥಗಿತಗೊಳಿಸಲಾಗಿತ್ತು. ಬುಧವಾರ ಸಂಜೆಯೊಳಗೆ ಬೆಂಗಳೂರಿಗೆ ಪೂರ್ಣ ನೀರು ಸರಬರಾಜು ಮಾಡಲಾಗುವುದು. ನೀರು ಸರಬರಾಜು ಮಾಡುತ್ತಿದ್ದ ಪಂಪುಗಳು ನೀರಿನಲ್ಲಿ ಮುಳುಗುವುದರಿಂದ ಅವುಗಳನ್ನು ತೆರವುಗೊಳಿಸಿ ಬೆಂಗಳೂರಿನ ತಾತಗುಣಿ ಮತ್ತು ಹಾರವಳ್ಳಿಗಳಿಂದ ಮೋಟರ್‌ಗಳನ್ನು ತರಿಸಿ ಮಂಗಳವಾರ ಸಂಜೆ ಕಾರ್ಯ ಪ್ರಾರಂಭ ಮಾಡಿದ್ದೇವೆ. ಈ ಕೆಲಸದಲ್ಲಿ ಸುಮಾರು 50 ತಂತ್ರಜ್ಞರು ಹಗಲು-ರಾತ್ರಿ ಶ್ರಮಿಸಿದ್ದಾರೆ. 80 ಜನರು ಸ್ವಚ್ಛತೆಗೊಳಿಸಿ ನೀರು ಸರಬರಾಜು ಮಾಡಲು ಸತತ ಪ್ರಯತ್ನ ಮಾಡಿದ್ದೇವೆ ಎಂದರು.

ಅಗ್ನಿಶಾಮಕ ದಳದ ಅಧಿಕಾರಿ ನಾಗರಾಜು ಮಾತನಾಡಿ, ನಮಗೆ ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಬಂದು ಸುಮಾರು 10 ವಾಹನದಲ್ಲಿ 70 ಜನರು ನೀರನ್ನು ತೆರವುಗೊಳಿಸಲು ಕಳುಹಿಸಲಾಗಿತ್ತು. 25 ಅಡಿ ಆಳದ 240 ಅಡಿ ಉದ್ದ 80 ಅಡಿ ಅಗಲದಲ್ಲಿ ಸಂಗ್ರಹವಾಗಿದ್ದ ನೀರನ್ನು ಹೊರಹಾಕಲು ಸಿಬ್ಬಂದಿ ಶ್ರಮಿಸಿರುವುದಾಗಿ ತಿಳಿಸಿದರು. ಮುಖ್ಯ ಇಂಜಿನಿಯರ್ ಎಸ್.ವಿ.ರಮೇಶ್ ರಾಜಶೇಖರ್, ಜಯರಾಮ್, ರಾಜೇಶ್, ನರೇಶ್ ಇದ್ದರು.

ಕೆಆರ್‌ಎಸ್- ಶ್ರೀರಂಗಪಟ್ಟಣ ರಸ್ತೆ ಅಭಿವೃದ್ಧಿಗೆ ಒತ್ತಾಯ



ಶ್ರೀರಂಗಪಟ್ಟಣ, ಸೆ.6- ಕೆಆರ್‌ಎಸ್- ಶ್ರೀರಂಗಪಟ್ಟಣ ರಸ್ತೆ ಅಭಿವೃದ್ಧಿಗೊಳಿಸಬೇಕು ಎಂದು ಮೈಸೂರು ಜಿಲ್ಲಾ ಪ್ರವಾಸಿ ಬಸ್ ಮಾಲೀಕರ ಸಂಘದ ಸದಸ್ಯರು ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎ.ವಿ.ಪೃಥ್ವಿರಾಜ್ ಮಾತನಾಡಿ, ಶ್ರೀರಂಗಪಟ್ಟಣದಿಂದ ಕೆಆರ್‌ಎಸ್‌ಗೆ ಹೋಗುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನ ಸವಾರರು ಜೀವದ ಹಂಗು ತೊರೆದು ವಾಹನ ಚಲಾಯಿಸುವಂತಾಗಿದೆ. ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಸುಸಜ್ಜಿತ ರಸ್ತೆ ನಿರ್ಮಾಣ ಮಾಡುವಲ್ಲಿ ವಿಫಲವಾಗಿದೆ ಎಂದು ದೂರಿದರು.

ರಸ್ತೆ ಅಭಿವೃದ್ಧಿ ಸಂಬಂಧ ಈಗಾಗಲೇ ಸಂಘದಿಂದ ಮುಖ್ಯಮಂತ್ರಿ ಸೇರಿದಂತೆ ಲೋಕೋಪಯೋಗಿ ಇಲಾಖೆ ಕಚೇರಿಗೆ ದೂರು ನೀಡಲಾಗಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಸ್ಥಳೀಯ ಶಾಸಕರು, ಸಂಸದರು, ಉಸ್ತುವಾರಿ ಸಚಿವರು ಒಬ್ಬರು ಮತ್ತೊಬ್ಬರ ಹೆಸರುಗಳನ್ನು ಹೇಳಿಕೊಂಡು ರಾಜಕೀಯ ಮಾಡುತ್ತಿದ್ದಾರೇ ವಿನಾಃ ರಸ್ತೆ ಅಭಿವೃದ್ಧಿಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಒಂದು ವಾರದಲ್ಲಿ ರಸ್ತೆ ದುರಸ್ತಿ ಮಾಡದಿದ್ದರೆ ಎಲ್ಲಾ ವಾಹನಗಳ ಮಾಲೀಕರು ಹಾಗೂ ವಿವಿಧ ಗ್ರಾಮಗಳ ಗ್ರಾಮಸ್ಥರು ಸೇರಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಹೊಸಹಳ್ಳಿ ಪ್ರೇಮ್, ನಾರಾಯಣಗೌಡ, ಮಹೇಶ್‌ಬಾಬು, ರವಿಕುಮಾರ್, ಪಾಂಡವಪುರ ಮಂಜುನಾಥ್, ಗ್ರಾಪಂ ಸದಸ್ಯ ಪ್ರಕಾಶ್ ಇದ್ದರು.

ಅ.2ರಂದು ಶಿವಪುರದ ಧ್ವಜ ಸತ್ಯಾಗ್ರಹ ಸೌಧದಲ್ಲಿ ಬೃಹತ್ ರಕ್ತದಾನ ಶಿಬಿರ



ಮದ್ದೂರು, ಸೆ.6- ಮದ್ದೂರು ತಾಲೂಕು ಸಂಘ ಸಂಸ್ಥೆಗಳ ಒಕ್ಕೂಟದ ವತಿಯಿಂದ ಅ. 2 ಗಾಂಧಿ ಜಯಂತಿಯಂದು ಶಿವಪುರದ ಧ್ವಜ ಸತ್ಯಾಗ್ರಹ ಸೌಧದಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ನಚಿಕೇತನ ಟ್ರಸ್ಟ್ ಅಧ್ಯಕ್ಷ ಜಯಂತ್ ತಿಳಿಸಿದರು.

ಪಟ್ಟಣದ ಶಿವಪುರದಲ್ಲಿರುವ ಧ್ವಜಸತ್ಯಾಗ್ರಹ ಸೌಧದ ಆವರಣದಲ್ಲಿ ಮಂಗಳವಾರ ಮದ್ದೂರು ತಾಲೂಕಿನ ಸಂಘ ಸಂಸ್ಥೆಗಳ ಒಕ್ಕೂಟದಿಂದ ಆಯೋಜಿಸಿದ್ದ ರಕ್ತದಾನ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗಾಂಧಿ ಜಯಂತಿ ದಿನ ಧ್ವಜಸತ್ಯಾಗ್ರಹ ಸೌಧದ ಆವರಣದಲ್ಲೇ ರಕ್ತದಾನ ಶಿಬಿರ ಮಾಡುವುದು ಹೆಮ್ಮೆಯ ಸಂಗತಿ. 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಯುವಕರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿ ರಕ್ತದಾನ ಮಾಡಬೇಕು ಎಂದರು.

ಸಿರಿ ಆದರ್ಶ ಚಿಟ್ ಫಂಡ್ ಸಂಸ್ಥೆಯ ಆದರ್ಶ ಮಾತನಾಡಿ, ರಕ್ತದಾನ ಶಿಬಿರಕ್ಕೆ ಎಲ್ಲ ಸಂಘ ಸಂಸ್ಥೆಗಳ ಪದಾಧಿಕಾರಿಗಳು ನಿರಂತರವಾಗಿ ಶ್ರಮಿಸುತ್ತೇವೆ. ಶಿಬಿರದ ಯಶಸ್ಸಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಯುವಕರು ಅನ್ಯಮಾರ್ಗಗಳನ್ನು ಹಿಡಿಯುತ್ತಿರುವ ಸಂದರ್ಭದಲ್ಲಿ ರಕ್ತದಾನ ಶಿಬಿರ ಮಾಡಲು ಯುವಕರು ಪಣ ತೊಟ್ಟಿರುವುದು ಮಾದರಿ ಕಾರ್ಯ. ಯುವಕರು ಇಂಥ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಇತರರಿಗೆ ಪ್ರೇರಣೆಯಾಗಿದ್ದಾರೆ ಎಂದರು.

ಅ. 2 ಗಾಂಧಿ ಜಯಂತಿ ಅಂಗವಾಗಿ ಶಿವಪುರದ ಧ್ವಜ ಸತ್ಯಾಗ್ರಹ ಸೌಧದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಲಿದ್ದಾರೆ. ರಕ್ತದಾನ ಶಿಬಿರಕ್ಕೆ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೋಣಸಾಲೆ ಸುನೀಲ್ ಕುಮಾರ್ ಮಾತನಾಡಿದರು.

ಮುಖಂಡರಾದ ತೈಲೂರು ಸಿದ್ದರಾಜು, ತೊರೆಚಾಕನಹಳ್ಳಿ ಶಂಕರೇಗೌಡ, ಕರಡಕೆರೆ ಯೋಗೇಶ್, ನೆಲದಸಿರಿ ಟ್ರಸ್ಟ್ ಅಧ್ಯಕ್ಷ ಬಿ.ಎ. ಮಧುಕುಮಾರ, ವಿಶ್ವಜ್ಞಾನಿ ಟ್ರಸ್ಟ್‌ನ ಕೆ.ಟಿ. ಶಿವಕುಮಾರ, ಕುಂದನಕುಪ್ಪೆ ಕುಮಾರ್, ಶ್ರೀನಿವಾಸ, ಜಯರಾಮು, ರಘು, ವೆಂಕಟೇಗೌಡ, ಕಲೀಂ ಪಾಷಾ, ತೈಲೂರು ಆನಂದಾಚಾರಿ, ಕಾರ್ತಿಕ್, ವೆಂಕಟೇಶ ಹುಣಸೆಮರದ ದೊಡ್ಡಿ ಸ್ವಾಮಿ, ಸಂತೋಷ್ ಇದ್ದರು.

ಕೆ.ಆರ್.ಪೇಟೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವಡಕಹಳ್ಳಿ ಹೆಚ್.ಬಿ.ಕಿರಣ್



ಕೆ.ಆರ್.ಪೇಟೆ, ಸೆ.6- ತಾಲೂಕು ಬಿಜೆಪಿ ಯುವ ಮೋರ್ಚಾ ನೂತನ ಅಧ್ಯಕ್ಷರಾಗಿ ವಡಕಹಳ್ಳಿ ಹೆಚ್.ಬಿ.ಕಿರಣ್ ಆಯ್ಕೆಯಾಗಿದ್ದಾರೆ. ಪಟ್ಟಣದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಬಿಜೆಪಿ ಪದಾಧಿಕಾರಿಗಳ ಸಭೆಯಲ್ಲಿ ಕಿರಣ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಆದೇಶ ಪತ್ರವನ್ನು ವಿತರಿಸಲಾಯಿತು.

ಬಳಿಕ ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್ ಮಾತನಾಡಿ, ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಬಿಜೆಪಿ ಪಕ್ಷದ ಬಲವರ್ಧನೆಗೆ ಶ್ರಮಿಸಬೇಕು. ಪಕ್ಷದ ಬೆನ್ನೆಲುಬೇ ಯುವ ಸಮೂಹವಾಗಿದೆ. ಸರ್ಕಾರ ಮಾಡುತ್ತಿರುವ ಪ್ರತಿಯೊಂದು ಜನಪರ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಿಳಿಸಬೇಕು ಎಂದರು.

ಯುವ ಮೋರ್ಚಾ ಅಧ್ಯಕ್ಷ ಹೆಚ್.ಬಿ.ಕಿರಣ್ ಮಾತನಾಡಿ, ತಾಲೂಕಿನ ಪ್ರತಿಯೊಂದು ಗ್ರಾಮದಲ್ಲೂ ಪಕ್ಷದ ಯುವಕರನ್ನು ಸಂಘಟಿಸುವ ಮೂಲಕ ಸಚಿವ ಕೆ.ಸಿ.ನಾರಾಯಣಗೌಡ ಅವರ ಕೈ ಬಲಪಡಿಸಿ ಪಕ್ಷವನ್ನು ಸದೃಢಗೊಳಿಸಲು ಸಹಕಾರಿಯಾಗುವ ನಿಟ್ಟಿನಲ್ಲಿ ನನಗೆ ನೀಡಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನೆರವೇರಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಜಿಲ್ಲಾ ನೇಕಾರ ಪ್ರಕೋಷ್ಠದ ಅಧ್ಯಕ್ಷ ಬಿಗ್‌ಬಾಸ್ ಮೋಹನ್, ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭಾರತೀಪುರ ಶ್ರೀನಿವಾಸ್ ಇದ್ದರು.

ಹಳೇಬೀಡು ಗ್ರಾಪಂ ಉಪಾಧ್ಯಕ್ಷೆ ಸಿ.ಜೆ.ರಾಧಾಗೆ ಅಭಿನಂದನೆ



ಪಾಂಡವಪುರ, ಸೆ.6- ತಾಲೂಕಿನ ಹಳೇಬೀಡು ಗ್ರಾಪಂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಜೆ.ರಾಧಾ ಅವರನ್ನು ಶಾಸಕ ಸಿ.ಎಸ್. ಪುಟ್ಟರಾಜು ಅಭಿನಂದಿಸಿದರು.

ಗ್ರಾಪಂ ಉಪಾಧ್ಯಕ್ಷರಾಗಿದ್ದ ಪದ್ಮರಾಜು ಅವರ ರಾಜೀನಾಮೆಯಿಂದ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಿ.ಜೆ.ರಾಧಾ ಅವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ನಾಮಪತ್ರಸಲ್ಲಿಸದ ಹಿನ್ನೆಲೆಯಲ್ಲಿ ಅವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಸಿಡಿಪಿಓ ನಟರಾಜು ಘೋಷಿಸಿದರು. ಬಳಿಕ ರಾಧಾ ಅವರನ್ನು ಎಲ್ಲಾ ಸದಸ್ಯರು ಅಭಿನಂದಿಸಿದರು.

ಶಾಸಕರಿಂದ ಸನ್ಮಾನ: ಹಳೇಬೀಡು ಗ್ರಾಪಂ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ಸಿ.ಜೆ.ರಾಧಾ ಅವರನ್ನು ಶಾಸಕ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಚಿಕ್ಕತಾಯಮ್ಮ, ಗ್ರಾಪಂ ಮಾಜಿ ಉಪಾಧ್ಯಕ್ಷ ಪದ್ಮರಾಜ್, ಸದಸ್ಯರಾದ ಎಚ್.ಸಿ.ಧನಂಜಯ, ಪುಟ್ಟೇಗೌಡ, ಜಯಲಕ್ಷ್ಮಮ್ಮ, ಮಂಗಳ, ಸೌಭಾಗ್ಯಮ್ಮ, ಶೋಭಾ ಶ್ರೀನಿವಾಸ್, ಮಂಜುಳಾ, ಗ್ರಾಪಂ ಮಾಜಿ ಅಧ್ಯಕ್ಷ ಕುಳ್ಳೇಗೌಡ, ಮುಂಖಡರಾದ ಹೊಸಕೋಟೆ ಪುಟ್ಟಣ್ಣ, ಚಂದ್ರು, ಶಿವಕುಮಾರ್ ಸೇರಿದಂತೆ ಹಲವರು ಹಾಜರಿದರು.

ಕಾಡುಗೊಲ್ಲರನ್ನು ಎಸ್‌ಟಿಗೆ ಸೇರಿಸಲು ಒತ್ತಾಯ



ಭಾರತೀನಗರ, ಸೆ.6- ಕಾಡುಗೊಲ್ಲರ ಸಮುದಾಯಕ್ಕೆ ಎಸ್‌ಟಿ ಮೀಸಲಾತಿ ನೀಡಬೇಕು. ಇಲ್ಲದಿದ್ದರೆ, ಮುಂದಿನ ವಿಧಾನಸಭಾ ಚುನಾವಣೆ ಬಹಿಷ್ಕರಿಸಲಾಗುವುದು ಎಂದು ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಸಂಚಾಲಕ ಕೆ.ಶಂಕರ್ ಎಚ್ಚರಿಕೆ ನೀಡಿದರು.

ಇಲ್ಲಿಗೆ ಸಮೀಪದ ಅರುವನಹಳ್ಳಿ ಹಟ್ಟಿ (ಗೊಲ್ಲರದೊಡ್ಡಿ)ಯಲ್ಲಿ ಕರ್ನಾಟಕ ರಾಜ್ಯ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಚಿಂತನ ಮಂಥನ ಸಭೆಯಲ್ಲಿ ಮಾತನಾಡಿದ ಅವರು, ಎಸ್‌ಟಿ ಪಟ್ಟಿಗೆ ಕಾಡುಗೊಲ್ಲರನ್ನು ಸೇರಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಮಂಡ್ಯ ಜಿಲ್ಲಾ ಅಧ್ಯಕ್ಷ ಉಮೇಶ್ ಮಾತನಾಡಿ, ಸರ್ಕಾರ ಕೂಡಲೇ ಕಾಡುಗೊಲ್ಲರನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು. ಮದ್ದೂರು ತಾಲೂಕಿನ ಶಾಸಕರು ಗೊಲ್ಲರದೊಡ್ಡಿ ಗ್ರಾಮವನ್ನು ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿದರು.

ರಾಮನಗರ ಜಿಲ್ಲಾ ಅಧ್ಯಕ್ಷ ಜಿ.ಕೆ.ರಮೇಶ್, ಪ್ರಧಾನ ಕಾರ್ಯದರ್ಶಿ ರಮೇಶ್ ಯಾದವ್ ಮಾತನಾಡಿದರು. ಸಭೆಯಲ್ಲಿ ರಾಮನಗರ ಜಿಲ್ಲಾ ಉಪಾಧ್ಯಕ್ಷ ರಂಗ ಸ್ವಾಮಿ, ಮದ್ದೂರು ತಾಲೂಕು ಅಧ್ಯಕ್ಷ ಜಿ.ಸಿ.ಕೃಷ್ಣ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಕೆಂದಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಆರ್.ಸುರೇಶ್, ಗೌರವಾಧ್ಯಕ್ಷ ರಾಮು, ಉಪಾಧ್ಯಕ್ಷರಾದ ಗಿರಿರಾಜ್, ಪ್ರಸಾದ್, ಲೋಕೇಶ್, ರಂಗಸ್ವಾಮಿ, ಕೃಷ್ಣ, ಮಹಾಲಿಂಗ, ಶೇಖರ್, ಕಟ್ಟೆಮನೆ ಪೂಜಾರಪ್ಪ ಇತರರು ಹಾಜರಿದ್ದರು.

ಪತಿಯ ಕಾಲನ್ನು ಕತ್ತರಿಸಿ ಪತ್ನಿಯ ಕೈಗಿಟ್ಟ ಮಿಮ್ಸ್ ಸಿಬ್ಬಂದಿ

ಮಂಡ್ಯ, ಸೆ.6- ಅನಾರೋಗ್ಯಕ್ಕೆ ಒಳಗಾಗಿದ್ದ ಪತಿಯ ಕಾಲನ್ನು ಕತ್ತರಿಸಿ, ಬಳಿಕ ಆ ಕಾಲನ್ನು ಆಸ್ಪತ್ರೆಯ ಸಿಬ್ಬಂದಿ ಪತ್ನಿಯ ಕೈಗಿಟ್ಟ ಪ್ರಸಂಗವೊಂದು ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಮಂಗಳವಾರ ನಡೆದಿದೆ.



ಗ್ಯಾಂಗ್ರೀನ್‌ಗೆ ಒಳಗಾಗಿದ್ದ ಮಂಡ್ಯದ ಕೀಲಾರ ಗ್ರಾಮದ ಪ್ರಕಾಶ್ ಎಂಬುವರು ಚಿಕಿತ್ಸೆಗಾಗಿ ಮಿಮ್ಸ್ ಆಸ್ಪತ್ರೆಗೆ ದಾಖಲಾಗಿ ದ್ದರು. ಚಿಕಿತ್ಸೆ ನೀಡಿದ ವೈದ್ಯರು ಗ್ಯಾಂಗ್ರೀನ್‌ಗೆ ಒಳಗಾ ಗಿದ್ದ ಕಾಲನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆದಿದ್ದರು. ಆದರೆ ಅದಾದ ಬಳಿಕ ಆಸ್ಪತ್ರೆ ಸಿಬ್ಬಂದಿ ಕತ್ತರಿಸಲಾಗಿದ್ದ ಕಾಲಿನ ಭಾಗವನ್ನು ತಂದು ಪ್ರಕಾಶ್ ಅವರ ಪತ್ನಿ ಭಾಗ್ಯಮ್ಮ ಅವರಿಗೆ ನೀಡಿದ್ದರು. ಅದನ್ನು ಸ್ವೀಕರಿಸಿದ ಭಾಗ್ಯಮ್ಮ ತಬ್ಬಿಬ್ಬಾಗಿದ್ದು, ಏನು ಮಾಡಬೇಕು ಎಂದು ತೋಚದೆ ಗಂಡನ ಕಾಲನ್ನು ಹಿಡಿದು ಅತ್ತಿದ್ದರು. ದಾಖಲಾದ ಮೂರು ದಿನಗಳ ಬಳಿಕ ಕತ್ತರಿಸಿದ ಕಾಲನ್ನು ನೀಡಿದ್ದ ಆಸ್ಪತ್ರೆಯವರು, ಅದನ್ನು ಎಲ್ಲಾದರೂ ಮಣ್ಣು ಮಾಡುವಂತೆ ಭಾಗ್ಯಮ್ಮನಿಗೇ ಹೇಳಿದ್ದಾರೆ ಎನ್ನಲಾಗಿದೆ. ತಾವೇ ಮಣ್ಣು ಮಾಡಿದರೆ ಸಾವಿರಾರು ರೂಪಾಯಿ ನೀಡಬೇಕು ಎಂದು ಆಸ್ಪತ್ರೆಯವರು ಕೇಳಿದ್ದಾರೆ ಎಂದು ಭಾಗ್ಯಮ್ಮ ಆರೋಪಿಸಿದ್ದು, ಮಿಮ್ಸ್ ಸಿಬ್ಬಂದಿ ನಡೆ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ಮಿಮ್ಸ್ ನಿರ್ದೇಶಕ ಸ್ಪಷ್ಟನೆ: ಈ ಬಗ್ಗೆ ಮಂಡ್ಯದ ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ ಮಾತನಾಡಿ, ರೋಗಿಯ ಮೊಣಕಾಲಿನ ಕೆಳಭಾಗವನ್ನು ತೆಗೆಯಲಾಗಿತ್ತು ವೈದ್ಯಕೀಯ ನಿಯಮಗಳ ಪ್ರಕಾರ ಅದನ್ನು ಸಂಬಂಧಿತ ಏಜೆನ್ಸಿಯವರ ಮೂಲಕವೇ ವಿಲೇ ಮಾಡಿಸಬೇಕು. ಆದರೆ ಕತ್ತರಿಸಿದ ಕಾಲಿನ ಭಾಗವನ್ನು ದುರದೃಷ್ಟವಶಾತ್ 'ಡಿ' ಗ್ರೂಪ್ ಸಿಬ್ಬಂದಿ ರೋಗಿಯ ಪತ್ನಿಗೆ ನೀಡಿದ್ದಾರೆ. ಆಕೆ ಗಾಬರಿಯಾಗಿ ಕಣ್ಣೀರು ಹಾಕಿದ್ದಾರೆ. ಅದು ನನ್ನ ಗಮನಕ್ಕೆ ಬರುತ್ತಿದ್ದಂತೆ ವಾಪಸ್ ಪಡೆಯಲಾಗಿದ್ದು, ಅದನ್ನು ನಿಯಮ ಪ್ರಕಾರ ವಿಲೇ ಮಾಡಲಾಗುವುದು ಎಂದು ಸ್ಪಷ್ಟನೆ ನೀಡಿದ್ದಾರೆ.

ಪ್ರಕರಣದ ಕುರಿತಂತೆ 24 ಗಂಟೆಯೊಳಗೆ ವರದಿ ನೀಡುವಂತೆ ಸರ್ಜರಿ ಮುಖ್ಯಸ್ಥರಿಗೆ ಸೂಚನೆ ನೀಡಿದ್ದೇನೆ. ಅಲ್ಲದೆ ಆಸ್ಪತ್ರೆಯ ಯಾವುದೇ ತ್ಯಾಜ್ಯವನ್ನು ರೂಲ್ಸ್ ಪ್ರಕಾರವೇ ವಿಲೇವಾರಿ ಮಾಡುವಂತೆ ಸುತ್ತೋಲೆ ಹೊರಡಿಸಿದ್ದೇನೆ. ಕಾನೂನು ಬಾಹಿರವಾಗಿ ವಿಲೇವಾರಿ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇನೆ. ರೋಗಿಯ ಪತ್ನಿ ಬಳಿ ಸಿಬ್ಬಂದಿ ಹಣ ಕೇಳಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ವಿಚಾರಣೆ ವೇಳೆ ಅದು ಸಾಬೀತಾದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿಯೂ ಅವರು ಹೇಳಿದ್ದಾರೆ.

ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆಯ ಸದ್ಬಳಕೆಗೆ ಸಲಹೆ



ಶ್ರೀರಂಗಪಟ್ಟಣ, ಸೆ.6- ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಆರೋಗ್ಯ ರಕ್ಷಾ ಸಮಿತಿ ಹಾಗೂ ಪಾಲಹಳ್ಳಿ ಗ್ರಾಪಂನಿಂದ ನಡೆದ ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆಯ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಪಾಲಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ರೇಖಾ ಚಾಲನೆ ನೀಡಿದರು.

ಶ್ರೀರಂಗಪಟ್ಟಣ ಆರೋಗ್ಯ ರಕ್ಷ ಸಮಿತಿ ನಿರ್ದೇಶಕ ಡಾ.ಪ್ರಶಾಂತ್ ಮಾತನಾಡಿ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯ ಮಹತ್ವವನ್ನು ಗ್ರಾಮಸ್ಥರಿಗೆ ತಿಳಿಸುವ ಜೊತೆಗೆ, ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ಅಕ್ಷತಾ, ಆಶಾ, ರಾಮಕೃಷ್ಣ, ಲೋಕೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ಬಿ. ಹೇಮಣ್ಣ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮದ್ದೂರು, ಸೆ.6- ಪಟ್ಟಣ ವ್ಯಾಪ್ತಿಯ ಬೆಂಗಳೂರು ಮೈಸೂರು ಹೆದ್ದಾರಿ ತುರ್ತು ಕಾಮಗಾರಿ ನಡೆಯುತ್ತಿರುವುದರಿಂದ ಮದ್ದೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆವಿ ಫೀಡರ್ ಎಫ್-2 ಹೆಚ್.ಕೆ.ವಿ.ನಗರ, ಕೆ.ಹೆಚ್.ನಗರ, ಟಿ.ಬಿ.ಸರ್ಕಲ್, ಹೆಚ್.ಕೆ.ವಿ.ಕಾಲೇಜು ಹಾಗೂ ಎಳನೀರು ಮಾರುಕಟ್ಟೆ ಸುತ್ತಮುತ್ತ ಮತ್ತು ಎಫ್-16 ಬಸವನಪುರ ಫೀಡರ್ (ಗೆಜ್ಜಲಗೆರೆ, ಸಾದೊಳಲು, ಕುದುರಗುಂಡಿ, ಕುದುರಗುಂಡಿ ಕಾಲೊನಿ ಮತ್ತು ಬಸವನಪುರ) ಈ ಮಾರ್ಗದಲ್ಲಿ ಸೆ.7ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಾಂಡವಪುರದ ಕೃಷ್ಣನಗರದಲ್ಲಿ ಪ್ರತಿಷ್ಠಾಪಿಸಿದ ಗಣೇಶ ಮೂರ್ತಿಯನ್ನು ಭಾನುವಾರ ಸಂಜೆ ವಿಜೃಂಭಣೆಯಿಂದ ಮೆರವಣಿಗೆ ಮೂಲಕ ವಿಸಿ ನಾಲೆಯಲ್ಲಿ ವಿಸರ್ಜಿಸಲಾಯಿತು.

ಜನಸೇವೆ ಮಾಡಲು ಸದಾ ಸಿದ್ಧ: ಮನ್‌ಮುಲ್ ಅಧ್ಯಕ್ಷ ರಾಮಚಂದ್ರ



ಮಂಡ್ಯ, ಸೆ.6- ಜನಪರವಾಗಿ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ ಎಂದು ಮನ್‌ಮುಲ್ ಅಧ್ಯಕ್ಷ ಹಾಗೂ ಶ್ರೀ ಶಂಭು ಸೇವಾ ಟ್ರಸ್ಟ್ ಅಧ್ಯಕ್ಷರೂ ಆದ ಬಿ.ಆರ್. ರಾಮಚಂದ್ರ ಅಭಿಪ್ರಾಯಪಟ್ಟರು.

ತಾಲೂಕಿನ ಕಸಬಾ ಹೋಬಳಿಯ ಪಣಕನಹಳ್ಳಿ ಗ್ರಾಮದಲ್ಲಿ ಶ್ರೀ ಶಂಭು ಸೇವಾ ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ ಹಾಗೂ ಗ್ರಾಮದಿಂದ ಎರಡು ಬಸ್ಸುಗಳಲ್ಲಿ ಧರ್ಮಸ್ಥಳಕ್ಕೆ ಹೊರಟ ಶಂಭು ಧರ್ಮಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು ಪಣಕನಹಳ್ಳಿ ಗ್ರಾಮದ ಜನರು ತೋರುವ ಪ್ರೀತಿ- ವಿಶ್ವಾಸಕ್ಕೆ ನಾನು ಚಿರಋಣಿಯಾಗಿರುತ್ತೇನೆ ಎಂದು ಹೇಳಿದರು.

ಹಣ, ಅಂತಸ್ತು ಗಳಿಸುವುದಕ್ಕಿಂತ ಜನರ ಪ್ರೀತಿ ಗಳಿಸುವುದು ಮುಖ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಹುಟ್ಟಿದ ಊರನ್ನು ಮರೆಯದೇ ಅಭಿವೃದ್ಧಿ ಕೆಲಸಕ್ಕೆ ಮುಂದಾಗಬೇಕು ಎಂದು ಹೇಳಿದರು.

ಶಾಲೆಗಳು ದೇವಸ್ಥಾನ ಇದ್ದಂಗೆ, ಮಕ್ಕಳು ದೇವರು ಸಮಾನ ಎಂದು ಹೇಳಿದ ಅವರು, ಪ್ರತಿಯೊಬ್ಬರನ್ನು ಸಮಾನವಾಗಿ ಕಾಣುವ ದೃಷ್ಟಿಯಿಂದ ಒಂದನೇ ತರಗತಿಯಿಂದ 10ನೇ ತರಗತಿಯ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶಂಭು ಸೇವಾ ಟ್ರಸ್ಟ್ ವತಿಯಿಂದ ಉಚಿತ ಬ್ಯಾಗುಗಳನ್ನು ವಿತರಣೆ ಮಾಡುತ್ತಿದ್ದೇನೆ ಎಂದು ಹೇಳಿದರು.

ಈಗಾಗಲೇ ಮಂಡ್ಯ ತಾಲೂಕಿನಾದ್ಯಂತ ಶಂಭು ಧರ್ಮ ಯಾತ್ರೆಗೆ ಜನರನ್ನು ಕರೆದುಕೊಂಡು ಹೋಗಿ ಶಂಭು ಧರ್ಮ ಯಾತ್ರೆ ಮಾಡಿಸಲಾಗುತ್ತಿದೆ.ಎಲ್ಲರೂ ಗುಂಪಾಗಿ ಒಟ್ಟಿಗೆ ಸೇರಿ ಶಂಭು ಧರ್ಮ ಯಾತ್ರೆ ಮಾಡಿಸುವುದರಿಂದ ಸಂತೋಷವಾಗುತ್ತದೆ. ಯಾರೂ ಆತುರ ಮಾಡುವುದು ಬೇಡ ಸಮಾಧಾನವಾಗಿ ಎಲ್ಲರಿಗೂ ಧರ್ಮ ದರ್ಶನ ಮಾಡಿಸಲಾಗುವುದು ಎಂದು ತಿಳಿಸಿದರು.

ಧರ್ಮದರ್ಶನಕ್ಕೆ ತೆರಳುವವರಿಗೆ ಊಟ, ತಿಂಡಿ, ಕಾಫಿ, ವಸತಿ ಕಲ್ಪಿಸಿ ಮಂಜುನಾಥ ಸ್ವಾಮಿಯ ಧರ್ಮ ದರ್ಶನ ಮಾಡಿಸಿ ವಾಪಸ್ ಕರೆತರಲಾಗುವುದು. ಧರ್ಮ ಯಾತ್ರೆಗೆ ತೆರಳುವವರು ಏನಾದರೂ ಕುಂದುಕೊರತೆ ಇದ್ದರೆ ಹೇಳಿ. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿ ನಿಮ್ಮಗಳ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ಪಕ್ಷಾತೀತವಾಗಿ ಧರ್ಮಯಾತ್ರೆ ಮಾಡಿಸಲಾಗುವುದು. ನಿಮ್ಮೆಲ್ಲರ ಸಹಕಾರ ಮುಖ್ಯ ಎಂದು ಹೇಳಿದರು. ಧರ್ಮ ಯಾತ್ರೆ ಯಶಸ್ವಿ ಯಾಗಲಿ ಎಂದು ಶುಭ ಹಾರೈಸಿ ಮಹಿಳೆಯರನ್ನು ಧರ್ಮಸ್ಥಳಕ್ಕೆ ಕಳುಹಿಸಿಕೊಟ್ಟರು.

ಮುಂದಿನ ದಿನಗಳಲ್ಲಿ ಗ್ರಾಪಂ ಮಟ್ಟದಲ್ಲಿ ಸಂಚಾರಿ ಆರೋಗ್ಯ ತಪಾಸಣೆ ಮಾಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವ ಜೊತೆಗೆ ಅಗತ್ಯವಿದ್ದವರನ್ನು ಒಂದು ಕಡೆ ಸೇರಿಸಿ ನುರಿತ ವೈದ್ಯರನ್ನು ಕರೆಸಿ ಆರೋಗ್ಯ ತಪಾಸಣೆ ಮಾಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡ ಬೊಮ್ಮೇಗೌಡ, ಗ್ರಾಪಂ ಸದಸ್ಯರಾದ ಆನಂದ್, ನಂದಿನಿ, ಗ್ರಾಪಂ ಮಾಜಿ ಅಧ್ಯಕ್ಷ ಉಮೇಶ್, ಮಾಜಿ ಸದಸ್ಯ ಶಂಕರ್, ಮುಖಂಡರಾದ ಪ್ರದೀಪ್, ಕ್ಯಾತೇಗೌಡ, ಶಂಭು ಸೇವಾ ಟ್ರಸ್ಟ್ ಕಾರ್ಯದರ್ಶಿ ಬಿ.ಆರ್.ಸುರೇಶ್ ಇತರರು ಹಾಜರಿದ್ದರು.



ಮಂಡ್ಯ ತಾಲೂಕಿನ ಇಂಡುವಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಉದ್ಘಾಟಿಸಿದರು. ಇದೇ ವೇಳೆ ಸಿದ್ದು ಟ್ರೇಡರ್ಸ್‌ನ ಮಾಲೀಕ ಸಿದ್ದೇಗೌಡ ಅವರು ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಿದರು. ಈ ವೇಳೆ ಮುಖಂಡ ಚಂದ್ರಶೇಖರ್, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಶಾಲಾ ಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

'ಕೌಟುಂಬಿಕ ಕೊಡವ ಹಾಕಿ ಉತ್ಸವ' ಅದ್ದೂರಿ ಆಚರಣೆ

2023 ಫೆ.20 ರಿಂದ ಹಾಕಿ ಹಬ್ಬ ಆರಂಭ

- ಮೂರು ಮೈದಾನಗಳಲ್ಲಿ ಹಾಕಿ ಪಂದ್ಯಾವಳಿ
- ಲೋಗೋಗೆ 10 ಸಾವಿರ ರೂ.ನಗದು ಬಹುಮಾನ
- 1.50 ಕೋಟಿ ರೂ. ವೆಚ್ಚದಲ್ಲಿ ಪಂದ್ಯಾವಳಿ ಆಯೋಜನೆ



ಮಡಿಕೇರಿ, ಸೆ.6– ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಪ್ರತಿಷ್ಠಿತ 'ಕೌಟುಂಬಿಕ ಕೊಡವ ಹಾಕಿ ಉತ್ಸವ'ವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿರುವ ಪಂದ್ಯಾವಳಿ ಆಯೋಜನೆಯ ಜವಾಬ್ದಾರಿ ಹೊತ್ತಿರುವ 'ಅಪ್ಪಚೆಟ್ಟೋಳಂಡ' ಕುಟುಂಬಸ್ಥರು ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ 2023ರ ಫೆ.20ರಿಂದ ಮಾ.6ರವರೆಗೆ ಕೊಡವ ಹಾಕಿ ಹಬ್ಬ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಾಕಿ ಪಂದ್ಯಾವಳಿ ಕುರಿತು ಮಾಹಿತಿ ನೀಡಿದ ಅಪ್ಪಚಟ್ಟೋಳಂಡ ಕುಟುಂಬದ ಕೌಟುಂಬಿಕ ಹಾಕಿ ಉತ್ಸವ ಸಮಿತಿ ಅಧ್ಯಕ್ಷ ಅಪ್ಪಚಟ್ಟೋಳಂಡ ಮನು ಮುತ್ತಪ್ಪ, ಸತತ 22 ವರ್ಷಗಳ ಕಾಲ ನಡೆದುಕೊಂಡು ಬಂದ ಕೊಡವ ಹಾಕಿ ಉತ್ಸವ ಕೊರೊನಾ ಮತ್ತು ಪ್ರಾಕೃತಿಕ ವಿಕೋಪಗಳ ಹಿನ್ನೆಲೆಯಲ್ಲಿ ಸ್ಥಗಿತವಾಗಿತ್ತು. 2018ರಲ್ಲಿ ಸ್ಥಗಿತಗೊಂಡಿದ್ದ ಹಾಕಿ ಉತ್ಸವ ಸುಮಾರು 5 ವರ್ಷಗಳ ಬಳಿಕ ಕೊಡವ ಹಾಕಿ ಅಕಾಡೆಮಿ ವತಿಯಿಂದ ಮತ್ತೆ ಆಯೋಜಿತವಾಗುತ್ತಿದೆ. ಅಪ್ಪಚಟ್ಟೋಳಂಡ ಕುಟುಂಬ ಈ ಬಾರಿ ಪಂದ್ಯಾವಳಿ ಆಯೋಜನೆಯ ಜವಾಬ್ದಾರಿಯನ್ನು ಹೊತ್ತು ಅದ್ದೂರಿಯಿಂದ ಪಂದ್ಯಾಟಗಳನ್ನು ನಡೆಸಲಿದೆ ಎಂದು ತಿಳಿಸಿದರು.

3 ಮೈದಾನ ಬಳಕೆ: ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ನಾಪೋಕ್ಲುವಿನ ಪಬ್ಲಿಕ್ ಶಾಲೆಯ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣ ಸೇರಿದಂತೆ ಒಟ್ಟು 3 ಮೈದಾನಗಳಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಜಿಲ್ಲೆಯಲ್ಲಿಯೇ ಅತ್ಯಂತ ವಿಶಾಲ ಮೈದಾನವಾಗಿರುವ ಕಾರಣ ಇಲ್ಲಿಯೇ ಪಂದ್ಯಾವಳಿ ಆಯೋಜನೆ ಮಾಡಲಾಗುತ್ತಿದೆ. ಮಳೆಯ ಕಾರಣದಿಂದ 2023ರ ಫೆಬ್ರವರಿ ತಿಂಗಳಲ್ಲಿ ಕ್ರೀಡಾಕೂಟ ನಡೆಸಲಾಗುತ್ತಿದ್ದು, 16 ದಿನಗಳ ಕಾಲ ಪಂದ್ಯಾವಳಿ ನಡೆಯಲಿದೆ ಎಂದು ಹೇಳಿದರು. ಈಗಾಗಲೇ ಕೊಡವ ಹಾಕಿ ಅಕಾಡೆಮಿ ಹಾಕಿ ಉತ್ಸವದ ಧ್ವಜವನ್ನು ಅಪ್ಪಚಟ್ಟೋಳಂಡ ಕುಟುಂಬಸ್ಥರಿಗೆ ಹಸ್ತಾಂತರಿಸಿದೆ. ವ್ಯವಸ್ಥಿತವಾಗಿ ಪಂದ್ಯಾವಳಿ ಆಯೋಜನೆಗೆ ಅಗತ್ಯ ಸಿದ್ಧತಾ ಕಾರ್ಯಗಳನ್ನು ನಡೆಸುತ್ತಿರುವುದಾಗಿ ಮನು ಮುತ್ತಪ್ಪ ಮಾಹಿತಿ ನೀಡಿದರು.

> "ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಮೈದಾನ ಜಿಲ್ಲೆಯಲ್ಲಿಯೇ ಅತ್ಯಂತ ವಿಶಾಲವಾದ ಮೈದಾನವಾಗಿದೆ. ಈ ಹಿನ್ನೆಲೆಯಲ್ಲಿ ಈ ಸ್ಥಳದಲ್ಲಿಯೇ ಶಾಶ್ವತ ಸ್ಟೇಡಿಯಂ ನಿರ್ಮಾಣ ಮಾಡಬೇಕೆಂದು ಹಲವು ವರ್ಷಗಳಿಂದ ರಾಜ್ಯ ಕ್ರೀಡಾ ಸಚಿವರು, ಸಂಸದರು, ಶಾಸಕರು, ಹಾಗೂ ಕೇಂದ್ರ ಸರಕಾರಕ್ಕೂ ಪತ್ರ ಬರೆದು ಒತ್ತಾಯಿಸಲಾಗಿದೆ. ನಮ್ಮ ಮುಂದಿನ ಬೇಡಿಕೆಯೂ ಇದೇ ಆಗಿದೆ.
> -ಅಪ್ಪಚಟ್ಟೋಳಂಡ ಮನು ಮುತ್ತಪ್ಪ
> ಕೌಟುಂಬಿಕ ಹಾಕಿ ಉತ್ಸವ ಸಮಿತಿ ಅಧ್ಯಕ್ಷ

ಗಿನ್ನಿಸ್ ದಾಖಲೆಗೆ ಪ್ರಯತ್ನ: 2018ರಲ್ಲಿ ನಡೆದ 'ಕುಲ್ಲೇಟಿರ ಕಪ್ ಹಾಕಿ' ಪಂದ್ಯಾವಳಿಯಲ್ಲಿ 330 ಕೊಡವ ಕುಟುಂಬಗಳು ಪಾಲ್ಗೊಂಡಿದ್ದವು. ಕೊಡಗು ಜಿಲ್ಲೆಯಲ್ಲಿ 800ಕ್ಕೂ ಹೆಚ್ಚು ಕೊಡವ ಕುಟುಂಬಗಳು ನೆಲೆಸಿದ್ದು, ಈ ಬಾರಿ 350 ಕೊಡವ ಕುಟುಂಬ ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಮನು ಮುತ್ತಪ್ಪ ಹೇಳಿದರು. ಕೊಡವ ಕೌಟುಂಬಿಕ ಹಾಕಿ ಉತ್ಸವ ಈಗಾಗಲೇ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ಸ್ಥಾನವನ್ನು ಪಡೆದಿದೆ. ಅಪ್ಪಚಟ್ಟೋಳಂಡ ಕೌಟುಂಬಿಕ ಹಾಕಿ ಉತ್ಸವದಲ್ಲಿ ಅತೀ ಹೆಚ್ಚು ತಂಡಗಳ ಪಾಲ್ಗೊಳ್ಳುವಿಕೆಯ ಮೂಲಕ ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಳ್ಳಬೇಕೆನ್ನುವ ಆಶಯವಿದೆ ಎಂದು ಅವರು ತಿಳಿಸಿದರು.

10 ಸಾವಿರ ರೂ. ಬಹುಮಾನ: ನಾಪೋಕ್ಲು ಕೊಡವ ಸಮಾಜದಲ್ಲಿ ಅಕ್ಟೋಬರ್ 2ರಂದು ಪಂದ್ಯಾವಳಿಯ ಮಾಹಿತಿಗಳನ್ನು ಒಳಗೊಂಡ 'ವೆಬ್‌ಸೈಟ್' ಮತ್ತು 'ಲೋಗೋ'ವನ್ನು ವಿಶೇಷ ಆಹ್ವಾನಿತರ ಮೂಲಕ ಉದ್ಘಾಟಿಸಲಾಗುತ್ತದೆ. ಅದೇ ಸಂದರ್ಭ ಕೊಡವ ಕೌಟುಂಬಿಕ ಹಾಕಿ ಉತ್ಸವದ ಕುರಿತು ಪತ್ರಕರ್ತ ಬಾಚರಣಿಯಂಡ ಅನು ಕಾರ್ಯಪ್ಪ ಅವರು ರಚಿಸಿದ ಪುಸ್ತಕವನ್ನೂ ಕೂಡ ಅನಾವರಣ ಮಾಡಲಾಗುತ್ತದೆ ಎಂದು ವಿವರಿಸಿದರು. ಅಪ್ಪಚಟ್ಟೋಳಂಡ ಕೌಟುಂಬಿಕ ಹಾಕಿ ಉತ್ಸವಕ್ಕೆ ಪೂರಕವಾದ ಲೋಗೋವನ್ನು ಸಿದ್ಧಪಡಿಸಿ ಕೊಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿರುವ ಮನು ಮುತ್ತಪ್ಪ, ಆಯ್ಕೆಯಾದ ಲೋಗೋಕ್ಕೆ 10 ಸಾವಿರ ರೂ. ನಗದು ಬಹುಮಾನವನ್ನು ನೀಡಲಾಗುವುದೆಂದು ಘೋಷಿಸಿದರು.

1.50 ಕೋಟಿ ರೂ. ವೆಚ್ಚ: ಕೊಡವ ಹಾಕಿ ಉತ್ಸವವನ್ನು ಸುಮಾರು 1.50 ಕೋಟಿ ರೂ. ವೆಚ್ಚದಲ್ಲಿ 16 ದಿನಗಳ ಕಾಲ ಆಯೋಜಿಸಲು ನಿರ್ಧರಿಸಲಾಗಿದೆ. ಸರ್ಕಾರಕ್ಕೆ 1 ಕೋಟಿ ರೂ. ಅನುದಾನಕ್ಕೆ ಮನವಿ ಮಾಡಿಕೊಳ್ಳಲಾಗಿದೆ. ಈ ಪೈಕಿ ಕನಿಷ್ಠ 50 ಲಕ್ಷ ಅನುದಾನ ದೊರಕುವ ವಿಶ್ವಾಸವಿದೆ ಎಂದು ಹೇಳಿದರು. ನಾಪೋಕ್ಲುವಿನಲ್ಲಿ ಈ ಹಿಂದೆ ಕಲಿಯಂಡ, ಬಿದ್ದಾಟಂಡ, ಕುಲ್ಲೇಟಿರ ಕುಟುಂಬಗಳಿಂದ ಕೌಟುಂಬಿಕ ಹಾಕಿ ಉತ್ಸವ ನಡೆದಿತ್ತು. ಇದೀಗ 4ನೇ ಬಾರಿ ಅಪ್ಪಚಟ್ಟೋಳಂಡ ಕೌಟುಂಬಿಕ ಹಾಕಿ ಉತ್ಸವ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಈ ಕ್ರೀಡಾಕೂಟದ ಮೂಲಕ ಮತ್ತಷ್ಟು ಹಾಕಿ ಕ್ರೀಡಾಪಟುಗಳ ಪ್ರತಿಭೆ ಅನಾವರಣ ಆಗುವ ಮೂಲಕ ರಾಜ್ಯ-ರಾಷ್ಟ್ರ ಮಟ್ಟವನ್ನು ಪ್ರತಿನಿಧಿಸುವಂತಾಗಲಿದೆ ಎಂದು ಮನು ಮುತ್ತಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಅಪ್ಪಚಟ್ಟೋಳಂಡ ಕುಟುಂಬದ ಪಟ್ಟೆದಾರರಾದ ಮಿಟ್ಟು ಈರಪ್ಪ, ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಶ್ಯಾಂ ಕಾಳಯ್ಯ, ರವಿ ಮೊಣ್ಣಪ್ಪ, ಪೂ ದೇವಯ್ಯ, ನವೀನ್ ಅಪ್ಪಯ್ಯ ಉಪಸ್ಥಿತರಿದ್ದರು.

ಕಾಮನ್‌ವೆಲ್ತ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಅರುಣ್ ಮಾಚಯ್ಯ ಭಾಗಿ



ಪೊನ್ನಂಪೇಟೆ, ಸೆ.6– ಇದೇ ತಿಂಗಳ 7ರಿಂದ ಲಂಡನ್‌ನ ಬರ್ಮಿಂಗ್ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕರಾಟೆ ಚಾಂಪಿಯನ್‌ಶಿಪ್‌ಗೆ ಭಾರತ ತಂಡವನ್ನು ಪ್ರತಿನಿಧಿಸಲು ಹಿರಿಯ ಕರಾಟೆ ಪಟು ಮತ್ತು ಮಾಜಿ ಶಾಸಕ ಸಿ. ಎಸ್. ಅರುಣ್ ಮಾಚಯ್ಯ ಭಾರತದಿಂದ ತೆರಳಿದ್ದಾರೆ.

ಜಗತ್ತಿನ 70 ರಾಷ್ಟ್ರಗಳು ಪಾಲ್ಗೊಳ್ಳಲಿರುವ ಕಾಮನ್‌ವೆಲ್ತ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಪಾಲ್ಗೊಳ್ಳಲು ಭಾರತ ತಂಡಕ್ಕೆ ಆಯ್ಕೆಗೊಂಡಿರುವ 70 ಕರಾಟೆ ಪಟುಗಳ ತಂಡದ ನಾಯಕತ್ವ ವಹಿಸಿಕೊಂಡಿರುವ ಅರುಣ್ ಮಾಚಯ್ಯ ಅವರು, ತಮ್ಮ ತಂಡದೊಂದಿಗೆ ಕಳೆದ ಭಾನುವಾರ ಲಂಡನ್ನಿಗೆ ಪ್ರಯಾಣ ಬೆಳೆಸಿದ್ದಾರೆ.

ದಕ್ಷಿಣ ಭಾರತ ಕರಾಟೆ ಫೆಡರೇಷನ್ ಅಧ್ಯಕ್ಷರು, ಕರಾಟೆ ಇಂಡಿಯಾ ಆರ್ಗನೈಜೇಷನ್ ಹಿರಿಯ ಉಪಾಧ್ಯಕ್ಷರು ಹಾಗೂ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಅಧ್ಯಕ್ಷರೂ ಆಗಿರುವ ಸಿ.ಎಸ್.ಅರುಣ್ ಮಾಚಯ್ಯ ಅವರು ಈ ಹಿಂದೆ ವಿಶ್ವದ ಹಲವೆಡೆ ನಡೆದ ಹಲವಾರು ಅಂತರರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಶಾಂತಬೈಲು ಅವರ 'ಇದು ಬರಿ ಮಣ್ಣಲ್ಲ' ಪ್ರಬಂಧಕ್ಕೆ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ



ಮಡಿಕೇರಿ, ಸೆ.6– ಸಾಹಿತಿ ಸಹನಾ ಕಾಂತಬೈಲು ರಚಿತ 'ಇದು ಬರಿ ಮಣ್ಣಲ್ಲ' ಲಲಿತ ಪ್ರಬಂಧಕ್ಕೆ ಈ ಬಾರಿಯ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ ಲಭಿಸಿದೆ.

2021–22ನೇ ಸಾಲಿನ ಪ್ರಶಸ್ತಿಗಾಗಿ 12 ಲೇಖಕಿಯರು 16 ಕೃತಿಗಳನ್ನು ಪ್ರಸ್ತುತಪಡಿಸಿದ್ದರು. ಜಿಲ್ಲೆಯ ಮೂವರು ಹಿರಿಯ ಸಾಹಿತಿಗಳು ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದು, ಸಹನಾ ಕಾಂತಬೈಲು ಅವರ 'ಇದು ಬರಿ ಮಣ್ಣಲ್ಲ' ಲಲಿತ ಪ್ರಬಂಧಕ್ಕೆ ಪ್ರಶಸ್ತಿ ಲಭಿಸಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ತಿಳಿಸಿದ್ದಾರೆ.

ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿಯು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿಗಳಲ್ಲಿ ಅತ್ಯಂತ ಪ್ರತಿಷ್ಠಿತವಾದ ಪ್ರಶಸ್ತಿಯಾಗಿದೆ. ಜಿಲ್ಲೆಯ ಮಹಿಳಾ ಲೇಖಕಿಯರು ಪ್ರಕಟಿಸಿದ ಉತ್ತಮ ಕೃತಿಗೆ ಪ್ರಶಸ್ತಿ ನೀಡಿ ಗೌರವಿಸುವ ಮತ್ತು ಪ್ರೋತ್ಸಾಹಿಸುವ ಸಲುವಾಗಿ 18 ವರ್ಷಗಳ ಹಿಂದೆ ಕಸಾಪ ಅಧ್ಯಕ್ಷರಾಗಿದ್ದ ಟಿ.ಪಿ.ರಮೇಶ್ ಅವರ ಆಸಕ್ತಿಯಿಂದ ಸಾಹಿತಿ ಗೌರಮ್ಮ ಅವರ ಪುತ್ರ ಬಿ.ಜಿ. ವಸಂತ ಅವರು ಈ ಪ್ರಶಸ್ತಿಯನ್ನು ಸ್ಥಾಪಿಸಿದರು. ಇಲ್ಲಿಯವರೆಗೆ ಒಟ್ಟು 16 ಲೇಖಕಿಯರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನಕ್ಷತ್ರ ಆಮೆ ಮಾರಾಟ ಯತ್ನ: ಆರೋಪಿಗಳ ಬಂಧನ



ಕುಶಾಲನಗರ, ಸೆ.6– ಕುಶಾಲನಗರ ತಾಲೂಕಿನ ಕೂಡ್ಲೂರು ಗ್ರಾಮ ವ್ಯಾಪ್ತಿಯ ಕೂಡಿಗೆ–ಕುಶಾಲನಗರ ಮುಖ್ಯ ರಸ್ತೆಯಲ್ಲಿ ಭಾರತ್ ಪೆಟ್ರೋಲ್ ಬಂಕ್ ಮುಂಭಾಗ ಅಕ್ರಮವಾಗಿ ನಕ್ಷತ್ರ ಆಮೆಯನ್ನು ಸಾಗಿಸುತ್ತಿದ್ದ ಪ್ರಕರಣ ಪತ್ತೆ ಹಚ್ಚಿದ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿದ್ದಾರೆ.

ಶಾಂತಳ್ಳಿಯ ಬಾಚಳ್ಳಿ ಗ್ರಾಮದ ಜಿ.ಡಿ. ಗಿರೀಶ್ ಹಾಗೂ ಹಾಸನದ ಹಳ್ಳಿಗದ್ದೆ ಗ್ರಾಮದ ಅಭಿಶೇಖ್ ಹೆಚ್.ಎಂ. ಎಂಬುವವರನ್ನು ಬಂಧಿಸಿ ಒಂದು ನಕ್ಷತ್ರ ಆಮೆ ಹಾಗೂ ಕೃತ್ಯಕ್ಕೆ ಬಳಸಿದ (ಕೆಎ–51–ಪಿ–553) ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್ ಮೂರ್ತಿ, ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ ಪೂವಯ್ಯ, ಸೋಮವಾರಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ. ಗೋಪಾಲ್ ಅವರ ಮಾರ್ಗದರ್ಶನದಲ್ಲಿ ಕುಶಾಲನಗರ ವಲಯ ಅರಣ್ಯಾಧಿಕಾರಿ ಕೆ.ವಿ ಶಿವರಾಮ್, ಉಪ ವಲಯ ಅರಣ್ಯಾಧಿಕಾರಿ ಅನಿಲ್ ಡಿಸೋಜ, ಶ್ರವಣಕುಮಾರ ವಿಭೂತಿ, ಚೇತನ್ ಎನ್.ಎಲ್, ಅರಣ್ಯ ರಕ್ಷಕರಾದ ಸಚಿನ್ ಟಿ.ಕೆ, ವಾಹನ ಚಾಲಕ ಜೇವನ್ಸ್, ಬಸವರಾಜ್ ಹಾಗೂ ಆರ್‌ಆರ್‌ಟಿ ತಂಡದ ಸಿಬ್ಬಂದಿಗಳಾದ ರವಿ ಬಿ.ಪಿ, ಗಜೇಂದ್ರ ಬಿ.ಪಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಗೌರಿ-ಗಣೇಶ ವಿಸರ್ಜನೋತ್ಸವ ಶಾಂತಿಯುತವಾಗಿರಲಿ

● ಡಿ.ಜೆ, ಧ್ವನಿವರ್ಧಕ ರಾತ್ರಿ 10 ರವರೆಗೆ ಮಾತ್ರ ● 10ರ ನಂತ ಚಂಡೆ ಮದ್ದಳೆ, ವಾದ್ಯ ಬಳಸಿ



ವಿರಾಜಪೇಟೆ, ಸೆ.6– ವಿರಾಜಪೇಟೆಯಲ್ಲಿ ಶುಕ್ರವಾರ (ಸೆ.9) ನಡೆಯುವ ಗೌರಿ–ಗಣೇಶ ವಿಸರ್ಜನೋತ್ಸವವನ್ನು ಪರಂಪರೆಯಂತೆ ಒಗ್ಗಟ್ಟಿನಿಂದ ಶಾಂತಿಯುತವಾಗಿ ನಡೆಸಬೇಕು ಎಂದು ತಿಳಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲಚೀರ ಅಯ್ಯಪ್ಪ ಅವರು ನ್ಯಾಯಾಲಯ ಮತ್ತು ಸರ್ಕಾರದ ಆದೇಶದಂತೆ ಡಿಜೆ ಮತ್ತು ಧ್ವನಿವರ್ಧಕ ಬಳಕೆಗೆ ರಾತ್ರಿ 10 ಗಂಟೆ ನಂತರ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪೊಲೀಸ್ ಇಲಾಖೆ ವತಿಯಿಂದ ನಗರದ ಗಣಪತಿ ಅರ್ಕಿಡ್ ಸಭಾಂಗಣದಲ್ಲಿ ಆಯೋಜಿಸಿದ್ದ ಗೌರಿ–ಗಣೇಶ ಪ್ರತಿಷ್ಠಾಪನಾ 22 ಸಮಿತಿಗಳ ಸದಸ್ಯರು, ನಾಗರಿಕ ಪ್ರಮುಖರು, ಲೋಕೋಪಯೋಗಿ ಇಲಾಖೆ ಮತ್ತು ಪುರಸಭೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ನಿಯಮದಂತೆ ರಾತ್ರಿ 10 ಗಂಟೆವರೆಗೆ ಮಾತ್ರ ಡಿಜೆಯನ್ನು ಬಳಸಬಹುದು. ನಂತರ ಚಂಡೆ ಮದ್ದಾಳೆ, ವಾದ್ಯ ಬಳಸುವಂತೆ ಸೂಚಿಸಿದರು.

ಇದಕ್ಕೆ ಗೌರಿ ಗಣೇಶ ಸಮಿತಿ ಹಲವು ಸದಸ್ಯರುಗಳು ಆಕ್ಷೇಪ ವ್ಯಕ್ತಪಡಿಸಿ, ವಿರಾಜಪೇಟೆಯಲ್ಲಿ ಗಣೇಶೋತ್ಸವಕ್ಕೆ ಸುಮಾರು 200 ವರ್ಷದ ಇತಿಹಾಸವಿದ್ದು, ಇದನ್ನು ನಾಡಹಬ್ಬವಾಗಿ ಎಲ್ಲಾ ಜನಾಂಗದವರು ಒಂದಾಗಿ ಅದ್ದೂರಿಯಿಂದ ವರ್ಷಂಪ್ರತಿ ನಡೆಸಿಕೊಂಡು ಬರುತ್ತಿದ್ದಾರೆ ಇದೀಗ ಕಾನೂನು ಹಿನ್ನೆಲೆಯಲ್ಲಿ ರಾತ್ರಿ ಹತ್ತರ ಬಳಿಕ ಧ್ವನಿವರ್ಧಕ ಸಂಗೀತ ಬಳಕೆಗೆ ಅವಕಾಶ ಇಲ್ಲ ಎಂದರೆ ಭಕ್ತಾದಿಗಳಿಗೆ ನಿರಾಶೆಯಾಗುತ್ತದೆ. ಆದ್ದರಿಂದ ನಿಯಮ ಸಡಿಲಿಕೆ ಮಾಡಿ ರಾತ್ರಿ 2 ಗಂಟೆವರೆಗೆ ಅವಕಾಶ ನೀಡುವಂತೆ ಕೋರಿದರು. ಇದಕ್ಕೆ ವರಿಷ್ಠಾಧಿಕಾರಿ ಅಯ್ಯಪ್ಪ ಉತ್ತರಿಸಿ ಐತಿಹಾಸಿಕ ಉತ್ಸವಕ್ಕೆ ಅಡ್ಡಿ ಮಾಡುತ್ತಿಲ್ಲ. ನಾವು ಸರ್ಕಾರದ ಆದೇಶ ಮತ್ತು ನಿಯಮವನ್ನು ಪಾಲಿಸಬೇಕು. ಸ್ಥಳೀಯ ವಾದ್ಯವನ್ನು ಬಳಸಿಕೊಂಡು ಹಬ್ಬವನ್ನು ಆಚರಿಸುವಂತೆ ತಿಳಿಸಿದರು.

ಗೌರಿ ಗಣೇಶ ಸಮಿತಿ ವಕೀಲ ಟಿ.ಪಿ. ಕೃಷ್ಣ, ಪುರಸಭೆ ಸದಸ್ಯ ಸಿ.ಕೆ.ಪ್ರಥ್ವಿನಾಥ್, ಮಹ್ಮದ್ ರಫಿ, ಮಾಜಿ ಸದಸ್ಯ ರಚನ್ ಮೇದಪ್ಪ, ಹಿರಿಯ ವಕೀಲ ಎನ್.ಜಿ ಕಾಮತ್ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿ, ಸುಪ್ರಿಂಕೋರ್ಟ್ ಆದೇಶ, ಸರಕಾರದ ನಿಯಮಗಳು ಸರಿಯಷ್ಟೇ. ಆದರೆ ಐತಿಹಾಸಿಕ ಹಬ್ಬಕ್ಕೆ ವಿನಾಯಿತಿ ನೀಡಿ ಡಿಜೆ ಧ್ವನಿವರ್ಧಕಕ್ಕೆ ಕಾಲಾವಕಾಶ ಹೆಚ್ಚಿಸುವಂತೆ ಕೋರಿದರು.

ಗೌರಿ ಗಣೇಶೋತ್ಸವ ನಾಡಹಬ್ಬ ಆಚರಣಾ ಸಮಿತಿಯ ಅಧ್ಯಕ್ಷ ಬಿ.ಜೆ.ಸಾಯಿನಾಥ್ ಮಾತನಾಡಿ, ಎಲ್ಲಾ ಜನಾಂಗದವರು ಒಂದಾಗಿ ಸೇರಿ ಶಾಂತಿಯುತವಾಗಿ ವಿಸರ್ಜನೋತ್ಸವ ನಡೆಸುವ ಭರವಸೆ ನೀಡಿದರಲ್ಲದೆ ಪೊಲೀಸರಿಗೆ ಎಲ್ಲರೂ ಸಹಕರಿಸುವುದಾಗಿ ಹೇಳಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಸ್ವಾಗತಿಸಿದರೆ, ವೃತ್ತ ನಿರೀಕ್ಷಕರಾದ ಶಿವರುದ್ರ ವಂದಿಸಿದರು, ಗುಪ್ತ ದಳದ ವೃತ್ತ ನಿರೀಕ್ಷಕ ಮೇದಪ್ಪ, ನಗರ ಠಾಣಾಧಿಕಾರಿ ಶ್ರೀಧರ್, ಗ್ರಾಮಾಂತರ ಠಾಣಾಧಿಕಾರಿ ರವಿಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭೆಯಲ್ಲಿ ಪುರಸಭಾ ಅಧ್ಯಕ್ಷೆ ಸುಸ್ಮಿತಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಸೆಸ್ಕ್ ಸಹಾಯಕ ಅಭಿಯಂತರ ರಮೇಶ್, ಲೋಕೋಪಯೋಗಿ ಸಹಾಯಕ ಅಭಿಯಂತರ ಸಿದ್ದೆಗೌಡ ಮತ್ತು ಸಹಾಯಕ ಅಭಿಯಂತರ ರಾಮಣ್ಣಗೌಡ ನಗರದ ಕ್ರೈಸ್ತ ಮತ್ತು ಮುಸ್ಲಿಂ ಜನಾಂಗದ ಪ್ರಮುಖರು ಉಪಸ್ಥಿತರಿದ್ದರು.

ಗುಡ್ಡೆಹೊಸೂರಿನಲ್ಲಿ ಲೆಕ್ಕಪರಿಶೋಧನಾ ಗ್ರಾಮ ಸಭೆ



ಗುಡ್ಡೆಹೊಸೂರು, ಸೆ.6– ಇಲ್ಲಿನ ಗ್ರಾಪಂ 2021–22 ನೇ ಸಾಲಿನ ಲೆಕ್ಕ ಪರಿಶೋಧನಾ ಗ್ರಾಮ ಸಭೆಯು ಸಮುದಾಯ ಭವನದಲ್ಲಿ ಪಂಚಾಯ್ತಿ ಅಧ್ಯಕ್ಷೆ ನಂದಿನಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಉಪಾಧ್ಯಕ್ಷರಾದ ಯಶೋಧ, ಮತ್ತು ನೋಡಲ್ ಅಧಿಕಾರಿಯಾಗಿ ತೋಟಗಾರಿಕಾ ಇಲಾಖಾಧಿಕಾರಿ ಕಾವ್ಯ ಮತ್ತು ಗುಡ್ಡೆಹೊಸೂರು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಶ್ಯಾಂ ತಮ್ಮಯ್ಯ, ಹಾಗೂ ಜಿಪಂ ನೋಡಲ್ ಅಧಿಕಾರಿ ದಿನೇಶ್ ಹಾಜರಿದ್ದು, 2021–22ನೇ ಸಾಲಿನಲ್ಲಿ ಗ್ರಾಪಂ ವತಿಯಿಂದ ನಡೆಸಿದ ಕಾಮಗಾರಿಗಳ ಪಟ್ಟಿಯನ್ನು ಸಭೆಯಲ್ಲಿ ವಿವರಿಸಿದರು. ಅಲ್ಲದೆ ಹಲವು ಕಾಮಗಾರಿಗಳಿಗೆ ಅನುಮೋದನೆ ಪಡೆಯಲಾಯಿತು. ಸಭೆಯಲ್ಲಿ ಪಂಚಾಯ್ತಿಯ ಸರ್ವ ಸದಸ್ಯರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಮೂರ್ನಾಡು ಕಾಲೇಜಿನಲ್ಲಿ ಪ್ರತಿಭಾ ದಿನಾಚರಣೆ

ನಾಪೋಕ್ಲು, ಸೆ.6– ಇಲ್ಲಿಗೆ ಸಮೀಪದ ಮೂರ್ನಾಡಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು.

ಮೂರ್ನಾಡಿನ ಮಾರುತಿ ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ವಾಟೇರಿರ ಸಪ್ನ ಸುಬ್ಬಯ್ಯ ಹಾಗೂ ಮೂರ್ನಾಡಿನ ದಾನಿಗಳಾದ ಬಾಚೆಟ್ಟಿರ ಕಮಲು ಮುದ್ದಯ್ಯನವರು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಅತಿಥಿಗಳಾದ ಸಪ್ನ ಸುಬ್ಬಯ್ಯನವರು ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಗೆ ನಾವು ವೇದಿಕೆ ಕಲ್ಪಿಸಿ ಕೊಡಬೇಕು. ಅವರನ್ನು ಇನ್ನಷ್ಟು ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು. ಸಂಸ್ಥೆಯ ಅಧ್ಯಕ್ಷರಾದ ಬಾಚೆಟ್ಟಿರ ಜಿ. ಮಾದಪ್ಪನವರು ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳನ್ನು ಲವಲವಿಕೆಯಿಂದ ಇರುವಂತೆ ಮಾಡುತ್ತದೆ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಪುದಿಯೊಕ್ಕಡ ಸುಬ್ರಮಣಿ, ಕಾರ್ಯದರ್ಶಿಗಳಾದ ಪೆಮ್ಮುಡಿಯಂಡ ವೇಣು ಅಪ್ಪಣ್ಣ ಹಾಗೂ ಸಂಸ್ಥೆಯ ನಿರ್ದೇಶಕರುಗಳು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಪಟ್ಟಡ ಪೂವಣ್ಣನವರು ಹಾಗೂ ವಿದ್ಯಾಸಂಸ್ಥೆಯ ವಿವಿಧ ವಿಭಾಗದ ಮುಖ್ಯಸ್ಥರು ಉಪನ್ಯಾಸಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸದ ಜೊತೆಗೆ ಅವರಲ್ಲಿರುವ ಪ್ರತಿಭೆಯನ್ನು ಹೊರಹಾಕುವ ವೇದಿಕೆ ಇದಾಗಿದ್ದು, ವಿದ್ಯಾರ್ಥಿಗಳಿಂದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಡಿಸಿ ನೂತನ ಟ್ವಿಟರ್ ಖಾತೆ ಮತ್ತೆ ಆರಂಭ

ಮಡಿಕೇರಿ, ಸೆ.6– ಈ ಹಿಂದೆ ಬಳಸುತ್ತಿದ್ದ ಜಿಲ್ಲಾಧಿಕಾರಿಗಳ ಕಚೇರಿಯ ಸಾಮಾಜಿಕ ಜಾಲತಾಣಗಳಲ್ಲಿ ಒಂದಾದ ಟ್ವಿಟ್ಟರ್ ಖಾತೆ https://twitter.com/DCKodagu ನ್ನು ಕೆಲವು ತಾಂತ್ರಿಕ ಕಾರಣದಿಂದ ನಿಷ್ಕ್ರಿಯಗೊಳಿಸಲಾಗಿತ್ತು. ಇನ್ನು ಮುಂದೆ https://twitter.com/KodaguDC ಟ್ವಿಟ್ಟರ್ ಖಾತೆಯು ಚಾಲ್ತಿಯಲ್ಲಿರುತ್ತದೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

ಆಧುನಿಕ ಪಶುಪಾಲನೆ ಬಗ್ಗೆ ರೈತರಿಗೆ ತರಬೇತಿ

ಗೋಣಿಕೊಪ್ಪ, ಸೆ.6– ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದಲ್ಲಿ ರೈತರಿಗೆ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಆಧುನಿಕ ಪಶುಪಾಲನಾ ಚಟುವಟಿಕೆಗಳ ಬಗ್ಗೆ ರೈತರಿಗೆ ತರಬೇತಿ ನೀಡಲಾಯಿತು.

ಪೊನ್ನಂಪೇಟೆ ಗ್ರಾ ಪಂ. ಉಪಾಧ್ಯಕ್ಷೆ ಬೊಟ್ಟಂಗಡ ದಶಮಿ ಸದಾ ಗಿಡಕ್ಕೆ ನೀರೆರೆದು ಉದ್ಘಾಟಿಸಿದರು. ಕೊಡಗು ಜಿಲ್ಲಾ ರೈತ ಸಂಘ ಅಧ್ಯಕ್ಷ ಮನು ಸೋಮಯ್ಯ ಮಾತನಾಡಿ, ಪಶು ಸಂಗೋಪನೆಯಿಂದ ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಅವಕಾಶವಿದೆ. ಇದರ ಪ್ರಯೋಜನ ರೈತರು ಪಡೆದುಕೊಳ್ಳಬೇಕು ಎಂದರು.

ವಿರಾಜಪೇಟೆ ಕೃಷಿಕ ಸಮಾಜದ ಸದಸ್ಯ ಕುಂಞಂಗಡ ಅರುಣ್ ಭೀಮಯ್ಯ ಮಾತನಾಡಿ, ಇತ್ತೀಚೆಗೆ ಹಸು ಸಾಕಾಣಿಕೆ ಕಡಿಮೆಯಾಗುತ್ತಿದ್ದು, ರೈತರು ಆಧುನಿಕ ಪದ್ಧತಿ ಅಳವಡಿಸಿ ಹಸು ಸಾಕಾಣಿಕೆ ಮಾಡಿ ಆದಾಯ ಹೆಚ್ಚಿಸಿಕೊಳ್ಳಬೇಕಿದೆ. ಬೆಳೆಗಳಿಗೆ ಕೂಡ ಕೊಟ್ಟಿಗೆ ಗೊಬ್ಬರ ಅವಶ್ಯ ಎಂದರು. ಅರಣ್ಯ ಮಹಾವಿದ್ಯಾಲಯದ ಮುಖ್ಯಸ್ಥ ಡಾ. ಸಿ. ಜಿ. ಕುಶಾಲಪ್ಪ ಮಾತನಾಡಿದರು.

ಜೇನು ಸಾಕಾಣಿಕೆ ಬಗ್ಗೆ ವಿಜ್ಞಾನಿ ಕೆಂಚಾರೆಡ್ಡಿ ಮಾಹಿತಿ ನೀಡಿದರು. ವಿಜ್ಞಾನಿಗಳಾದ ಡಾ. ಸಿದ್ದರಾಮಣ್ಣ, ಡಾ. ಚಂದ್ರಶೇಖರಯ್ಯ ತರಬೇತಿ ಮೂಲಕ ಸಲಹೆ ನೀಡಿದರು. ಪೊನ್ನಂಪೇಟೆ ತಾಲೂಕು ಮುಖ್ಯ ಪಶುವೈದ್ಯಾಧಿಕಾರಿ ಡಾ ಎ. ಎಸ್. ಶಾಂತೇಶ ಇತರರಿದ್ದರು.

ಕೋಮು ಪ್ರಚೋದನೆ, ಜಾತಿ-ಧರ್ಮಗಳ ಬಿಟ್ಟು ಶಾಂತಿಯ ಕೊಡಗು ನಿರ್ಮಾಣ ಅತ್ಯವಶ್ಯಕ

'ಕೊಡಗು ಬಚಾವೋ ವೇದಿಕೆ' ಸಭೆಯಲ್ಲಿ ಸಂಕೇತ್ ಪೂವಯ್ಯ ಕರೆ



ಮಡಿಕೇರಿ, ಸೆ.6– ಕೋಮು ಪ್ರಚೋದನೆಯ ಮೂಲಕ ಸಮಾಜವನ್ನು ವಿಭಜಿಸಿ, ಕೇವಲ ಮತ ರಾಜಕಾರಣಕ್ಕೆ ಸೀಮಿತವಾಗಿ ರಾಜಕೀಯ ಪಕ್ಷಗಳು ಕಾರ್ಯಾಚರಿಸುತ್ತಿವೆ. ಇವುಗಳನ್ನು ಮೀರಿ ಜಾತಿ ಧರ್ಮಗಳ ಎಲ್ಲೆಯನ್ನು ದಾಟಿ ಕೊಡಗಿನಲ್ಲಿ ಸರ್ವಜನಾಂಗದ ಶಾಂತಿಯ ತೋಟವನ್ನು ನಿರ್ಮಿಸುವುದು ಅತ್ಯವಶ್ಯವೆಂದು ಸಮಾಜ ಸೇವಕ ಮೇರಿಯಮಡ ಸಂಕೇತ್ ಪೂವಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊಡಗನ್ನು ಇಲ್ಲಿನ ಪ್ರಕೃತಿ, ಸಂಸ್ಕೃತಿ ಮತ್ತು ಸಹೃದಯತೆಯ ಭಾವನೆಗಳೊಂದಿಗೆ ಮತ್ತೆ ಕಟ್ಟಬೇಕೆನ್ನುವ ಚಿಂತನೆಗಳಡಿ ರೂಪುಗೊಂಡಿರುವ 'ಕೊಡಗು ಬಚಾವೋ ವೇದಿಕೆ'ಯ ಮೊದಲ ಸಭೆ ಇಲ್ಲಿನ ವಾಣಿಜ್ಯೋದ್ಯಮಿಗಳ ಸಹಕಾರ ಸಂಘದ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಸಂಕೇತ್ ಪೂವಯ್ಯ, ಜಾತ್ಯತೀತ ಚಿಂತನೆಯ ಮಂದಿಯನ್ನು ಒಗ್ಗೂಡಿಸಿ ಕೋಮುವಾದದ ವಿರುದ್ಧ ಜಿಲ್ಲೆಯಲ್ಲಿ ಹೋರಾಟವನ್ನು ರೂಪಿಸಬೇಕು. ಆ ಮೂಲಕ ಸೌಹಾರ್ದಯುತ ಸಮಾಜವನ್ನು ಕಟ್ಟಬೇಕೆನ್ನುವ ಆಶಯಕ್ಕೆ ಪೂರಕವಾಗಿ ನಿರಂತರವಾಗಿ ವೇದಿಕೆ ಮೂಲಕ ಕಾರ್ಯನಿರ್ವಹಿಸುವುದಾಗಿ ಘೋಷಿಸಿದರು.

ಪ್ರಮುಖ ರಾಜಕೀಯ ಪಕ್ಷಗಳೆಲ್ಲವೂ ಅಧಿಕಾರವನ್ನು ಪಡೆದು ಜನರ ಸಂಕಷ್ಟಗಳಿಗೆ ಸ್ಪಂದಿಸದೆ, ಕೇವಲ ಅಧಿಕಾರಕ್ಕಾಗಿ ಹೋರಾಟ ಮಾಡಿದ ಪರಿಣಾಮ ಪ್ರಸ್ತುತ, ಸಮಾಜದ ತಳ ಹಂತದ ಜನತೆ ಶಾಸಕಾಂಗ ಮತ್ತು ಕಾರ್ಯಾಂಗದಿಂದ ಸಂಪೂರ್ಣ ಭ್ರಮನಿರಸನಗೊಂಡಿದ್ದಾರೆ. ರಾಜಕಾರಣದಲ್ಲಿ ಧರ್ಮ ಮತ್ತು ಜಾತಿಯ ವಿಚಾರಗಳನ್ನು ಬೆರೆಸುವ ಮೂಲಕ 'ಪ್ರಜಾತಂತ್ರ' ವ್ಯವಸ್ಥೆಗೆ ಬೆಲೆ ಇಲ್ಲದಂತೆ ಮಾಡಿರುವುದಾಗಿ ವಿಷಾದಿಸಿದ ಅವರು, ವಿಶ್ವದ ಅತ್ಯಂತ ಶ್ರೇಷ್ಠವಾದ ಭಾರತದ ಸಂವಿಧಾನದ ಆಶಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ರಾಜಕೀಯ ಪಕ್ಷಗಳು ಸೋತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ವೇದಿಕೆಯ ಪ್ರಮುಖರಾದ ಪಾಣತ್ತಲೆ ವಿಶ್ವನಾಥ್ ಅವರು ಮಾತನಾಡಿ, ಕೋಮು ಭಾವನೆಗಳಿಂದ ಪ್ರಚೋದಿತವಾದ ಕೊಡಗನ್ನು ರಕ್ಷಿಸುವ, ಶಾಂತಿಯ ನಾಡನ್ನಾಗಿ ಮತ್ತೆ ಕಾಣಬೇಕೆನ್ನುವ ಹಂಬಲ ತಮ್ಮದು. ಇಂತಹ ಅಶಾಂತಿಯ ವಾತಾವರಣದಿಂದ ಹೊರ ಬರಲು ಬಸವಣ್ಣನ ಸಮಾನತೆಯ ತತ್ವಾದರ್ಶಗಳು ಅತ್ಯಂತ ಸಹಕಾರಿಯಾಗಿದೆ ಎಂದು ಹೇಳಿದರು.

ವೇದಿಕೆಯ ಕಾರ್ಯದರ್ಶಿ ಮೋಹನ್ ಮೌರ್ಯ ಮಾತನಾಡಿ, ಕೋಮುಭಾವನೆಗಳ ಮೂಲಕ ಕೊಡಗಿನಲ್ಲಿ ಅಶಾಂತಿಯನ್ನು ಬಿತ್ತುವ ಕಾರ್ಯವಾಗುತ್ತಿದೆ. ಇಂತಹದ್ದನ್ನು ಕಂಡೂ ಚಿಂತನಶೀಲರು ಮೌನವಾಗಿರುವುದೇ ಇದಕ್ಕೆ ಕಾರಣ. ಇನ್ನಾದರು ಪ್ರತಿಯೊಬ್ಬರು ಈ ನಿಟ್ಟಿನಲ್ಲಿ ಚಿಂತನೆ ಹರಿಸಬೇಕೆಂದರು. ಸುಂಟಿಕೊಪ್ಪದ ಎಂ.ಎಂ. ಶರೀಫ್ ಅವರು ಮಾತನಾಡಿ, ದಶಕಗಳ ಹಿಂದೆ ನಾವು ಕಂಡಿದ್ದ ಸುಂದರವಾದ, ಸ್ನೇಹಪೂರ್ಣವಾದ ಕೊಡಗನ್ನು ಮತ್ತೆ ನಾವು ಮರಳಿ ಪಡೆಯಬೇಕಾಗಿದೆ. ಆ ನಿಟ್ಟಿನ ಪ್ರಯತ್ನಗಳು ವೇದಿಕೆಯಿಂದ ನಡೆಯಲೆಂದು ಆಶಿಸಿದರು.

ನಿವೃತ್ತ ಪೌರಾಯುಕ್ತರಾದ ಬಿ.ಬಿ.ಪುಷ್ಪಾವತಿ ಮಾತನಾಡಿ, ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳುವ ಏಕೈಕ ಉದ್ದೇಶದಿಂದ ಸಮಾಜದ ಹಾದಿಯನ್ನು ತಪ್ಪಿಸುತ್ತಿವೆ. ಬಡಜನರ ಮೂಲಭೂತ ಸಮಸ್ಯೆಗಳು ರಾಜಕೀಯ ಪಕ್ಷಗಳಿಗೆ ಬೇಕಿಲ್ಲ. ಬದಲಾಗಿ ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನಗಳಷ್ಟೆ ಅವರ ಮುಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗುಲಾಬಿ ಜನಾರ್ಧನ್ ಅವರು ಮಾತನಾಡಿ, ಕೊಡಗಿನಲ್ಲಿ ಇರುವ ವಿವಿಧ ಜಾತಿ ಜನಾಂಗ ಬಾಂಧವರಿದ್ದು, ನಾವೆಲ್ಲರೂ ಒಂದೇ ಎನ್ನುವ ಭಾವನೆಯನ್ನು ಪ್ರತಿಯೊಬ್ಬರಲ್ಲೂ ಮೂಡಿಸುವ ಕೆಲಸ ನಡೆಯಬೇಕೆಂದರು. ಸಭೆಯಲ್ಲಿ ವೇದಿಕೆಯ ಪ್ರಮುಖರಾದ ಕೆ.ಎಂ.ಗಣೇಶ್, ವೇದಿಕೆ ಸಂಚಾಲಕರಾದ ಯೂಸುಫ್ ಕೊಂಡಂಗೇರಿ, ಸುನಿಲ್, ಲೀಲಾ ಶೇಷಮ್ಮ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.

ಅರ್ಜಿಗೆ ಕಾಲಾವಕಾಶ

ಮಡಿಕೇರಿ, ಸೆ.6–ಡಾ.ಬಾಬು ಜಗಜೀವನಾ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ವಿವಿಧ ಕ್ರಿಯಾ ಯೋಜನೆಗಳಿಗೆ 2022–23 ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಲು ಸೆ.15 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಸೇವಾಸಿಂಧು ಗ್ರಾಮ–1 ರಲ್ಲಿ ಅರ್ಜಿ ಸಲ್ಲಿಸಿ ನಿಗಮದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದೆ. ಹೆಚ್ಚಿನ ಮಾಹಿತಿಗೆ 9945445556 ನ್ನು ಸಂಪರ್ಕಿಸಬಹುದು ಎಂದು ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಜಿಲ್ಲಾ ಸಂಯೋಜಕರು ತಿಳಿಸಿದ್ದಾರೆ.

ದುಗ್ಗಳ ಪರಮೇಶ್ವರ ನಿಧನ

ನಾಪೋಕ್ಲು, ಸೆ.6– ಆಲೇಟಿ ಗ್ರಾಮದ ಅರಬೂರಿನ ದುಗ್ಗಳ ಪರಮೇಶ್ವರ (68) ಅವರು ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಸಂಸ್ಕಾರ ಮಂಗಳವಾರ ಸಂಜೆ ಮೃತರ ಸ್ವಗ್ರಾಮದಲ್ಲಿ ಜರುಗಿತು.



ಹದಗೆಟ್ಟ ರಸ್ತೆ, ಚರಂಡಿ ದುರಸ್ತಿ ಪಡಿಸದಿದ್ದಲ್ಲಿ ಮೂರ್ನಾಡು ಬಂದ್

ಮಡಿಕೇರಿ, ಸೆ.6– ಕುಂಬಳದಾಳು, ಹೊದ್ದೂರು, ಮೂರ್ನಾಡು ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ತಕ್ಷಣ ದುರಸ್ತಿ ಕಾರ್ಯ ಕೈಗೊಳ್ಳಬೇಕು. ತಪ್ಪಿದಲ್ಲಿ ಮೂರ್ನಾಡು ಬಂದ್‌ಗೆ ಕರೆ ನೀಡುವುದಾಗಿ ಈ ಭಾಗದ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.



ಜಿಲ್ಲಾಡಳಿತ ಹಾಗೂ ಜಿ.ಪಂ ಗೆ ಮನವಿ ಸಲ್ಲಿಸಿದ ಗ್ರಾಮಸ್ಥರು, ಗ್ರಾಮದ ರಸ್ತೆ ಅವ್ಯವಸ್ಥೆ ಬಗ್ಗೆ ವಿವರಿಸಿದರು. ಮೂರ್ನಾಡು, ಕುಂಬಳದಾಳು ಪ್ರವೇಶಿಸುವ ರಸ್ತೆಯನ್ನು ಅಗೆದು ಹಾಕಿ ವರ್ಷಗಳೇ ಕಳೆದಿದ್ದರೂ ಇಲ್ಲಿಯವರೆಗೆ ಡಾಂಬರೀಕರಣ ಮಾಡಿಲ್ಲ. ಮೂರ್ನಾಡು ಪಟ್ಟಣದಲ್ಲಿ ಚರಂಡಿಯನ್ನು ಕಿತ್ತು ಹಾಕಲಾಗಿದೆ ಇದರಿಂದ ಪಾದಚಾರಿಗಳು ಮತ್ತು ಶಾಲಾ ಮಕ್ಕಳು ಚರಂಡಿಯಲ್ಲಿ ಬಿದ್ದು ಗಾಯಗಳಾಗಿರುವ ಘಟನೆಯು ನಡೆದಿದೆ. ಆದ್ದರಿಂದ ತಕ್ಷಣ ರಸ್ತೆ ಡಾಂಬರೀಕರಣ ಮತ್ತು ಚರಂಡಿ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕುಂಬಳದಾಳು ರಸ್ತೆಯಿಂದ ಕೊಡವ ಸಮಾಜದವರೆಗೆ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಕೊಡವ ಸಮಾಜದಲ್ಲಿ ಸಮಾರಂಭ ನಡೆಯುವ ಸಂದರ್ಭ ರಸ್ತೆಯಲ್ಲಿ ಏಕಮುಖ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು, ಮುಖ್ಯ ದ್ವಾರದ ಬಳಿ ಬಸ್ಸು ಮತ್ತು ಲಾರಿ ಸಂಚಾರಕ್ಕೆ ಅಡಚಣೆಯಾಗಿರುವ ವಿದ್ಯುತ್ ಕಂಬವನ್ನು ತಕ್ಷಣ ತೆರವುಗೊಳಿಸಬೇಕೆಂದು ಆಗ್ರಹಿಸಿದರು.

ಕುಂಬಳದಾಳು ಜ್ಞಾನ ಜ್ಯೋತಿ ಶಾಲೆಯ ಬಳಿ ರಸ್ತೆ ಬದಿಯಲ್ಲಿ ನಿಂತಿರುವ ಹಳೆಯ ವಾಹನಗಳಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಇವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಮೂರ್ನಾಡು, ಹೊದ್ದೂರು ನಾಪೋಕ್ಲು ರಸ್ತೆ ಕಳೆದ ಏಳು ವರ್ಷಗಳಿಂದ ಸಂಪೂರ್ಣ ಹದಗೆಟ್ಟಿದ್ದು, ಸ್ಥಳ ಪರಿಶೀಲಿಸಿ ತಕ್ಷಣ ಡಾಂಬರೀಕರಣ ಮಾಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು. ಈ ಬೇಡಿಕೆಗಳಿಗೆ ಮುಂದಿನ ಒಂದು ತಿಂಗಳೊಳಗೆ ಸೂಕ್ತ ಸ್ಪಂದನೆ ದೊರೆಯದಿದ್ದಲ್ಲಿ ಮೂರ್ನಾಡು ಬಂದ್ ಮಾಡಿ ಮೌನ ಮೆರವಣಿಗೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಭಾರತ್ ಜೋಡೋ ಯಾತ್ರೆ: ವಿಪಕ್ಷ ನಾಯಕ ಸಿದ್ದರಾಮಯ್ಯ ಸ್ಥಳ ಪರಿಶೀಲನೆ

ಜನರ ಸಂಕಷ್ಟಕ್ಕೆ ಸ್ಪಂದಿಸದೆ 40 ಪರ್ಸೆಂಟ್ ಕಮಿಷನ್ ದಂಧೆ: ಬಿಜೆಪಿ ವಿರುದ್ಧ ಕಿಡಿ

ಗುಂಡ್ಲುಪೇಟೆ, ಸೆ.6-ಬಿಜೆಪಿ ಪ್ರಸ್ತುತ ವಲಸಿಗರ ಪಕ್ಷವಾಗಿದ್ದು, ಜನರ ಕಷ್ಟಗಳಿಗೆ ಸ್ಪಂದಿಸುವುದು ಬಿಟ್ಟು 40 ಪರ್ಸೆಂಟ್ ಕಮಿಷನ್ ದಂಧೆಯಲ್ಲಿ ತೊಡಗಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಹಮ್ಮಿಕೊಂಡಿರುವ ಭಾರತ್ ಜೋಡೋ ಯಾತ್ರೆ ಪಟ್ಟಣ ಮೂಲಕ ಸೆ.30ರಂದು ರಾಜ್ಯಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ಪೂರ್ವಭಾವಿ ವೀಕ್ಷಣೆಗೆ ಆಗಮಿಸಿದ್ದ ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಕಾಂಗ್ರೆಸ್ ಸುಭದ್ರ: ಕೆಲ ಮುಖಂಡರು ಕಾಂಗ್ರೆಸ್ ತೊರೆಯುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಮುಖ್ಯಮಂತ್ರಿ ಬೊಮ್ಮಾಯಿ, ಸಚಿವರಾದ ಸೋಮಣ್ಣ, ಭೈರತಿ ಬಸವ ರಾಜು ಹಾಗೂ ಮುನಿರತ್ನ ಸೇರಿದಂತೆ ಬಿಜೆಪಿಯಲ್ಲಿ ವಲಸಿಗರೇ ತುಂಬಿಕೊಂಡಿದ್ದಾರೆ. ಗುಲಾಂ ನಬಿ ಆಜಾದ್‌ಗೆ ಕಾಂಗ್ರೆಸ್ ಎಲ್ಲಾ ಅಧಿಕಾರವನ್ನೂ ಕೊಟ್ಟಿದ್ದರೂ ರಾಜ್ಯಸಭೆ ಸದಸ್ಯರನ್ನಾಗಿ ಮಾಡಲಿಲ್ಲ ಎಂಬ ಕಾರಣಕ್ಕೆ ಪಕ್ಷ ತೊರೆದಿದ್ದಾರೆ. ಯಾರೇ ಪಕ್ಷ ಬಿಟ್ಟು ಹೋದರೂ ಕಾಂಗ್ರೆಸ್ ಸುಭದ್ರವಾಗಿರಲಿದೆ ಎಂದರು.

ಕಾಂಗ್ರೆಸ್ ಮೇಲೆ ಗೂಬೆ: ರಾಜಕಾಲುವೆ ಒತ್ತುವರಿ ತೆರವು ಹಾಗೂ ಒಳಚರಂಡಿ ಸ್ವಚ್ಛಗೊಳಿಸಿದ ಪರಿಣಾಮ ಮಳೆಗಾಲದಲ್ಲಿ ಬೆಂಗಳೂರಿನಲ್ಲಿ ಪ್ರವಾಹ ಉಂಟಾಗುತ್ತಿದೆ. ಮಳೆಗಾಲಕ್ಕೆ ಸಿದ್ಧತೆ ಮಾಡಿಕೊಳ್ಳದ ಸರ್ಕಾರ ವಿನಾಕಾರಣ ಕಾಂಗ್ರೆಸ್ ಮೇಲೆ ಗೂಬೆ ಕೂರಿಸುತ್ತಿದೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಗಣೇಶ್ ಪ್ರಸಾದ್ ಅಭ್ಯರ್ಥಿ: ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ತಾಲೂಕಿನಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗಣೇಶ್ ಪ್ರಸಾದ್ ಸ್ಪರ್ಧಿಸಲಿದ್ದು, ಭರ್ಜರಿ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಿರಂತರ ಹೋರಾಟ: ರಾಜ್ಯ ಸರ್ಕಾರದ ಭ್ರಷ್ಟಾಚಾರ ವಿರುದ್ಧ ಕಾಂಗ್ರೆಸ್ ನಿರಂತರ ಹೋರಾಟ ನಡೆಸಲಿದೆ. ಕಮಿಷನ್ ಮೇಲೆ ಕಣ್ಣಿಟ್ಟು ಅಭಿವೃದ್ಧಿ ಕಾರ್ಯ ಮರೆತಿರುವುದರಿಂದ ಬಿಜೆಪಿ ಈ ಬಾರಿ ಹೀನಾಯ ಸೋಲು ಅನುಭವಿಸುತ್ತದೆ. ಆದ್ದರಿಂದಲೇ ರಾಜ್ಯದ ನಾಯಕರನ್ನು ನಂಬದೆ ಪ್ರಧಾನಿ ನರೇಂದ್ರ ಮೋದಿ ಪ್ರತಿ ತಿಂಗಳೂ ರಾಜ್ಯಕ್ಕೆ ಭೇಟಿ ನೀಡುವ ಮಾತುಗಳನ್ನಾಡಿದ್ದಾರೆ ಎಂದು ಕುಟುಕಿದರು.

ಸ್ಥಳ ಪರಿಶೀಲನೆ: ಸುದ್ದಿಗೋಷ್ಠಿಗೂ ಮುನ್ನ ಪಾದಯಾತ್ರೆಸಂಚರಿಸುವ ಡಾ.ಬಿ.ಆರ್. ಅಂಬೇಡ್ಕರ್ ಭವನ, ಊಟಿ ವೃತ್ತ ಸುತ್ತಮುತ್ತ ಪರಿಶೀಲಿಸಿ ದರಲ್ಲದೆ, ತಾಲೂಕಿನ ಬೇಗೂರು, ಗರಗನಹಳ್ಳಿ ಗೇಟ್ ಬಳಿ ಸ್ಥಳ ವೀಕ್ಷಿಸಿ ವಿವರ ಪಡೆದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು, ರಾಜಶೇಖರ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡ ಪ್ರಸಾದ್, ಮುಖಂಡರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಕೆ.ಎಸ್. ಮಹೇಶ್, ಎಲ್.ಸುರೇಶ್, ಬಸವರಾಜು, ಕೆಂಪರಾಜು ಸೇರಿದಂತೆ ಹಲವರು ಇದ್ದರು.



ಭಾರತ್ ಜೋಡೋ ಯಾತ್ರೆ ಹಿನ್ನೆಲೆ ಗುಂಡ್ಲುಪೇಟೆಯ ಅಂಬೇಡ್ಕರ್ ಭವನ ಬಳಿ ವಿಪಕ್ಷ ನಾಯಕ ಸಿದ್ದರಾಮಯ್ಯ ಸ್ಥಳ ಪರಿಶೀಲಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಯತೀಂದ್ರ ಸಿದ್ದರಾಮಯ್ಯ ಇತರರು ಈ ಸಂದರ್ಭದಲ್ಲಿದ್ದರು.

ಜೆಡಿಎಸ್ ಇಂಗು ತಿಂದ ಮಂಗನಂತಾಗಿದೆ

ಮೈಸೂರು ಮೇಯರ್ ಚುನಾವಣೆ ವಿಷಯದಲ್ಲಿ ಜೆಡಿಎಸ್ ರಾಜಕೀಯ ಘನತೆ ಬಿಟ್ಟು ಅವಕಾಶವಾದಿಯಾಗಿದೆ. ಬಿಜೆಪಿಯವರು ಮಕ್ಮಲ್ ಟೋಪಿ ಹಾಕಿ ಮೇಯರ್, ಉಪಮೇಯರ್ ಎರಡೂ ಹುದ್ದೆಗಳನ್ನು ಹೊಡೆದುಕೊಂಡಿದ್ದಾರೆ ಎರಡನ್ನೂ ಬಿಜೆಪಿಗೆ ಬಿಟ್ಟುಕೊಟ್ಟು ಜೆಡಿಎಸ್ ಇಂಗು ತಿಂದ ಮಂಗನಂತಾಗಿದೆ. ಮೂರು ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದರೆ ಕಾಂಗ್ರೆಸ್ ಅಧಿಕಾರ ಹಿಡಿಯುತ್ತಿತ್ತು ಎಂದು ಸಿದ್ದರಾಮಯ್ಯ ಮೈಸೂರು ಮೇಯರ್ ಚುನಾವಣೆ ಕುರಿತು ಪ್ರತಿಕ್ರಿಯಿಸಿದರು.

ತಹಸೀಲ್ದಾರ್, ಡಿವೈಎಸ್‌ಪಿ, ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ

ಪ್ರವಾಹದಲ್ಲಿ ಸಿಲುಕಿದ್ದ ರೈತನ ರಕ್ಷಣೆ

ಚಾಮರಾಜನಗರ, ಸೆ.6-ಪ್ರವಾಹಕ್ಕೆ ಸಿಲುಕಿ ತೆಂಗಿನಮರ ಏರಿ ಕುಳಿತಿದ್ದ ಕಣ್ಣೇಗಾಲದ ರೈತರೊಬ್ಬರನ್ನು 10 ಗಂಟೆಗೂ ಅಧಿಕ ಕಾಲ ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ.



ಕಣ್ಣೇಗಾಲ ಗ್ರಾಮದ ರಾಮಸ್ವಾಮಿ ನಾಯಕ(62) ಗ್ರಾಮದಿಂದ 2.5 ಕಿ.ಮೀ ದೂರವಿರುವ ತಮ್ಮ ಜಮೀನಿಗೆ ಸೋಮವಾರ ಬೆಳಗ್ಗೆ ತೆರಳಿದ್ದರು. ಸಾಯಂಕಾಲ ವಾಪಸ್ಸಾಗುವ ವೇಳೆಗೆ ನೆರೆ ನೀರಿನ ಮಟ್ಟ ಹೆಚ್ಚಾಗಿದೆ. ಇದರಿಂದ ಆಶ್ರಯಕ್ಕಾಗಿ ರಾಮಸ್ವಾಮಿ ಅವರು ಜಮೀನಲ್ಲಿನ ತೆಂಗಿನಮರ ಏರಿ ಕುಳಿತಿದ್ದರು. ವಿಷಯ ತಿಳಿದು ಸಂಜೆ 4.30ರ ವೇಳೆಗೆ ಅಗ್ನಿಶಾಮಕ ಅಧಿಕಾರಿಗಳ ತಂಡ ತೆರಳಿ ಕಾರ್ಯಾಚರಣೆಗೆ ಇಳಿಯಿತು. ಆದರೆ ನೀರಿನ ರಭಸ ಹಾಗೂ ಮುಳ್ಳುಗಳಿಂದ ಕೂಡಿದ ಪ್ರದೇಶವಾಗಿದ್ದರಿಂದ ದೋಣಿ ಮೂಲಕ ರಕ್ಷಿಸುವ ಕಾರ್ಯ ಸಫಲವಾಗಲಿಲ್ಲ. ರಾತ್ರಿ 10 ಗಂಟೆ ವೇಳೆಗೆ ತಹಸೀಲ್ದಾರ್ ಬಸವರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ, ಸಬ್‌ಇನ್ಸ್‌ಪೆಕ್ಟರ್ ತಾಜುದ್ದೀನ್ ಅವರೂ ಸಹ ಲೈಫ್ ಜಾಕೆಟ್ ಧರಿಸಿ ಗ್ರಾಮದ ಈಜು ಪರಿಣಿತರೊಂದಿಗೆ ಸ್ವತಃ ಕಾರ್ಯಾಚರಣೆ ತಂಡದೊಂದಿಗೆ ರಕ್ಷಣಾ ಕಾರ್ಯದಲ್ಲಿ ತೊಡಗಿ ಮುಂಜಾನೆ 3 ಗಂಟೆಯ ವೇಳೆಗೆ ರಾಮಸ್ವಾಮಿ ನಾಯಕರನ್ನು ಸುರಕ್ಷಿತವಾಗಿ ಕರೆತರಲಾಯಿತು.

ರಾತ್ರಿಯಿಡೀ ನಡೆದ ರಕ್ಷಣಾ ಕಾರ್ಯಾಚರಣೆಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ ನಿರಂತರ ಸಂಪರ್ಕದಲ್ಲಿದ್ದು, ನಿರ್ದೇಶನ ನೀಡಿದರು. ಕಾರ್ಯಾಚರಣೆಗೆ ಗ್ರಾಮಸ್ಥರು, ಯುವಕರು, ಗ್ರಾಮ ಪಂಚಾಯಿತಿ ಸದಸ್ಯರು ಸಹ ನೆರವಾದರು. ಇಂದು ಬೆಳಗ್ಗೆ ರಾಮಸ್ವಾಮಿ ನಾಯಕ ಅವರ ಮನೆಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಪ್ರವಾಹಪೀಡಿತ ಪ್ರದೇಶದಿಂದ 20 ಜನರ ರಕ್ಷಣೆ

ಚಾಮರಾಜನಗರ, ಸೆ.6-ಪ್ರವಾಹದ ನೀರಿನಿಂದ ಆವೃತವಾಗಿದ್ದ ಮನೆಗಳಲ್ಲಿ ಇದ್ದ ತಾಲೂಕಿನ ಕಣ್ಣೇಗಾಲ ಗ್ರಾಮ ಸಮೀಪದ ಹಂದಿಜೋಗಿ ಸಮುದಾಯದ 20 ಜನರನ್ನು ತಾಲೂಕು ಆಡಳಿತ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ. ಇಂದು ತಾಲೂಕು ಆಡಳಿತ, ಅಗ್ನಿಶಾಮಕ ದಳ, ಟ್ರಾಕ್ಟರ್ ನೆರವಿನಿಂದ 6 ತಿಂಗಳ ಮಗು, 80 ವರ್ಷದ ವೃದ್ಧೆ ಸೇರಿದಂತೆ ಒಟ್ಟು 20 ಮಂದಿಯನ್ನು ರಕ್ಷಿಸಿ ಕಾಳಜಿ ಕೇಂದ್ರಕ್ಕೆ ಕರೆತರಲಾಗಿದೆ. ತಹಸೀಲ್ದಾರ್ ಬಸವರಾಜು, ಸಬ್ ಇನ್ಸ್‌ಪೆಕ್ಟರ್ ತಾಜುದ್ದೀನ್, ಗ್ರಾಪಂ, ಕಂದಾಯ ಇಲಾಖಾಧಿಕಾರಿಗಳು ಕಾರ್ಯಾಚರಣೆ ಕೈಗೊಂಡು ಜನರನ್ನು ಸ್ಥಳಾಂತರಿಸಿದ್ದಾರೆ.

ಕೆರೆಗಳ ಕೋಡಿ; ಸರ್ಕಾರಿ ಕಚೇರಿಗಳು ಜಲಾವೃತ



ಬೇಗೂರು, ಸೆ.6-ವಾರದಿಂದ ಸುರಿಯುತ್ತಿರುವ ಮಳೆಯಿಂದ ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ, ಬೆಳಚಲವಾಡಿ, ಕುರುಬರಹುಂಡಿ ಕೆರೆಗಳು ಕೋಡಿ ಬಿದ್ದು, ಬೇಗೂರು ಗ್ರಾಮದ ಬಾಲಕಿಯರ ವಿದ್ಯಾರ್ಥಿನಿಲಯ, ರೈತ ಸಂಪರ್ಕ ಕೇಂದ್ರ ಹಾಗೂ ಮನೆಗಳು ಜಲಾವೃತವಾಗಿವೆ. ಕೋಟೆಕೆರೆ ಗ್ರಾಮದ ಕೆರೆ ಕೋಡಿ ಬಿದ್ದು ಕಾಲುವೆಗಳ ಮೂಲಕ ಬೆಳಚಲವಾಡಿ ಮಾರ್ಗವಾಗಿ ಕಮರಹಳ್ಳಿ ಕೆರೆಗೆ ನೀರು ಸೇರುತ್ತಿತ್ತು. ಈ ನೀರು ಹರಿದು ಬರುತ್ತಿದ್ದ ಮಾರ್ಗದಲ್ಲಿ ತಗ್ಗು ಪ್ರದೇಶದಲ್ಲೇ ಗ್ರಾಮದ ಬಾಲಕಿಯರ ವಿದ್ಯಾರ್ಥಿನಿಲಯ, ರೈತ ಸಂಪರ್ಕ ಕೇಂದ್ರ ಕಟ್ಟಡವನ್ನು ನಿರ್ಮಾಣವಾಗಿದ್ದು, 15 ವರ್ಷಗಳ ನಂತರ ಕೋಡಿ ಬಿದ್ದ ಕೆರೆಯ ನೀರು ಹರಿದು ಬಂದ ಕಾರಣ ಜಲಾವೃತವಾಗಿವೆ. ಅಲ್ಲದೆ ಕಾಳಿಂಗಪ್ಪನವರ ಮನೆ ಹಾಗೂ ಹೊರೆಯಾಲ ಶಿವಬಸಪ್ಪನವರ ಜಮೀನು ನೀರಿನಲ್ಲಿ ಮುಳುಗಡೆಯಾಗಿ, ಅಪಾರ ನಷ್ಟ ಸಂಭವಿಸಿದೆ. ಮನೆಯಲ್ಲಿದ್ದ ದವಸ ಧಾನ್ಯ ನೀರಿನಲ್ಲಿ ಕೊಚ್ಚಿಹೋಗಿವೆ. ಅಲ್ಲದೆ ಬೇಗೂರು ಗ್ರಾಮದ ಹೊಸ ಬಡಾವಣೆಯ ಬಿ.ಸ್ವಾಮಿ ಅವರ ಮನೆಗೋಡೆ ಕುಸಿದೆ.

ಶಾಸಕ ಭೇಟಿ : ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಶಾಸಕ ಸಿ.ಎಸ್.ನಿರಂಜನ ಕುಮಾರ್ ಭೇಟಿ ನೀಡಿ ಪರಿಶೀಲಿಸಿ, ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಜಿಲ್ಲೆಯಲ್ಲಿ ತಗ್ಗಿದ ವರುಣನ ಆರ್ಭಟ



ಚಾಮರಾಜನಗರ, ಸೆ.6- ಜಿಲ್ಲೆಯಾದ್ಯಂತ ಮಂಗಳವಾರ ವರುಣನ ಆರ್ಭಟ ತಗ್ಗಿದ್ದು, ಕೊಂಚ ಬಿಡುವು ನೀಡಿತ್ತು. ಯಳಂದೂರು ಸೇರಿದಂತೆ ಕೆಲ ಗ್ರಾಮಗಳಲ್ಲಿ ಮಾತ್ರ ಮಳೆ ಸುರಿಯಿತು.

ಸೋಮವಾರ ಭಾರೀ ಮಳೆಯಿಂದ ಜಿಲ್ಲಾದ್ಯಂತ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ಇದರಿಂದ ಜನರು ತತ್ತರಿಸಿದ್ದರು. ಇಂದು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆ ಬೀಳದ ಕಾರಣ ನೆರೆ ಆತಂಕ ದೂರಾಯಿತು. ತಾಲೂಕಿನ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳಿಂದ ಸದ್ಯ ಒಟ್ಟು 5,200 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಈ ಎರಡೂ ಜಲಾಶಯಗಳ ಒಳಹರಿವು ಕಡಿಮೆ ಆದ ಕಾರಣ ಹೊರ ಬಿಡುತ್ತಿದ್ದ ನೀರಿನ ಪ್ರಮಾಣವನ್ನೂ ಕಡಿಮೆ ಮಾಡಲಾಯಿತು. ಹೀಗಾಗಿ ನದಿಪಾತ್ರದ ಜನರು ನಿಟ್ಟುಸಿರು ಬಿಡುವಂತಾಗಿದೆ.

ಯಳಂದೂರಲ್ಲಿ ಅವಾಂತರ: ಸೋಮವಾರ ಸುವರ್ಣಾವತಿ, ಚಿಕ್ಕಹೊಳೆ ಜಲಾಶಯಗಳಿಂದ 18 ಸಾವಿರ ಕ್ಯೂಸೆಕ್‌ನಷ್ಟು ನೀರು ಬಿಟ್ಟಿದ್ದರಿಂದ ನದಿ ಉಕ್ಕಿ ಹರಿಯಿತು. ಪರಿಣಾಮ ಪಟ್ಟಣದ ಹಲವು ಭಾಗ ಮಂಗಳವಾರ ಬೆಳಗ್ಗೆ ಜಲಾವೃತವಾದವು. ನಸುಕಿನಲ್ಲಿ ಮನೆಯಿಂದ ಹೊರ ಬಂದ ಜನರು ನೀರು ಹೆದ್ದಾರಿಯಲ್ಲಿ ತುಂಬಿ ಹರಿಯುತ್ತಿರುವುದನ್ನು ಕಂಡು ಅವಕ್ಕಾದರು. ರಾಜಕಾಲುವೆ, ಕಚೇರಿಗಳು, ಜಲಾವೃತ ವಾಗಿದ್ದು ಬಸ್‌ಗಳು, ವಾಹನಗಳು ತುಂಬಿ ಹರಿಯುತ್ತಿದ್ದ ನೀರಿನ ನಡುವೆ ಸಾಗುತ್ತಿದ್ದ ದೃಶ್ಯ ಕಂಡು ಬಂತು.

ಪಟ್ಟಣದ ಬಳೇಪೇಟೆಯ ಸಾವಿರಾರು ಮನೆಗಳು ಜಲಾವೃತವಾಗಿದ್ದವು. ಅಲ್ಲದೆ ಸುತ್ತಮುತ್ತಲ ನೂರಾರು ಎಕರೆ ಜಮೀನು ಜಲಾವೃತವಾಗಿದ್ದವು. ಸುವರ್ಣಾವತಿ ನದಿಯಲ್ಲಿ ಪ್ರವಾಹದಿಂದ ಅಗರ-ಮಾಂಬಳ್ಳಿ ಪೊಲೀಸ್ ಠಾಣೆ 2ನೇ ಬಾರಿಗೆ ಮುಳುಗಡೆಯಾಯಿತು.

ದೊಡ್ಡಅರಸಿನ ಕೊಳದಿಂದ ಭಾರೀ ಪ್ರಮಾಣದ ನೀರು ಸೋರಿಕೆ

ಚಾಮರಾಜನಗರ: ನಗರದ ಇತಿಹಾಸ ಪ್ರಸಿದ್ಧ ದೊಡ್ಡ ಅರಸಿನಕೊಳದಲ್ಲಿ ಭಾರೀ ಪ್ರಮಾಣದಲ್ಲಿ ನೀರು ಸೋರಿಕೆ ಆಗುತ್ತಿದ್ದು, ನಗರದ ಜನರು ಆತಂಕಗೊಂಡಿದ್ದಾರೆ.



ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ದೊಡ್ಡ ಅರಸಿನ ಕೊಳ ಇತ್ತೀಚೆಗೆ ಬಿದ್ದ ಮಳೆಯಿಂದ ಸಂಪೂರ್ಣ ಭರ್ತಿಯಾಗಿತ್ತು. ಕೊಳದಲ್ಲಿ ಇಷ್ಟು ಪ್ರಮಾಣದ ನೀರು ತುಂಬಿ 50 ವರ್ಷಗಳಾಗಿತ್ತು ಎಂದು ಹಿರಿಯರು ಹೇಳುತ್ತಿದ್ದರು. ಆದರೆ ಈ ಕೊಳದಿಂದ ಮಂಗಳವಾರ ಸಾಯಂಕಾಲ ಭಾರೀ ಪ್ರಮಾಣದ ನೀರು ಸೋರಿಕೆ ಆಗುತ್ತಿದೆ.

ಐತಿಹಾಸಿಕ ಕೊಳದಿಂದ ಖಾಸಗಿ ಬಸ್ ನಿಲ್ದಾಣ ಮೂಲಕ ನೀರು ಹೊರ ಬರುತ್ತಿದೆ. ಮೊದಲಿಗೆ ಸ್ವಲ್ಪ ಪ್ರಮಾಣದಲ್ಲಿ ಹೊರ ಬರುತ್ತಿದ್ದ ನೀರು ನಂತರ ಭಾರೀ ಪ್ರಮಾಣದಲ್ಲಿ ಹರಿಯಲಾರಂಭಿಸಿತು. ಈ ನೀರು ಸದ್ಯ ಚರಂಡಿ ಮೂಲಕ ದೊಡ್ಡರಾಯಪೇಟೆ ಕೆರೆ ತಲುಪುತ್ತಿದೆ. ಕೊಳದಿಂದ ಇದೇ ರೀತಿ ಸೋರಿಕೆ ಮುಂದುವರೆದರೆ ಒಂದೆರಡು ದಿನಗಳಲ್ಲಿ ನೀರು ಅರ್ಧ ಖಾಲಿಯಾಗಲಿದೆ. ಸೋರಿಕೆ ಮತ್ತಷ್ಟು ಹೆಚ್ಚಾಗಿ ಕೊಳದ ಏರಿ ಒಡೆದರೆ ತಗ್ಗು ಪ್ರದೇಶಗಳಿಗೆ ಭಾರೀ ಪ್ರಮಾಣದಲ್ಲಿ ನೀರು ನುಗ್ಗಿ ಅನಾಹುತ ಆಗುವುದು ನಿಶ್ಚಿತವಾಗಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.

ಕಾಯಕ ನಿಷ್ಠೆಯಲ್ಲಿ ನುಲಿಯ ಚಂದಯ್ಯ ಅಗ್ರಗಣ್ಯ

ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ



ಚಾಮರಾಜನಗರ, ಸೆ.6-ಹನ್ನೆರಡನೇ ಶತಮಾನದ ಶರಣರಲ್ಲಿ ಕಾಯಕ ನಿಷ್ಠೆ, ಶ್ರದ್ಧೆಯಲ್ಲಿ ನುಲಿಯ ಚಂದಯ್ಯ ಅಗ್ರಗಣ್ಯರಾಗಿದ್ದರು ಎಂದು ಮೈಸೂರು ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶ್ರೀ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹುಲ್ಲಿನಿಂದ ಹಗ್ಗ ಹೊಸೆಯುವ ಕಾಯಕ ನಿರ್ವಹಿಸುತ್ತಿದ್ದ ನುಲಿಯ ಚಂದಯ್ಯ ಅವರು ಬಸವಣ್ಣ ಅವರಿಗೆ ಪರಮಾಪ್ತರಾಗಿದ್ದರು. ಕಾಯಕ ನಿಷ್ಠೆ, ಸ್ವಾಭಿಮಾನಿಯಾಗಿದ್ದ ನುಲಿಯ ಚಂದಯ್ಯ ಅವರು ಕಾಯಕದಿಂದ ಬಂದಿದ್ದೇ ಲಿಂಗಾರ್ಪಿತ ಎನ್ನುವುದಕ್ಕೆ ಬದ್ಧರಾಗಿದ್ದರು. ನಡೆ ನುಡಿ ಒಂದಾಗಬೇಕು ಎಂಬ ಮಹತ್ವ ಸಾರಿದವರು ಎಂದು ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದರು.

ವಿಶೇಷ ಆಹ್ವಾನಿತ ನಿವೃತ್ತ ಜಿಲ್ಲಾಧಿಕಾರಿ ಎಸ್.ಟಿ. ಅಂಜನ್‌ಕುಮಾರ್ ಮಾತನಾಡಿದರು. ನಗರಸಭಾ ಅಧ್ಯಕ್ಷೆ ಆಶಾ ನಟರಾಜ್ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಮುಖ್ಯಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್.ಗುರುಲಿಂಗಯ್ಯ, ಜಿಲ್ಲಾಧಿಕಾರಿಗಳ ಕಚೇರಿ ಶಿರಸ್ತೇದಾರ್ ಅನೂಷ್, ಮುಖ್ಯ ಭಾಷಣಕಾರ ಅಖಿಲ ಕರ್ನಾಟಕ ಕುಳುವ ಮಹಾ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ, ಸಮಾಜದ ಮುಖಂಡರಾದ ಶಿವಾನಂದ ಎಂ.ಭಜಂತ್ರಿ, ಆದರ್ಶ ಯಲ್ಲಪ್ಪ, ಆನಂದ್‌ಕುಮಾರ್, ತಿರುಮಲಾಪುರ ಕೆ.ಗೋಪಾಲ್, ಮಾದೇಶ್, ಸಿದ್ದಪ್ಪಾಜಿ ಇತರರು ಕಾರ್ಯಕ್ರಮದಲ್ಲಿದ್ದರು.

ಕುಳುವ ನಿಗಮ ಮಂಡಳಿ ಸ್ಥಾಪನೆಗೆ ಆಗ್ರಹ

ಚಾಮರಾಜನಗರ: ಕುಳುವ ಸಮುದಾಯದ ಕಲ್ಯಾಣಕ್ಕಾಗಿ ಸರ್ಕಾರ ನಿಗಮ ಮಂಡಳಿ ಸ್ಥಾಪಿಸಬೇಕು ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಮಂಜುನಾಥ್ ಸರ್ಕಾರವನ್ನು ಆಗ್ರಹಿಸಿದರು.

ಜಿಲ್ಲಾಡಳಿತದಿಂದ ಶ್ರೀನುಲಿಯ ಚಂದಯ್ಯ ಜಯಂತಿ ಅಂಗವಾಗಿ ನಡೆದ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ತುಳಿತಕ್ಕೊಳಗಾದ ಕುಳುವ ಸಮುದಾಯ ಅಭಿವೃದ್ಧಿಗೆ ನಿಗಮ ಮಂಡಲಿ ಸ್ಥಾಪಿಸಬೇಕು. ಈ ಸಮಾಜದ ಪ್ರಗತಿಗೆ ಸರ್ಕಾರ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರಲ್ಲದೆ, ಮಳೆ, ನೆರೆಯಿಂದ ಜಿಲ್ಲೆಯಲ್ಲಿ ಬಹಳಷ್ಟು ನಷ್ಟ ಸಂಭವಿಸಿದ್ದು, ಸಂತ್ರಸ್ತರಿಗೆ ನೆರವು ಹಾಗೂ ಹಾನಿಗೀಡಾದ ಪ್ರದೇಶಗಳ ವೈಜ್ಞಾನಿಕ ಪರಿಶೀಲನೆಗೆ ಟಾಸ್ಕ್ ಫೋರ್ಸ್ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಸೈಯದ್ ಅಕ್ರಂ, ಎನ್.ಶಿವಮಲ್ಲು, ಡಿ.ಎನ್.ಉಪಾ ಇತರರಿದ್ದರು.

ಮಕ್ಕಳ ಋಣಾತ್ಮಕ ಮನೋಭಾವ ಶಿಕ್ಷಕರಿಂದ ದೂರ



ಚಾಮರಾಜನಗರ, ಸೆ.6- ವಿದ್ಯಾರ್ಥಿಗಳಲ್ಲಿರುವ ಋಣಾತ್ಮಕ ಮನೋಭಾವ ತೊಡೆದು ಹಾಕುವಲ್ಲಿ ಶಿಕ್ಷಕರ ಪಾತ್ರ ಮಹತ್ವವಾದದ್ದು ಎಂದು ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಬೋಧನಾ ಸಂಸ್ಥೆ ಡೀನ್ ಹಾಗೂ ನಿರ್ದೇಶಕ ಡಾ.ಪಿ.ಸಂಜೀವ್ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಬೋಧನಾ ಸಂಸ್ಥೆಯ ಸಭಾಂಗಣದಲ್ಲಿ ಸಂಸ್ಥೆಯಿಂದ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಶಿಕ್ಷಕರನ್ನು ನೋಡಿ ಅವರನ್ನೇ ಅನುಸರಿಸುತ್ತಾರೆ. ಶಿಸ್ತಿನ ಪರಿಪಾಲನೆಯಲ್ಲಿ ಶಿಕ್ಷಕರು ಯಾವಾಗಲೂ ಮುಂದಿರಬೇಕು. ವಿದ್ಯಾರ್ಥಿಗಳು ಬೆಳೆದಂತೆ ಆವರಿಸಿಕೊಳ್ಳುವ ಋಣಾತ್ಮಕ ಮನೋಭಾವನೆ ತೊಡೆದು ಹಾಕಿ ಸಮಾಜದಲ್ಲಿ ಉತ್ತಮ ಪ್ರಜೆಯನ್ನಾಗಿಸುವಲ್ಲಿ ಶಕ್ತಿ ಶಿಕ್ಷಕರಿಗಿದೆ ಎಂದರು. ಸಿಮ್ಸ್‌ನ ಪ್ರಾಂಶುಪಾಲ ಡಾ.ಗಿರೀಶ್ ವಿ.ಪಾಟೀಲ್, ಸಿಮ್ಸ್ ಟೀಚರ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ.ವಿ. ಮಾರುತಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಿಮ್ಸ್ ಟೀಚರ್ಸ್ ಅಸೋಸಿಯೇಷನ್‌ನ ಲೋಗೋವನ್ನು ಡಾ.ಸಂಜೀವ್ ಅನಾವರಣಗೊಳಿಸಿದರು.


ಇಂದು ಚಾ.ನಗರದಲ್ಲಿ ಶ್ರಮಿಕ್ ಸಂಜೀವಿನಿ ಸಂಚಾರಿ ಚಿಕಿತ್ಸಾ ಯೋಜನೆಗೆ ಚಾಲನೆ

ಚಾಮರಾಜನಗರ, ಸೆ6 – ಕಾರ್ಮಿಕ ಇಲಾಖೆ ಹಾಗೂ ಸ್ಕೊಡ್ ವೆಸ್ ಸಂಸ್ಥೆ ಸಹಯೋಗದಲ್ಲಿ ಕಟ್ಟಡ ಕಾರ್ಮಿಕ ಫಲಾನುಭವಿಗಳ ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಸಲು 'ಶ್ರಮಿಕ್ ಸಂಜೀವಿನಿ ಸಂಚಾರಿ ಚಿಕಿತ್ಸಾ ಘಟಕ-ಶ್ರಮಿಕರ ಮನೆ ಬಾಗಿಲಿಗೆ ಆರೋಗ್ಯ ಸೇವೆ' ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಸೆ.7ರಂದು ಬೆಳಗ್ಗೆ 9.30ಕ್ಕೆ ನಗರದ ಸಂತೇಮರಹಳ್ಳಿ ಸರ್ಕಲ್ ಹತ್ತಿರದ ಉಪ್ಪಾರ ಸಮುದಾಯ ಭವನದಲ್ಲಿ ಯೋಜನೆ ಚಾಲನೆಗೊಳ್ಳಲಿದೆ.

ಇ-ಕೆವೈಸಿಗೆ ಅವಧಿ ವಿಸ್ತರಣೆ

ಚಾಮರಾಜನಗರ, ಸೆ.6 – ಕೃಷಿ ಇಲಾಖೆಯಿಂದ ಪ್ರಧಾನಮಂತ್ರಿ ಕಿಸಾನ್ ಯೋಜನೆಯಡಿ ಜಿಲ್ಲೆಯ ರೈತ ಫಲಾನುಭವಿಗಳು ಇ-ಕೆವೈಸಿ ಮಾಡಿಸಿಕೊಳ್ಳಲು ಸೆ.7ರವರೆಗೆ ಅವಧಿ ವಿಸ್ತರಿಸಲಾಗಿದೆ. ಪಿ.ಎಂ ಕಿಸಾನ್ ಯೋಜನೆಯಡಿ ಅರ್ಹ ರೈತ ಫಲಾನುಭವಿಗಳು ಇ-ಕೆವೈಸಿಯನ್ನು ತಮ್ಮ ತಾಲೂಕಿನ ಹತ್ತಿರದ ನಾಗರೀಕ ಸೇವಾ ಕೇಂದ್ರ, ಅಂಚೆ ಕಚೇರಿ, ಗ್ರಾಮ ಒನ್ ಸೇವಾ ಕೇಂದ್ರಗಳಲ್ಲೂ ಬಯೋಮೆಟ್ರಿಕ್ ಆಧಾರಿತ ಇ-ಕೆವೈಸಿ ಹಾಗೂ http://pmkisan.gov.in ಪೋರ್ಟಲ್‌ನಲ್ಲಿ ಓಟಿಪಿ ಆಧಾರಿತ ಇ-ಕೆವೈಸಿ ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಓಟಿಪಿ ಆಧಾರಿತ ಇ-ಕೆವೈಸಿಯನ್ನು ಮಾಡಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಮಹಾದೇವಮ್ಮ ನಿಧನ



ಚಾಮರಾಜನಗರ,ಸೆ.6- ತಾಲೂಕಿನ ಹರವೆ ಗ್ರಾಮದ ನಿವಾಸಿ ಮಹಾದೇವಮ್ಮ(80) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ರಕರ್ತ ಹರವೆ ಮಹೇಶ ಸೇರಿ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಿತು.

ಎಂ.ಬಿ.ಪುಟ್ಟಸುಬ್ಬಪ್ಪ



ಚಾಮರಾಜನಗರ ತಾಲೂಕಿನ ಮೂಡ್ನಾಕೂಡು ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಸದಸ್ಯ ಎಂ.ಬಿ.ಪುಟ್ಟಸುಬ್ಬಪ್ಪ(76) ಮಂಗಳವಾರ ನಿಧನರಾದರು. ಮೃತರು ಪತ್ನಿ ಶಾಂತಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿ ಅಪಾರ ಬಂಧು-ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಸ್ವಗ್ರಾಮ ಮೂಡ್ನಾಕೂಡಿನ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲ್ಲೇದೇವರು



ಚಾಮರಾಜನಗರ ತಾಲೂಕಿನ ಕಲ್ಪುರ ಗ್ರಾಮದ ಮಲ್ಲೇದೇವರು (74) ಮಂಗಳವಾರ ನಿಧನರಾದರು.

ಮೃತರು ಪತ್ನಿ ಮಹದೇವಮ್ಮ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಸ್ವಗ್ರಾಮ ಕಲ್ಪುರದ ಅವರ ತೋಟದಲ್ಲಿ ನಡೆಯಲಿದೆ.

ಪ್ರವಾಹ ಪೀಡಿತ ಪ್ರದೇಶ-ಕಾಳಜಿ ಕೇಂದ್ರಗಳಲ್ಲಿ ಡಿಸಿ, ಸಿಇಒ ಪರಿಶೀಲನೆ



ಚಾಮರಾಜನಗರ, ಸೆ.6-ಪ್ರವಾಹ ಪೀಡಿತ ವಿವಿಧ ಗ್ರಾಮಗಳು ಹಾಗೂ ಸಂತ್ರಸ್ತರಿಗೆ ತೆರೆದಿರುವ ಕಾಳಜಿ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಅವರಿಂದು ಜಂಟಿಯಾಗಿ ಭೇಟಿ ನೀಡಿ, ಪರಿಶೀಲಿಸಿದರು.

ಮಳೆ ಹಾಗೂ ಪ್ರವಾಹದಿಂದ ಸಂಕಷ್ಟಕ್ಕೀಡಾಗಿರುವ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಪರಿಶೀಲನೆ ಮುಂದುವರೆಸಿದ ಜಿಲ್ಲಾಧಿಕಾರಿ, ಸಿಇಒ ಸ್ಥಳೀಯರ ಅಹವಾಲು ಆಲಿಸಿದರು.

ಚಾಮರಾಜನಗರ ತಾಲೂಕಿನ ಕಣ್ಣೇಗಾಲ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿ ಪರಾಮರ್ಶಿಸಿದ ಅಧಿಕಾರಿಗಳು, ಗ್ರಾಮಸ್ಥರೊಂದಿಗೆ ಮಾತನಾಡಿ, ಪ್ರವಾಹದ ಮುನ್ಸೂಚನೆ ಸಿಗುತ್ತಿದ್ದಂತೆಯೇ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಸ್ಥಳೀಯ ಅಧಿಕಾರಿಗಳು ನೀಡುವ ಮಾರ್ಗದರ್ಶನ, ಸಲಹೆ ಪಡೆದು ಸಹಕರಿಸಬೇಕು ಎಂದು ಮನವಿ ಮಾಡಿದರು.

ಯಳಂದೂರು ತಾಲೂಕಿನ ಗುಂಬಳ್ಳಿಗೆ ಭೇಟಿ ನೀಡಿದ ಅಧಿಕಾರಿಗಳು, ಅಲ್ಲಿನ ಕೆರೆಯನ್ನು ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು. ಯರಿಯೂರು ಗ್ರಾಮದಲ್ಲಿ ನೆರೆ ನೀರು ನುಗ್ಗಿ ಉಂಟಾಗಿರುವ ಅವಾಂತರ ವೀಕ್ಷಿಸಿದರು. ಮದ್ದೂರು, ಮಾಂಬಳ್ಳಿಗೂ ಭೇಟಿ ನೀಡಿ, ಜಲಾವೃತ ಪ್ರದೇಶಗಳಲ್ಲಿನ ಪರಿಸ್ಥಿತಿ ಅವಲೋಕಿಸಿದರು.

ಅಲ್ಲದೆ ಕೃಷ್ಣಾಪುರದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಹಾಗೂ ಸಿಇಒ, ಅಲ್ಲಿನ ಸೌಕರ್ಯದ ಕುರಿತು ಮಾಹಿತಿ ಪಡೆದರಲ್ಲದೆ, ಕಾಳಜಿ ಕೇಂದ್ರದಲ್ಲಿ ಸಂತ್ರಸ್ತರೊಂದಿಗೆ ಊಟ ಸೇವಿಸಿ ಗುಣಮಟ್ಟ ಪರಿಶೀಲಿಸಿದರು. ಅಗರ ಗ್ರಾಮದ ವಾಲ್ಮೀಕಿ ಸಮುದಾಯ ಭವನದ ಕಾಳಜಿ ಕೇಂದ್ರಕ್ಕೂ ಭೇಟಿ ನೀಡಿ ಸಂತ್ರಸ್ತರೊಂದಿಗೆ ಸಮಾಲೋಚಿಸಿದರು.

ಬಳಿಕ ಕೊಳ್ಳೇಗಾಲ ಬಳಿಯ ಮುಡಿಗುಂಡ ಸೇತುವೆ, ಬೆಂಡರಹಳ್ಳಿ ಸಂಪರ್ಕ ರಸ್ತೆಗಳನ್ನು ಪರಿಶೀಲಿಸುವ ಜೊತೆಗೆ ನಗರದ ಸರ್.ಕಾಟನ್ ಕಾಲುವೆ ತ್ಯಾಜ್ಯ ತೆರವು ಕಾರ್ಯ ವೀಕ್ಷಿಸಿದರು. ಅಲ್ಲದೆ ಅಲ್ಲಿನ ಕಾಳಜಿ ಕೇಂದ್ರಕ್ಕೂ ಭೇಟಿ ನೀಡಿ ಸಂತ್ರಸ್ತರಿಗೆ ಒದಗಿಸಿರುವ ಸೌಲಭ್ಯದ ಮಾಹಿತಿ ಪಡೆದು, ಪ್ರವಾಹ ಪರಿಸ್ಥಿತಿ ತಗ್ಗುವವರೆಗೂ ಕಾಳಜಿ ಕೇಂದ್ರದಲ್ಲಿಯೇ ಇರುವಂತೆ ಸಂತ್ರಸ್ತರಿಗೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ಜಲಾವೃತವಾಗಿರುವ ಮಧುವಿನಹಳ್ಳಿ, ಜಿ.ವಿ.ಗೌಡ ನಗರ ಬಡಾವಣೆ ಪರಿವೀಕ್ಷಿಸಿ ನಂತರ ಹಾನಿಗೀಡಾದ ತಿಮ್ಮರಾಜಿಪುರ ಗ್ರಾಪಂ ವ್ಯಾಪ್ತಿಯ ಅರೆಪಾಳ್ಯದಲ್ಲಿ ಸಂಪರ್ಕ ಸೇತುವೆ, ಹಿತ್ತಲದೊಡ್ಡಿ ಗ್ರಾಮದಲ್ಲಿ ನೂತನ ಸೇತುವೆ ನಿರ್ಮಾಣಕ್ಕೆ ಗುರುತಿಸಿರುವ ಸ್ಥಳ ಪರಿಶೀಲಿದರು.

ಇದೇ ವೇಳೆ ಮಾತನಾಡಿರುವ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಮಳೆ, ಪ್ರವಾಹದ ಮುನ್ಸೂಚನೆ ಬರುತ್ತಿದ್ದಂತೆಯೇ ತಗ್ಗು ಪ್ರದೇಶಗಳ ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಬೇಕು. ಪರಿಹಾರ ಕಾರ್ಯ ತ್ವರಿತಗೊಳಿಸಿ ಜನರ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಚಾಮರಾಜನಗರ ತಹಸೀಲ್ದಾರ್ ಬಸವರಾಜು, ಯಳಂದೂರು ತಹಸೀಲ್ದಾರ್ ಆನಂದಪ್ಪ ನಾಯಕ, ತಾಪಂ ಇಓ ಉಮೇಶ್, ಕೊಳ್ಳೇಗಾಲ ತಾಲೂಕು ತಹಸೀಲ್ದಾರ್ ಮಂಜುಳಾ, ತಾಪಂ ಇಓ ಮಹೇಶ್, ಸೇರಿದಂತೆ ಇನ್ನಿತರ ಅಧಿಕಾರಿಗಳಿದ್ದರು.



ಕೆರೆಗಳ ಸಮರ್ಪಕ ನಿರ್ವಹಣೆಗೆ ಡಿಸಿ ಸೂಚನೆ

ಚಾಮರಾಜನಗರ: ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಕೆರೆ-ಕಟ್ಟೆಗಳಿಂದ ಗ್ರಾಮಗಳು ಹಾಗೂ ಜಮೀನುಗಳಿಗೆ ನೀರು ನುಗ್ಗುವುದನ್ನು ತಡೆಯಲು ನೀರಾವರಿ ಇಲಾಖೆ ಅಧಿಕಾರಿಗಳು ಅಗತ್ಯ ಕಾಮಗಾರಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ನಗರದ ತಮ್ಮ ಕಚೇರಿ ಸಭಾಂಗಣದಲ್ಲಿಂದು ಮಳೆ ಹಾನಿ, ಪ್ರವಾಹ ಸಂಬಂಧ ನೀರಾವರಿ, ಕಂದಾಯ, ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಇತ್ತೀಚಿನ ಮಳೆ, ಪ್ರವಾಹ, ಜಲಾಶಯದ ನೀರಿನ ಹರಿವು ಹೆಚ್ಚಳದಿಂದ ಹಾನಿಯಾಗಿರುವ, ಒಡೆದು ಹೋಗಿರುವ ಕೆರೆಗಳಲ್ಲಿ ಮರಳು ಮೂಟೆ ಇನ್ನಿತರ ವೈಜ್ಞಾನಿಕ ವಿಧಾನ ಅನುಸರಿಸಿ, ಜನವಸತಿ ಪ್ರದೇಶಗಳು, ಜಮೀನುಗಳಿಗೆ ನೀರು ನುಗ್ಗುವುದನ್ನು ತಪ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ಕೆರೆಗಳನ್ನು ಬಲಪಡಿಸುವ ಜೊತೆಗೆ ಕಾಲುವೆ, ನಾಲೆಗಳಲ್ಲಿ ಹೂಳು ಗಿಡಗಂಟಿ ತೆರವುಗೊಳಿಸಬೇಕು. ನೀರು ತುಂಬಿ ಹರಿಯಬಹುದಾದ ಕೆರೆಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳು, ಜಲಾಶಯ, ಕಟ್ಟೆಗಳು, ನಾಲೆಗಳ ಸಮಗ್ರ ವಿವರ ಹಾಗೂ ಒಂದಕ್ಕೊಂದು ಹೊಂದಿರುವ ಸಂಪರ್ಕ ಇರುವ ಬಗ್ಗೆ ನಕಾಶೆ ತಯಾರಿಸಬೇಕು. ತೊಂದರೆಯಾಗಬಹುದಾದ ಪ್ರದೇಶಗಳ ಬಗ್ಗೆ ಮಾಹಿತಿ ಸಿದ್ಧಪಡಿಸಬೇಕು ಎಂದು ತಾಕೀತು ಮಾಡಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಕಾವೇರಿ ನೀರಾವರಿ ನಿಗಮದ ಇಇ ಎಂ.ಬಿ.ಪಾಟೀಲ್, ಎಇಇಗಳಾದ ಮಂಜುನಾಥ್, ಮಂಜುನಾಥಸ್ವಾಮಿ, ಬೃಹತ್ ನೀರಾವರಿ ಇಲಾಖೆ ಇಇಗಳಾದ ವೆಂಕಟೇಶ್ ಪ್ರಭು, ಸಣ್ಣ ನೀರಾವರಿ ಇಲಾಖೆ ಎಇಇ ಈಶ್ವರ್, ಪಂಚಾಯತ್ ರಾಜ್ ವಿಭಾಗದ ಇಇ ಇಬ್ರಾಹಿಂ ಹಾಗೂ ತಾಲೂಕುಗಳ ತಹಸೀಲ್ದಾರರಿದ್ದರು.

ಒಂದನೇ ಪುಟದಿಂದ

ನೂತನ ಮೇಯರ್ ಶಿವಕುಮಾರ್

ಉಪ ಮೇಯರ್ ಸ್ಥಾನಗಳಿಗೆ ತಮ್ಮ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಅದರಂತೆ ಕಾಂಗ್ರೆಸ್ಸಿನ ಜೆ.ಗೋಪಿ. ಸೈಯದ್ ಹಸ್ರತ್ ಉಲ್ಲಾ, ಬಿಜೆಪಿಯ ಶಿವಕುಮಾರ್, ಜೆಡಿಎಸ್‌ನ ಕೆವಿ.ಶ್ರೀಧರ್ ಹಾಗೂ ಜೆಡಿಎಸ್‌ನ ಬಂಡಾಯ ಅಭ್ಯರ್ಥಿಯಾಗಿ ಕೆ. ನಿರ್ಮಲ ಮೇಯರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ ದ್ದರು. ಉಪಮೇಯರ್ ಸ್ಥಾನಕ್ಕಾಗಿ ಕಾಂಗ್ರೆಸ್‌ನಿಂದ ಶೋಭಾ, ಬಿಜೆಪಿಯಿಂದ ಡಾ.ಜಿ.ರೂಪಾ ಹಾಗೂ ಜೆಡಿಎಸ್ ನಿಂದ ರೇಷ್ಮಾಬಾನು ಉಮೇದುವಾರಿಕೆ ಸಲ್ಲಿಸಿದ್ದರು. ಬೆಳಗ್ಗೆ 8ರಿಂದ 10 ಗಂಟೆ ಯವರೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆದಿತ್ತು. ಮಧ್ಯಾಹ್ನ 12 ಗಂಟೆಗೆ ಚುನಾ ವಣಾ ಪ್ರಕ್ರಿಯೆ ಆರಂಭಿಸಿದ ಚುನಾ ವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಜಿ.ಸಿ. ಪ್ರಕಾಶ್, ಮೊದಲು ಮೇಯರ್ ಆಯ್ಕೆ ಪ್ರಕ್ರಿಯೆಗೆ ಚಾಲನೆ ನಿಡಿದರು. ಮೇಯರ್ ಸ್ಥಾನಕ್ಕೆ ಸಲ್ಲಿಸಿದ್ದ ಎಲ್ಲಾ ನಾಮಪತ್ರಗಳೂ ಊರ್ಜಿತವಾಗಿವೆ ಎಂದು ಘೋಷಿಸುತ್ತಿದ್ದಂತೆಯೇ, ಕಾಂಗ್ರೆಸ್ ತಂತ್ರಗಾರಿಕೆಯಿಂದ ಎಚ್ಚೆತ್ತ ಬಿಜೆಪಿ, ಜೆಡಿಎಸ್ ಮೈತ್ರಿ ನಿರ್ಧಾರಕ್ಕೆ ಬಂದವು. ಹಾಗಾಗಿ ಜೆಡಿಎಸ್‌ನ ಕೆ.ವಿ. ಶ್ರೀಧರ್ ತಮ್ಮ ನಾಮಪತ್ರ ವಾಪಸ್ ಪಡೆದರೆ, ಕಾಂಗ್ರೆಸ್‌ನ ಗೋಪಿ ಸಹ ಉಮೇದುವಾರಿಕೆ ಹಿಂಪಡೆದರು. ಅಂತಿಮವಾಗಿ ಕಾಂಗ್ರೆಸ್ಸಿನ ಸೈಯದ್ ಹಸ್ರತ್ ಉಲ್ಲಾ ಮತ್ತು ಬಿಜೆಪಿಯ ಶಿವಕುಮಾರ್ ಕಣದಲ್ಲಿ ಉಳಿದಿದ್ದರು. ಮತದಾನ ನಡೆದಾಗ ಸಂಸದ, ಶಾಸಕರು, ವಿಧಾನ ಪರಿಷತ್ ಸದಸ್ಯರೂ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್‌ನ ಒಟ್ಟು 47 ಮಂದಿ ಶಿವಕುಮಾರ್ ಪರ ಕೈ ಎತ್ತುವ ಮೂಲಕ ಮತ ಚಲಾಯಿಸಿದರು. ಹಾಗಾಗಿ ಪ್ರಸಕ್ತ ಅವಧಿಯ 4ನೇ ಮೇಯರ್ ಆಗಿ ಶಿವಕುಮಾರ್ ಆಯ್ಕೆಯಾದರು.

ಜೆಡಿಎಸ್‌ನ ನಿರ್ಮಲ ಅಡ್ಡ ಮತದಾನವೂ ಸೇರಿ ಕಾಂಗ್ರೆಸ್‌ನ ಸೈಯದ್ ಹಸ್ರತ್ ಉಲ್ಲಾ ಅವರಿಗೆ ಕೇವಲ 28 ಮತಗಳು ಲಭಿಸಿ, ಪರಾಭವಗೊಂಡರು.

ಅದೇ ರೀತಿ ಉಪಮೇಯರ್ ಸ್ಥಾನಕ್ಕೆ ಕಾಂಗ್ರೆಸ್‌ನ ಶೋಭಾ, ಬಿಜೆಪಿಯ ಡಾ. ರೂಪಾ, ಜೆಡಿಎಸ್‌ನ ರೇಷ್ಮಬಾನು ಹಾಗೂ ಸ್ವತಂತ್ರವಾಗಿ ನಿರ್ಮಲಾ ಸ್ಪರ್ಧಿಸಿದ್ದರು. ಪರಿಶೀಲನೆ ವೇಳೆ ಬಿಸಿಎ ಪ್ರಮಾಣ ಪತ್ರ ಸಲ್ಲಿಸದ ಕಾರಣ ಜೆಡಿಎಸ್ ಅಭ್ಯರ್ಥಿ ರೇಷ್ಮಬಾನು ಅವರ ನಾಮಪತ್ರ ತಿರಸ್ಕೃತಗೊಂಡಿತು. ಇದರಿಂದಾಗಿ 45 ಮತಗಳನ್ನು ಪಡೆದು ಡಾ. ಜಿ. ರೂಪಾ ಉಪಮೇಯರ್ ಆಗಿ ಆಯ್ಕೆಯಾದರು.

ಇಂದು ನಡೆದ ಮೇಯರ್, ಉಪ ಮೇಯರ್ ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ 65 ಮಂದಿ ಪಾಲಿಕೆ ಸದಸ್ಯರ ಜೊತೆಗೆ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಕಾಂಗ್ರೆಸ್‌ನಿಂದ ಶಾಸಕ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ದಿನೇಶ್ ಗೂಳಿಗೌಡ, ಜಿ. ಮಧುಮಾದೇಗೌಡ, ಬಿಜೆಪಿಯ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಅವರು ಪಾಲ್ಗೊಂಡು ತಮ್ಮ ಪಕ್ಷಗಳ ಅಭ್ಯರ್ಥಿಗಳ ಪರ ಕೈ ಎತ್ತುವ ಮೂಲಕ ಬೆಂಬಲ ಸೂಚಿಸಿದರು.

ಆಂಬುಲೆನ್ಸ್‌ನಲ್ಲಿ ಬಂದ ಅಶ್ವಿನಿ: ಅನಾರೋಗ್ಯದಿಂದ ಬಳಲುತ್ತಿರುವ 28ನೇ ವಾರ್ಡ್‌ನ ಪಾಲಿಕೆ ಸದಸ್ಯೆ ಡಾ. ಅಶ್ವಿನಿ ಶರತ್ ಅವರು ಆಂಬುಲೆನ್ಸ್‌ನಲ್ಲಿ ಪಾಲಿಕೆ ಕಚೇರಿಗೆ ಬಂದು ಬಿಜೆಪಿ ಅಭ್ಯರ್ಥಿ ಶಿವಕುಮಾರ್ ಪರ ಮತ ಚಲಾಯಿಸಿ ಹಿಂದಿರುಗಿದ್ದು ವಿಶೇಷವಾಗಿತ್ತು. ಶಾಸಕ ಎಸ್.ಎ. ರಾಮದಾಸ್ ಅವರೇ ಡಾ. ಅಶ್ವಿನಿ ಶರತ್ ಅವರನ್ನು ಕರೆಸಿಕೊಂಡು, ಸುರಕ್ಷಿತವಾಗಿ ಆಸ್ಪತ್ರೆಗೆ ಕಳುಹಿಸುವ ಮುತುವರ್ಜಿ ವಹಿಸಿದ್ದರು.

ಆಯ್ಕೆಯಾದವರಿಗೆ ಅರಿವಿಲ್ಲ: ಅಂತಿಮ ಕ್ಷಣದಲ್ಲಿ ಮೈತ್ರಿಗೆ ಮುಂದಾದರೂ, ತಾಂತ್ರಿಕ ಕಾರಣದಿಂದ ರೇಷ್ಮಾಬಾನು ಅವರ ಉಮೇದುವಾರಿಕೆ ತಿರಸ್ಕೃತಗೊಂಡು ಉಪಮೇಯರ್ ಸ್ಥಾನ ಕೈತಪ್ಪಿದ್ದರಿಂದ ನಿರಾಸೆಗೊಂಡ ಜೆಡಿಎಸ್ ಪಾಲಿಕೆ ಸದಸ್ಯರು, ಶಾಸಕ ಹಾಗೂ ವಿಧಾನ ಪರಿಷತ್ ಸದಸ್ಯರು, ನಾಮಪತ್ರ ಸಲ್ಲಿಸಿದಾಗಲೇ ಬಿಸಿಎ ಸರ್ಟಿಫಿಕೇಟ್ ಕೇಳಿ ಪಡೆಯಬಹುದಿತ್ತು. ಈಗಲೂ ಸಲ್ಲಿಕೆಗೆ ಅವಕಾಶ ಕೊಡಿ ಎಂದು ಮನವಿ ಮಾಡಿದರಾದರೂ, ಸಭೆಯಲ್ಲೇ ನಾಮಪತ್ರಗಳ ಪರಿಶೀಲನೆ ನಡೆಸಿದ್ದೇವೆ. ಪಾಲಿಕೆ ಚುನಾವಣೆಯಲ್ಲಿ ಸಾಮಾನ್ಯ ವರ್ಗದಿಂದ ಸ್ಪರ್ಧಿಸಿ ಆಯ್ಕೆಯಾಗಿರುವ ರೇಷ್ಮಬಾನು ಅವರು, ಬಿಸಿಎ ವರ್ಗಕ್ಕೆ ಮೀಸಲಾಗಿರುವ ಉಪಮೇಯರ್ ಚುನಾವಣೆಗೆ ಸ್ಪರ್ಧಿಸುವಾಗ ಮೀಸಲಾತಿ ಪ್ರಮಾಣ ಪತ್ರ ಸಲ್ಲಿಸುವುದು ಅವರ ಜವಾಬ್ದಾರಿಯಾಗಿರುವುದರಿಂದ ಈ ಹಂತದಲ್ಲಿ ಸರ್ಟಿಫಿಕೇಟ್ ಪಡೆಯಲು ಸಾಧ್ಯವಿಲ್ಲ ಎಂದು ಚುನಾವಣಾಧಿಕಾರಿ ಜಿ.ಸಿ. ಪ್ರಕಾಶ್ ಸ್ಪಷ್ಟಪಡಿಸಿದರು.

ಕಮಲದಲ್ಲಿ ಕಲರವ: ಕಳೆದ ಭಾರಿ ಪ್ರಥಮ ಬಾರಿ ಮೇಯರ್ ಗದ್ದುಗೆ ಗಿಟ್ಟಿಸಿಕೊಂಡಿದ್ದ ಬಿಜೆಪಿಯು, ಮತ್ತೊಮ್ಮೆ ಮೇಯರ್ ಸ್ಥಾನ ಪಡೆದಿರುವುದಲ್ಲದೇ, ಜೆಡಿಎಸ್ ಪಾಲಿನ ಉಪಮೇಯರ್ ಸ್ಥಾನವನ್ನೂ ತನ್ನದಾಗಿಸಿಕೊಂಡಿರುವುದರಿಂದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರು, ವಿಧಾನ ಪರಿಷತ್ ಸದಸ್ಯರು, ಬಿಜೆಪಿ ಪಾಲಿಕೆ ಸದಸ್ಯರು, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಲ್ಲಿ ಸಂತಸ ಮನೆ ಮಾಡಿದ್ದು, ಹರ್ಷೋದ್ಗಾರ ಮೊಳಗಿತು. ನಾಮಪತ್ರ ಸಲ್ಲಿಸುವಾಗ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ, ಮೈತ್ರಿ ಬೆಳೆಸಿದರೂ ಉಪಮೇಯರ್ ಸ್ಥಾನ ತಾನಾಗಿಯೇ ಕಳೆದುಕೊಂಡ ಜೆಡಿಎಸ್ ಮುಖಂಡರು ಹಾಗೂ ಪಾಲಿಕೆ ಸದಸ್ಯರು ನಿರಾಸೆಯಿಂದ ಹಿಂದಿರುಗಿದರು. ಕೆ.ಆರ್. ಉಪ ವಿಭಾಗದ ಎಸಿಪಿ ಎಸ್.ಇ. ಗಂಗಾಧರಸ್ವಾಮಿ ನೇತೃತ್ವದಲ್ಲಿ ಇಂದು ಮೇಯರ್, ಉಪಮೇಯರ್ ಚುನಾವಣೆಗೆ ಪಾಲಿಕೆ ಕಚೇರಿಯಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ವ್ಯಾಪಕ ಬಂದೋಬಸ್ತ್ ಮಾಡಲಾಗಿತ್ತು. ಗುರುತಿನ ಚೀಟಿ ಹೊಂದಿದ್ದ ಮತದಾರರು ಅಧಿಕಾರಿಗಳು, ಸಿಬ್ಬಂದಿ, ಪೊಲೀಸರು ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಹೊರತುಪಡಿಸಿ, ಬೇರೆಯವರು ಕಚೇರಿ ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ದಡ ಸೇರಿದ ಮೇಲೆ ಅಂಬಿಗನ ಹಂಗೇಕೆ...?

ನಾವು ಯಾವುದೇ ಪಕ್ಷದ ಜೊತೆಗೆ ಮೈತ್ರಿಯಾಗಲೀ, ಹೊಂದಾಣಿಕೆಯಾಗಲೀ ಮಾಡಿಕೊಂಡಿಲ್ಲ. ಅವರು (ಜೆಡಿಎಸ್) ಓಟು ಕೊಟ್ಟರೆ ಬೇಡ ಎನ್ನಲಾಗುತ್ತದೆಯೇ ಎಂದು ಸ್ಪಷ್ಟಪಡಿಸಿರುವುದನ್ನು ನೋಡಿದರೆ, ದಡ ಸೇರಿದ ಮೇಲೆ ಅಂಬಿಗನ ಹಂಗೇಕೆ...?" ಎಂಬುದು ಬಿಜೆಪಿ ಪಾಲಿಸಿ ಎಂಬುದು ಸಾಬೀತಾಗುತ್ತದೆ ಎಂಬುದು ಕೆಲ ಜೆಡಿಎಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೈತ್ರಿ ಮೈತ್ರಿ ಎನ್ನುತ್ತಿದ್ದ ಬಿಜೆಪಿಯವರು ಈಗ ತಮ್ಮ ಕಾರ್ಯಸಾಧನೆ ಆದ ಮೇಲೆ ಯಾವ ಮೈತ್ರಿಯೂ ಇಲ್ಲ ಎಂದು ಹೇಳಿರುವುದು ಅಧಿಕಾರ ಹಿಡಿಯುವುದೇ ಬಿಜೆಪಿಯ ಒನ್ ಪಾಯಿಂಟ್ ಅಜೆಂಡಾ. ಅದಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ನಂತರ ಕಾಲೆಳೆಯುತ್ತಾರೆ. ನಮ್ಮ ಪಕ್ಷದ ನಾಯಕರು ಸರಿಯಾಗಿದ್ದರೆ ನಮಗೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಜೆಡಿಎಸ್ ಕಾರ್ಪೊರೇಟರ್ ಒಬ್ಬರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಡಾ.ಜಿ.ರೂಪಾ ಮೈಸೂರು ಉಪ ಮೇಯರ್

ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಅವರ ಪತಿ ಯೋಗೇಶ್ ಬಿಜೆಪಿ ಮುಖಂಡ. ಹಿಂದುಳಿದ ವರ್ಗದ ಮಹಿಳೆಯಾದ ನನಗೆ ಪಕ್ಷವು ಉಪಮೇಯರ್ ಸ್ಥಾನ ನೀಡಿದ್ದು ತುಂಬಾ ಸಂತಸ ನೀಡಿದೆ ಪತಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ. ಶಾಸಕ ಎಸ್.ಎ. ರಾಮದಾಸ್ ಮಾರ್ಗದರ್ಶನದಲ್ಲಿ ನಗರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಪ್ರತಿಕ್ರಿಯಿಸಿದರು.

ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ಅವರೇ ನಮ್ಮ ಮಾಲೀಕರು, ಅವರು ಕಚೇರಿಗೆ ಬಂದಾಗ ಅಲೆಸುವ ಕೆಲಸ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಸರ್ಕಾರಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಮಾಡಿದ್ದೇವೆ. ವೇತನ ಪರಿಷ್ಕರಣೆಯೂ ಸದ್ಯದಲ್ಲೇ ಆಗಲಿದೆ. ಸರ್ಕಾರ ಪುಣ್ಯಕೋಟಿ ಯೋಜನೆಯಡಿ 50 ಕೋಟಿ ರೂ. ವೆಚ್ಚದಲ್ಲಿ ಹೊಸ ಗೋ ಶಾಲೆಗಳನ್ನು ಮಾಡುತ್ತಿದ್ದೇವೆ. ನೌಕರರು, ವಿಶೇಷವಾಗಿ ಪತ್ರಾಂಕಿತ ಎ ಮತ್ತು ಬಿ ಗುಂಪಿನ ನೌಕರರು, ಪುಣ್ಯಕೋಟಿ ಯೋಜನೆಯಡಿ 11,000 ರೂಪಾಯಿ ನೀಡಿ, ಗೋವುಗಳನ್ನು ದತ್ತು ಪಡೆದು, ಗೋ ಸಂರಕ್ಷಣೆ ಮಾಡುವಂತೆ ಮನವಿ ಮಾಡಿದರು. ಸರ್ಕಾರದ ಪ್ರಮುಖವಾದ ಒಂದು ಭಾಗ ಮತ್ತು ಅಂಗ. ಬೆಳಗ್ಗೆಯಿಂದ ಸಂಜೆಯವರೆಗೆ ಮಾಡುವ ಕೆಲಸ ಕರ್ತವ್ಯ ಎನಿಸುತ್ತದೆ. ಬದುಕಿನಲ್ಲಿ ಸೇವೆ ಮಾಡಿ ಸಂತೃಪ್ತಿ ಪಡೆಯುವುದು ಕಾಯಕ. ಸರ್ಕಾರಕ್ಕೆ ತೆರಿಗೆ ಪಾವತಿಸುವ ಪ್ರಜೆಗಳೇ ನಮ್ಮ ಮಾಲೀಕರು. ಆದ ಕಾರಣ, ಕಾಲಕ್ಕೆ ತಕ್ಕಂತೆ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪ್ರಜೆಗಳ ನೋವು ನಲಿವುಗಳಿಗೆ ಸ್ಪಂದಿಸಿ ಎಂದರು.

ಸಿಡಿಲಿಗೆ ಇಬ್ಬರು ಬಲಿ

ರೋಧನೆ ಮುಗಿಲು ಮುಟ್ಟಿದ್ದು, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಲೊಕ್ಕನಹಳ್ಳಿ ಹೋಬಳಿಯ ರಾಜಸ್ವ ನಿರೀಕ್ಷಕ ಮಾದೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಭಾನುವಾರ ರಾತ್ರಿಗೆ ಮಳೆಗೆ ಗೋಡೆ ಕುಸಿದು ಚಾಮರಾಜನಗರ ತಾಲೂಕಿನ ದಡದಹಳ್ಳಿ ಗ್ರಾಮದ ಮೂರ್ತಿ ಎಂಬುವವರು ಮೃತಪಟ್ಟಿದ್ದರು. ಮಂಗಳವಾರ ಸಿಡಿಲಿಗೆ ಇಬ್ಬರು ಮೃತಪಟ್ಟಿದ್ದು, ಮಳೆ ಹಾಗೂ ಸಿಡಿಲಿನ ಅಬ್ಬರಕ್ಕೆ ಜಿಲ್ಲೆಯಲ್ಲಿ ಮೂವರು ಮೃತಪಟ್ಟಂತಾಗಿದೆ.

ಸರ್ಕಾರಗಳ ಕಾರ್ಯಕ್ರಮದಲ್ಲಿ ಕನ್ನಡ ಕಡ್ಡಾಯ

ವೇದಿಕೆಯ ಮೇಲಿನ ಫಲಕಗಳು ಮತ್ತು ಪರದೆಗಳ ಮೇಲೆ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು ಎಂದು ಆದೇಶಿಸಲಾಗಿದೆ. ಕನ್ನಡವನ್ನು ಕರ್ನಾಟಕ ರಾಜ್ಯ ಭಾಷೆಯಾಗಿ ಬಳಸತಕ್ಕದ್ದು ಎಂದು ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ, 1953ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯ ಜೊತೆಗೆ ಸಾರ್ವಭೌಮ ಭಾಷೆಯಾಗಿದೆ. ಕನ್ನಡವನ್ನು ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಅನುಷ್ಠಾನ ಗೊಳಿಸುವ ಸಂಬಂಧ ಕನ್ನಡ ಭಾಷೆ ಮತ್ತು ಕನ್ನಡಿಗರ ಹಿತಾಸಕ್ತಿಯನ್ನು ಕಾನೂನಿನ ಅನ್ವಯ ಸಂರಕ್ಷಿಸುವ ಸಲುವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು 06/08/2022ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕನ್ನಡ ಭಾಷೆಯನ್ನು ಬಳಸದಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಬಗ್ಗೆ ವೇದಿಕೆಯ ಮೇಲೆ ಬಳಸಲಾಗುವ ಪರದೆ ಮತ್ತು ಫಲಕಗಳಲ್ಲಿ ಒಟ್ಟಾರೆಯಾಗಿ ಕಾರ್ಯಕ್ರಮದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ ಸರ್ಕಾರದ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡುವಂತೆ ಕೋರಿದ್ದಾರೆ.

ಕಾಂಗ್ರೆಸ್ ಆಡಳಿತಾವಧಿಯ ಅಕ್ರಮದಿಂದ ಬೆಂಗಳೂರಿಗೆ ಈಗ ಜಲಕಂಟಕ



● ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ● ಮಳೆ ಪರಿಹಾರ ಕ್ರಮಗಳಿಗೆ ಬೆಂಗಳೂರಿಗೆ 300 ಕೋಟಿ, ರಾಜ್ಯಕ್ಕೆ 300 ಕೋಟಿ ಅನುದಾನ ಬಿಡುಗಡೆ

> “ ಮಳೆ ವಿಚಾರದಲ್ಲೂ ರಾಜಕಾರಣ ಮಾಡುತ್ತಿರುವುದು ದುರ್ದೈವ. ಮಳೆ ಸಂದರ್ಭದಲ್ಲಿ ಯುದ್ಧೋಪಾದಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ರಾಜ್ಯದಲ್ಲಿ ಎಲ್ಲಾ ಕೆರೆಗಳೂ ತುಂಬಿವೆ. ಇದೊಂದು ದಾಖಲೆ. ಜಲಪ್ರವಾಹದ ವಿರುದ್ಧ ಸಮರ ಸಾರಿದ್ದೇವೆ. ಈ ಸಂದರ್ಭದಲ್ಲಿ ನಾವೆಲ್ಲ ಒಗ್ಗಟ್ಟಾಗಬೇಕು. ರಾಜಕಾರಣ ಮಾಡುವುದು ಸಣ್ಣ ಪ್ರವೃತ್ತಿ ಎಂದು ಕಿಡಿಕಾರಿದರು.
> -ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮೈಸೂರು,ಸೆ.6(ಪಿಎಂ)– ಮಳೆ ಹಿನ್ನೆಲೆಯಲ್ಲಿ ಬೆಂಗಳೂರು ಜಲಾವೃತ ಗೊಂಡಿರುವ ವಿಚಾರ ರಾಜಕಾರಣವಾಗುತ್ತಿದೆಯೇ? ಎಂಬ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರತಿಪಕ್ಷದವರಿಗೆ ಹೇಳುವುದೇನೆಂದರೆ, ನಿಮ್ಮ ಕಾಲದಲ್ಲಿ ಚರಂಡಿ ನಿರ್ಮಾಣದ ಹೆಸರಿನಲ್ಲಿ ನಡೆದ ಭ್ರಷ್ಟಾಚಾರವೇ ಬೆಂಗಳೂರಿನ ಇಂತಹ ಪರಿಸ್ಥಿತಿಗೆ ಕಾರಣ ಎಂದು ಕಾಂಗ್ರೆಸ್ ವಿರುದ್ಧ ಹೆಸರೇಳದೇ ಹರಿಹಾಯುವ ಮೂಲಕ ಬೆಂಗಳೂರಿನ ಇಂದಿನ ದುಸ್ಥಿತಿಗೆ ಕಾಂಗ್ರೆಸ್ ಕಾರಣ ಎಂದು ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಪ್ರತಿಪಕ್ಷಗಳಿಗೆ ನಾನು ಹೇಳಲು ಇಚ್ಛಿಸುವುದೇನೆಂದರೆ, ನಿಮ್ಮ ಕಾಲದಲ್ಲಿ ಆಗಿರುವ ಅತಿಕ್ರಮಣ, ನಿಮ್ಮ ಕಾಲದಲ್ಲಿ ಕೊಟ್ಟಿರುವ ಅನಧಿಕೃತ ಅನುಮತಿಗಳು, ನಿಮ್ಮ ಕಾಲದಲ್ಲಿ ಚರಂಡಿ ನಿರ್ಮಿಸುವುದಾಗಿ ಹೇಳಿ ಮಾಡದೇ ಇರುವುದು, ಆಗ ಚರಂಡಿ ನಿರ್ಮಾಣದ ಹೆಸರಿನಲ್ಲಿ ನಡೆದ ಭ್ರಷ್ಟಾಚಾರ ಈ ಎಲ್ಲವೂ ಕಾರಣ ಎಂದು ಕಿಡಿಕಾರಿದರು.

ಅದೇನೆ ಇರಲಿ, ಈ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಸಂಕಷ್ಟದಲ್ಲಿರುವ ಜನತೆಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ ಅದನ್ನು ಮಾಡೋಣ. ಆಮೇಲೆ ಇದ್ದೇ ಇದೆ. ಅಧಿವೇಶನದಲ್ಲಿ ನಮ್ಮ–ನಿಮ್ಮ ಕಾರ್ಯಗಳ ಬಗ್ಗೆ ಸಂಪೂರ್ಣ ಚರ್ಚೆ ಮಾಡೋಣ.

ಮಳೆ ವಿಚಾರದಲ್ಲೂ ರಾಜಕಾರಣ ಮಾಡುತ್ತಿರುವುದು ದುರ್ದೈವ. ಮಳೆ ಸಂದರ್ಭದಲ್ಲಿ ಯುದ್ಧೋಪಾದಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ರಾಜ್ಯದಲ್ಲಿ ಎಲ್ಲಾ ಕೆರೆಗಳೂ ತುಂಬಿವೆ. ಇದೊಂದು ದಾಖಲೆ. ಜಲಪ್ರವಾಹದ ವಿರುದ್ಧ ಸಮರ ಸಾರಿದ್ದೇವೆ. ಈ ಸಂದರ್ಭದಲ್ಲಿ ನಾವೆಲ್ಲ ಒಗ್ಗಟ್ಟಾಗಬೇಕು. ರಾಜಕಾರಣ ಮಾಡುವುದು ಸಣ್ಣ ಪ್ರವೃತ್ತಿ ಎಂದು ಕಿಡಿಕಾರಿದರು.

ಇಡೀ ಬೆಂಗಳೂರು ಮುಳುಗಡೆ ಆಗಿಲ್ಲ: ಬೆಂಗಳೂರು ಜಲಾವೃತಕ್ಕೆ ನಿಖರವಾದ ಕಾರಣವೇನು? ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಆಡಳಿತ ವೈಫಲ್ಯದಿಂದ ಮಳೆ ಬರುತ್ತದೆ ಎನ್ನಲಾಗುತ್ತದೆಯೇ? 90 ವರ್ಷಗಳಲ್ಲಿ ಆಗದೇ ಇರುವಂತಹ ಮಳೆ ಈಗ ಆಗಿದೆ. ಇಡೀ ಬೆಂಗಳೂರು ಮುಳುಗಡೆಯಾಗಿಲ್ಲ. ಬೆಂಗಳೂರಿನಲ್ಲಿ ಒಟ್ಟು 8 ವಲಯಗಳಿದ್ದು, ಈ ಪೈಕಿ ಎರಡು ವಲಯಗಳಲ್ಲಿ ತೊಂದರೆಯಾಗಿತ್ತು. ಇದರಲ್ಲಿ ಈಗ ಬೊಮ್ಮನಹಳ್ಳಿ ವಲಯ ಸಂಪೂರ್ಣ ನಿಯಂತ್ರಣದಲ್ಲಿದೆ. ಮಹದೇವಪುರ ವಲಯದಲ್ಲಿ 69 ಕೆರೆಗಳಿದ್ದು, ಈ ಎಲ್ಲವೂ ತುಂಬಿ ಹರಿಯುತ್ತಿವೆ ಎಂದರು.

ಇಂತಹ ಮಳೆಗೆ ಪೂರಕವಾಗಿ ಯಾವುದೇ ಚರಂಡಿ ವಿನ್ಯಾಸ ಮಾಡಲಾಗಿಲ್ಲ. ಈ ವಲಯಗಳಲ್ಲೇ ಮಳೆಯಿಂದ ತೊಂದರೆಯಾಗಿರುವುದಕ್ಕೆ ಒತ್ತುವರಿ ಕಾರಣ. ಇಲ್ಲಿ ದೊಡ್ಡ ಪ್ರಮಾಣದ ಒತ್ತುವರಿಯಾಗಿದೆ. ಕೆಲವು ಕಡೆ ಚರಂಡಿಗಳನ್ನೇ ಮುಚ್ಚಿ ಕಟ್ಟಡ ಕಟ್ಟಿದ್ದಾರೆ. ಹೀಗಾಗಿ ನೀರು ಬಡಾವಣೆಗಳಲ್ಲಿ ಬಂದು ನಿಂತಿದೆ. ನಮ್ಮ ಸಿಬ್ಬಂದಿ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ಬಹುತೇಕ ಎಲ್ಲಾ ಪಾಯಿಂಟ್‌ಗಳಿಗೂ ಚರಂಡಿ ನಿರ್ಮಾಣ ಮಾಡಿದ್ದಾರೆ. ಇನ್ನು ಮೂರ್‍ನಾಲ್ಕು ಪಾಯಿಂಟ್‌ಗಳಲ್ಲಿ ಚರಂಡಿ ನಿರ್ಮಾಣ ದೊಡ್ಡ ಸವಾಲಾಗಿ ಪರಿಣಮಿಸಿದೆ ಅದನ್ನು ವರ್ತೂರು ಕೆರೆ ಮತ್ತು ಬೆಳಂದೂರು ಕೆರೆಗಳು ತುಂಬಿ ಹರಿಯುತ್ತಿರುವ ಕಾರಣ ಮತ್ತಷ್ಟು ತೊಂದರೆಯಾಗಿದೆ ಎಂದು ತಿಳಿಸಿದರು.

ಒತ್ತುವರಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಯಾರೇ ಒತ್ತುವರಿ ಮಾಡಿದ್ದರೂ ನಿರ್ದಾಕ್ಷಿಣ್ಯವಾಗಿ ತೆರವು ಮಾಡಲು ಸೂಚನೆ ನೀಡಿದ್ದೇನೆ. ನಿರಂತರವಾಗಿ ತೆರವು ಕಾರ್ಯಾಚರಣೆ ಮುಂದುವರೆದಿದೆ. ಎಸ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ. ಬಿಬಿಎಂಪಿ ಹಾಗೂ ಬೆಂಗಳೂರು ಜಲಮಂಡಳಿ, ಬಿಡಿಎ ಸಿಬ್ಬಂದಿ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ನಾನೇ ಖುದ್ದು ಮೇಲ್ವಿಚಾರಣೆ ನಡೆಸುತ್ತಿದ್ದೇನೆ. ಜೊತೆಗೆ ಅದಕ್ಕೆ ಅಗತ್ಯವಿರುವ ಹಣಕಾಸು ಕೂಡ ನಿನ್ನೆ ಬಿಡುಗಡೆ ಮಾಡಿದ್ದೇನೆ. 300 ಕೋಟಿ ರೂ. ಬೆಂಗಳೂರಿಗೆ ಬಿಡುಗಡೆ ಮಾಡಿದ್ದು, ಪ್ರತ್ಯೇಕವಾಗಿ 300 ಕೋಟಿ ರೂ. ಅನ್ನು ಇಡೀ ರಾಜ್ಯಕ್ಕೆ ಬಿಡುಗಡೆ ಮಾಡಿದ್ದೇನೆ ಎಂದು ಹೇಳಿದರು.

ಮಂಡ್ಯ ಜಿಲ್ಲೆ ಮಳವಳ್ಳಿಯ ಟಿಕೆ ಹಳ್ಳಿಯಲ್ಲಿ ಕಾವೇರಿ ನೀರಿನ ಜಲರೇಚಕ ಯಂತ್ರಾಗಾರ (ಪಂಪ್ ಸ್ಟೇಷನ್) ಜಲಾವೃತಗೊಂಡ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಸಮಸ್ಯೆ ಎದುರಾಗಿದ್ದರ ಬಗ್ಗೆ ಪ್ರತಿಕ್ರಿಯಿಸಿ, ಅಲ್ಲಿ 22 ಅಡಿ ನೀರು ನಿಂತಿತ್ತು ನಾನು ಭೇಟಿ ನೀಡಿದಾಗ 10 ಅಡಿ ನಿಂತಿದ್ದ ನೀರು ತೆಗೆಯಲಾಗಿತ್ತು ಈಗ ಸಂಪೂರ್ಣವಾಗಿ ತೆಗೆದಿದ್ದಾರೆ. ನಮ್ಮ ಸಿಬ್ಬಂದಿ ಮತ್ತು ಬೆಂಗಳೂರು ಜಲಮಂಡಳಿ ಅಧ್ಯಕ್ಷರು ಸೇರಿದಂತೆ ಎಲ್ಲರೂ ರಾತ್ರಿಯಿಡೀ ಕೆಲಸ ಮಾಡಿದ್ದು, ನಾಳೆ ಬೆಳಗ್ಗೆಯಷ್ಟರಲ್ಲಿ ಸಂಪೂರ್ಣವಾಗಿ 880 ಎಂಎಲ್‌ಡಿ ನೀರು ಬೆಂಗಳೂರಿಗೆ ಪೂರೈಕೆಯಾಗಲಿದೆ ಎಂದು ತಿಳಿಸಿದರು.

ಸೆ.12ರಂದು ಸಿಎಂ ನಿವಾಸದ ಎದುರು ಪ್ರತಿಭಟನೆ

ವಿದ್ಯುತ್ ಖಾಸಗೀಕರಣ ಮಸೂದೆ ಕೈಬಿಡಬೇಕೆಂಬುದೂ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ



ಮೈಸೂರು,ಸೆ.6(ಪಿಎಂ)– ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ವಿದ್ಯುತ್ ಖಾಸಗೀಕರಣ ಮಸೂದೆ ಕೈಬಿಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಸೆ.12ರಂದು ಬೆಂಗಳೂರಿನ ಮುಖ್ಯಮಂತ್ರಿಗಳ ನಿವಾಸದ ಎದುರು ಪ್ರತಿಭಟನೆ ನಡೆಸುವುದಾಗಿ ಸಂಘದ ಮೈಸೂರು ಜಿಲ್ಲಾ ಕಾರ್ಯಾಧ್ಯಕ್ಷ ಮೋಹನ್‌ರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ಖಾಸಗೀಕರಣ ಕುರಿತ ಮಸೂದೆ ಕೈಬಿಡಬೇಕು. ಅಲ್ಲದೆ, ರಾಜ್ಯ ಸರ್ಕಾರ, ಕೃಷಿ ಪಂಪ್‌ಸೆಟ್‌ಗಳಿಗೆ ಯಾವುದೇ ಕಾರಣಕ್ಕೂ ಮೀಟರ್ ಅಳವಡಿಕೆ ಮಾಡಬಾರದು. ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆಯನ್ನು ಕಾನೂನಾತ್ಮಕವಾಗಿ ನಿಗದಿ ಮಾಡಬೇಕು. ತರಕಾರಿ ಬೆಳೆಗಳಿಗೆ ಕೇರಳ ಮಾದರಿ ಬೆಲೆ ನಿಗದಿಪಡಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸುವುದಾಗಿ ಹೇಳಿದರು.

ಅತಿವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆ ವಿಮೆ ಹಾಗೂ ಪರಿಹಾರವನ್ನು ಶೀಘ್ರದಲ್ಲಿ ನೀಡಬೇಕು. ರೈತರು ಪಡೆದ ಟ್ರ್ಯಾಕ್ಟರ್ ಸಾಲ, ಬೆಳೆ ಸಾಲ, ಭೂ ಅಭಿವೃದ್ಧಿ ಸಾಲ ಹಾಗೂ ಹಸಿರು ಮನೆ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಗೋಮಾಳ ಭೂಮಿಯನ್ನು ಉದ್ದಿಮೆ ಹಾಗೂ ಸಂಘ–ಸಂಸ್ಥೆಗಳಿಗೆ ಹಂಚಿಕೆ ಮಾಡಬಾರದು. ರಾಜ್ಯಾದ್ಯಂತ ಒಂದೊಂದು ಕಾರ್ಖಾನೆ ಒಂದೊಂದು ರೀತಿಯಲ್ಲಿ ಕಬ್ಬಿಗೆ ದರ ನಿಗದಿ ಮಾಡಿದ್ದು, ಎಲ್ಲಾ ಜಿಲ್ಲೆಗಳ ಕಾರ್ಖಾನೆಗಳಲ್ಲೂ ಒಂದೇ ದರ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಬೇಡಿಕೆಗಳ ಸಂಬಂಧ ಶೀಘ್ರದಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ ನಡೆಸಲಾಗುವುದು. ಮೈಸೂರು ಜಿಲ್ಲೆಯಲ್ಲಿ ಶುಂಠಿ ಬೆಳೆಗೆ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು. ಜೊತೆಗೆ ಕೋಲ್ಡ್ ಸ್ಟೋರೇಜ್ ಸ್ಥಾಪಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಸಂಘದ ಜಿಲ್ಲಾಧ್ಯಕ್ಷ ಜಿ.ಲೋಕೇಶ್, ಪದಾಧಿಕಾರಿಗಳಾದ ಗೋವಿಂದರಾಜು, ಪ್ರದೀಪ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ದೇಶದ ಅಡಿಪಾಯ ನಿರ್ಮಿಸುವಲ್ಲಿ ಶಿಕ್ಷಕರು ಅತ್ಯಂತ ನಿರ್ಣಾಯಕ ಪಾತ್ರ



ಮೈಸೂರು, ಸೆ 6– ದೇಶದ ಭವಿಷ್ಯದ ಪೀಳಿಗೆಯನ್ನು ತಮ್ಮ ಜ್ಞಾನದಿಂದ ಶ್ರೀಮಂತಗೊಳಿಸುವ ಮೂಲಕ ದೇಶದ ಅಡಿಪಾಯವನ್ನು ನಿರ್ಮಿಸುವಲ್ಲಿ ಶಿಕ್ಷಕರು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ ಎಂದು ವಾಕ್ ಮತ್ತು ಭಾಷಾ ತಜ್ಞೆ ಕಾವೇರಿ ಸೋಮಶೇಖರ್ ಅಭಿಪ್ರಾಯ ಪಟ್ಟರು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸಮರ್ಥನಂ ಬುದ್ಧಿವಿಕಲಚೇತನರ ವಿಶೇಷ ಶಾಲೆಯಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಯುವ ಪೀಳಿಗೆಗೆ ಜ್ಞಾನವನ್ನು ರವಾನಿಸಲು ತಮ್ಮ ಜೀವನವನ್ನು ಸಕ್ರಿಯವಾಗಿ ಅರ್ಪಿಸುವ ಮಾನವರು. ಅವರು ಸಮಾಜದ ಪ್ರಗತಿಗೆ ಪ್ರಮುಖರಾಗಿದ್ದಾರೆ ಮತ್ತು ಮುಂಬರುವ ಪೀಳಿಗೆಯ ಭವಿಷ್ಯವನ್ನು ಭದ್ರಪಡಿಸುತ್ತಾರೆ, ಒಬ್ಬ ಆದರ್ಶ ಶಿಕ್ಷಕ ಯಾವಾಗಲೂ ಭಾವೋದ್ರಿಕ್ತನಾಗಿರುತ್ತಾನೆ ಮತ್ತು ತನಗೆ ನಿಗದಿಪಡಿಸಿದ ವಿಷಯದ ಬಗ್ಗೆ ನವೀಕರಿಸುತ್ತಾನೆ, ಇದು ಮಕ್ಕಳನ್ನು ಪ್ರೇರೇಪಿಸಲು ಸಹಾಯ ಮಾಡುತ್ತದೆ ಹಾಗೂ ಒಬ್ಬರ ಶಿಕ್ಷಣದ ಪ್ರಕ್ರಿಯೆಯಲ್ಲಿ ಶಿಕ್ಷಕರು ಬಹುಶಃ ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ ಎಂದು ತಿಳಿಸಿದರು.

ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು ಮಾತನಾಡಿ, ಆದರ್ಶ ಶಿಕ್ಷಕರಾಗುವುದು ಕೇವಲ ತಂತ್ರ ಅಥವಾ ಬೋಧನಾ ಶೈಲಿಯನ್ನು ಸುಧಾರಿಸುವುದಕ್ಕೆ ಸೀಮಿತವಾಗಿಲ್ಲ. ಇದು ವಿದ್ಯಾರ್ಥಿಗಳೊಂದಿಗಿನ ಸಂಬಂಧವನ್ನು ಸುಧಾರಿಸಲು ಸಹ ಸಂಬಂಧಿಸಿದೆ. ಅವರು ಯಾವುದೇ ದೇಶದ ಭವಿಷ್ಯದ ಆಧಾರ ಸ್ತಂಭಗಳು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯಿನಿ ಬ್ರಮಾರಂಭ ಮಾತನಾಡಿ, ಶಿಕ್ಷಕರಾದ ನಾವುಗಳು ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವ ವ್ಯಕ್ತಿಗಳಾಗಿರಬೇಕು ಮತ್ತು ತಮ್ಮ ಸ್ವಂತ ಕ್ಷೇತ್ರಗಳ ಬಗ್ಗೆ ಮತ್ತು ವಿದ್ಯಾರ್ಥಿಗಳಿಂದ ಇನ್ನಷ್ಟು ತಿಳಿದುಕೊಳ್ಳಬೇಕು. ತಮ್ಮನ್ನು ಉತ್ತಮಗೊಳಿಸಲು ನಿರಂತರವಾಗಿ ಕೆಲಸ ಮಾಡುವ ಮೂಲಕ, ಯಾವುದೇ ಶಿಕ್ಷಕರು ಆದರ್ಶ ಶಿಕ್ಷಕರಾಗಬಹುದು, ನಾವು ಪ್ರಪಂಚದಾದ್ಯಂತದ ಅನೇಕ ಜನರ ಜೀವನದಲ್ಲಿ ಪ್ರಮುಖ ಬದಲಾವಣೆಯನ್ನು ಮಾಡಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕಿಯರಾದ ಪಿ.ಪದ್ಮ, ವಿದ್ಯಾವತಿ, ವಿನೋದ, ಈ. ಪವಿತ್ರ, ಪೋಷಕರಾದ ಪೃಥ್ವಿರಾಜ್ ಮತ್ತಿತರರು ಹಾಜರಿದ್ದರು.

ವಚನ ಸಾಹಿತ್ಯ ವಿಶ್ವದಲ್ಲಿಯೇ ವಿಶೇಷವಾದ ಸಾಹಿತ್ಯ



ಮೈಸೂರು, ಸೆ. 6– ವಚನ ಸಾಹಿತ್ಯ ವಿಶ್ವದಲ್ಲಿಯೇ ವಿಶೇಷವಾದ ಸಾಹಿತ್ಯ ಎಂದು ನಿವೃತ್ತ ಪ್ರಾಂಶುಪಾಲರಾದ ಎಚ್.ಬಿ ಓಂಕಾರಯ್ಯ ತಿಳಿಸಿದ್ದಾರೆ.

ಶರಣು ವಿಶ್ವವಚನ ಫೌಂಡೇಷನ್ ಹಾರನಹಳ್ಳಿ ಬಸವಣ್ಣ ಮತ್ತು ಗುರುಸಿದ್ಧಮ್ಮರವರ ದತ್ತಿ ಅಂಗವಾಗಿ ನಗರದ ಎನ್. ಆರ್.ಮೊಹಲ್ಲಾದ ಮೂರನೇ ಇನ್ಫೆಂಟ್ರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲೆಗಳೆಡೆಗೆ ವಚನಗಳ ನಡಿಗೆ ಮತ್ತು ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಶರಣರು ಜಾತಿ, ವರ್ಣ, ವರ್ಗ, ಲಿಂಗ ಭೇದಗಳಿಲ್ಲದೆ ಆದರ್ಶ ಜೀವನ ನಡೆಸಿ ಸಾಂಸ್ಕೃತಿಕ ಸಂಘಟನೆಗೆ ಕಾರಣರಾದರು. ಅವರು ರಚಿಸಿದ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವುದರ ಮೂಲಕ ವಿಶ್ವಭ್ರಾತೃತ್ವಕ್ಕೆ ನಾಂದಿ ಹಾಡಿದರು ಎಂದು ತಿಳಿಸಿದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಮಾತನಾಡಿ, ಶರಣರ ಕಾಯಕ ನಿಷ್ಠೆ ಜಗತ್ತಿಗೆ ಮಾದರಿಯಾಗಿದೆ. ಅವರು ಅತಿ ಆಸೆಯನ್ನು ತೊರೆದು ನಾಳೆಗೆಂದು ಸಂಗ್ರಹಿಸಿಡದೆ ಕಾಯಕದಿಂದ ಬಂದ ಫಲವನ್ನು ಅಸಹಾಯಕರ ಉದ್ಧಾರಕ್ಕೆ ಬಳಸುತ್ತ ಆದರ್ಶ ಜೀವನ ನಡೆಸಿ ಮಾನವ ಕುಲಕ್ಕೆ ದಾರಿ ತೋರಿದರು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ವಚನಕಾರರು ವಚನಗಳ ಮೂಲಕ ಸಾಮಾಜಿಕ ಅರಿವನ್ನು ಮೂಡಿಸಿ ದೇವನು ಮಾನವನಲ್ಲಿ ಇದ್ದಾನೆಯೇ ಹೊರತು ಗುಡಿ ಗುಡಾರಗಳಲ್ಲಿ ಇಲ್ಲ ಎಂದು ಪ್ರತಿಪಾದಿಸಿ ಅನುಭವಮಂಟಪ ಸ್ಥಾಪಿಸಿದುದರ ಫಲವಾಗಿ ಪ್ರಜಾಪ್ರಭುತ್ವ ಗಟ್ಟಿಯಾಗಲು ಕಾರಣರಾದರು ಎಂದರು. ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 46 ವಿದ್ಯಾರ್ಥಿಗಳಿಗೆ ಸಮವಸ್ತ್ರ ವಚನದೀವಿಗೆ ಪ್ರಮಾಣಪತ್ರ ಮತ್ತು ವಚನ ಪುಸ್ತಕ ವಿತರಿಸಲಾಯಿತು.

ನವೋದಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.6– ಜವಾಹರ ನವೋದಯ ವಿದ್ಯಾಲಯದ ಶಾಲೆಯ ವತಿಯಿಂದ 9 ತರಗತಿಯ ಉಳಿಕೆ ಸೀಟುಗಳ ಪ್ರವೇಶಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದ್ದು ಅಕ್ಟೋಬರ್ 15 ರೊಳಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜಿಲ್ಲೆಯಲ್ಲಿ 2022–23ನೇ ಸಾಲಿನಲ್ಲಿ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು, 01–05–2008 ರಿಂದ 30–04–2010ರ (ಎರಡು ದಿನಗಳು ಸೇರಿ)ಒಳಗೆ ಜನಿಸಿರಬೇಕು.

ಅರ್ಜಿಗಳನ್ನು ನವೋದಯ ವಿದ್ಯಾಲಯ ಸಮಿತಿಯ ಜಾಲತಾಣ www.navodaya.gov.in ಅಥವಾ www.nvsadmisssionclassnine.in ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್‌ನ 'ಭಾರತ್ ಜೋಡೋ' ಯಾತ್ರೆಗೆ ಡಾ.ಸುಶ್ರುತ ಹೆಡ್ನಾ ಆಯ್ಕೆ

ಐವರು ಸಕ್ರಿಯ ಯಾತ್ರಿಕರಲ್ಲಿ ಮೈಸೂರಿನಿಂದ ಸುಶ್ರುತ ಜೊತೆ ಕು.ಎಸ್. ಪ್ಯಾರಿಜಾನ್, ರಾಜ್ಯದ ಐವರು ಸೇರಿದ್ದಾರೆ



ಡಾ.ಸುಶ್ರುತ ಹೆಡ್ನಾ



ಕುಮಾರಿ ಎಸ್.ಪ್ಯಾರಿ ಜಾನ್

> ಮೈಸೂರಿನ ನರರೋಗ ತಜ್ಞ ಡಾ.ಸುಶ್ರುತ ಹೆಡ್ನಾ ಅವರು ಮೈಸೂರು ನಜರ್‌ಬಾದ್‌ನ ನ್ಯೂರೋಜೋನ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಮೈಸೂರು ಮತ್ತು ಕೊಡಗಿನ ಸುತ್ತಮುತ್ತಲಿನ ಗ್ರಾಮೀಣ ಜನರಿಗೆ ಉಚಿತ ಟೆಲಿಹೆಲ್ತ್ ಮತ್ತು ಆರೋಗ್ಯ ಶಿಬಿರವನ್ನು ಒದಗಿಸುವ ಥಾರ್ ಯೋಜನೆಯಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಸಮಾಜಮುಖಿ ಕೆಲಸದೊಂದಿಗೆ ಪರಿಸರವಾದಿಯೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೈಸೂರು,ಸೆ.6(ಎಂಟಿವೈ)– ದೇಶದಲ್ಲಿ ಕೋಮು ಸೌಹಾರ್ದತೆ ಅನಿವಾರ್ಯತೆ ಜಾಗೃತಿ ಮೂಡಿಸುವುದರೊಂದಿಗೆ ಕೇಂದ್ರ ಸರ್ಕಾರದ ಭ್ರಷ್ಟಾಚಾರ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ನಾಯಕ, ಸಂಸದ ರಾಹುಲ್ ಗಾಂಧಿ ನೇತೃತ್ವದಲ್ಲಿ ಸೆ.8ರಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸಲು ಉದ್ದೇಶಿಸಿರುವ 'ಭಾರತ್ ಜೋಡೋ ಯಾತ್ರೆಯಲ್ಲಿ ಮೈಸೂರಿನ ಇಬ್ಬರೂ ಸೇರಿದಂತೆ ಕರ್ನಾಟಕದ ಐವರು ಕಾಂಗ್ರೆಸ್ ಮುಖಂಡರು ಪೂರ್ಣ ಪ್ರಮಾಣದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದಾರೆ.

ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಕೋಮು ಸೌಹಾರ್ದತೆ ಹದಗೆಡಿಸುವ ಕೃತ್ಯಗಳು ನಡೆಯುತ್ತಿರುವುದನ್ನು ಮನಗಂಡು ದೇಶದಲ್ಲಿ ಸಾಮರಸ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ವತಿಯಿಂದ 'ಭಾರತ್ ಜೋಡೋ ಯಾತ್ರೆ' ಆಯೋಜಿಸಲಾಗಿದ್ದು, 150 ದಿನ 3,700 ಕಿ.ಮೀ ಸಂಚರಿಸಲಿರುವ ಈ ಯಾತ್ರೆಯಲ್ಲಿ ದೇಶದ ವಿವಿಧ ರಾಜ್ಯಗಳಿಂದ 25ರಿಂದ 50 ವರ್ಷದೊಳಗಿನ 35 ಮಹಿಳೆಯರು ಒಳಗೊಂಡಂತೆ 117 ಮಂದಿ ಕಾಂಗ್ರೆಸ್‌ನ ವಿವಿಧ ಘಟಕಗಳ ಮುಖಂಡರು, ಮುಂಚೂಣಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಅದರಲ್ಲಿ ಮೈಸೂರಿನ ಇಬ್ಬರು ಸೇರಿದಂತೆ ಐವರು ಕನ್ನಡಿಗರು ಭಾರತ್ ಜೋಡೋ ಯಾತ್ರೆಯಲ್ಲಿ ಆರಂಭದಿಂದ ಅಂತ್ಯದವರೆಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ವಿಶೇಷವಾಗಿದೆ.

ಮೈಸೂರು ನಜರ್‌ಬಾದ್‌ನ ನ್ಯೂರೋಜೋನ್ ಆಸ್ಪತ್ರೆಯ ನರರೋಗ ತಜ್ಞ ಡಾ.ಸುಶ್ರುತ ಹೆಡ್ನಾ ಹಾಗೂ ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ, ಸೇವಾದಳದ ರಾಜ್ಯ ಹಾಗೂ ರಾಷ್ಟ್ರೀಯ ಘಟಕದಲ್ಲಿ ಸೇವೆ ಸಲ್ಲಿಸಿರುವ ಅನುಭವವುಳ್ಳ ಕು.ಎಸ್.ಪ್ಯಾರಿಜಾನ್ ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇವರೊಂದಿಗೆ ಉತ್ತರ ಕರ್ನಾಟಕದ ಡಿ.ಎಲ್.ಶ್ರಿಜಿತ್, ಕಿರಣ್ ಮೂಗಬಸವ, ಚೆನ್ನಬಸಪ್ಪ ಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದಾರೆ.

ನಾಳೆ ಬೃಹತ್ ಸಭೆ: ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವ ನರರೋಗ ತಜ್ಞ ಡಾ.ಸುಶ್ರುತ ಹೆಡ್ನಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ದೇಶದಲ್ಲಿ ಶಾಂತಿ, ಸೌಹಾರ್ದತೆ ಹಾಳು ಮಾಡಿರುವ ಸಂಬಂಧ ಜಾಗೃತಿ ಮೂಡಿಸಲು, ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ ಕೇಂದ್ರ ಸರ್ಕಾರದ ಅವೈಜ್ಞಾನಿಕ ನೀತಿ, ಭ್ರಷ್ಟಾಚಾರವನ್ನು ಖಂಡಿಸಿ, ಸಂಸದ ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ್ ಜೋಡೋ ಯಾತ್ರೆ ನಡೆಯುತ್ತಿದೆ. ನಾಳೆ(ಸೆ.7) ಕನ್ಯಾಕುಮಾರಿಯಲ್ಲಿ ಬೃಹತ್ ಸಭೆ ನಡೆಯಲಿದ್ದು, ದೇಶದ ವಿವಿಧೆಡೆಯಿಂದ ಕಾಂಗ್ರೆಸ್‌ನ ಪ್ರಮುಖ ನಾಯಕರು ಪಾಲ್ಗೊಳ್ಳಲಿದ್ದಾರೆ. ಸೆ.8ರಿಂದ ಭಾರತ್ ಜೋಡೋ ಯಾತ್ರೆ ಆರಂಭವಾಗಲಿದೆ ಎಂದರು.

ನಂತರ ಯಾತ್ರೆ ಕೇರಳ ಮಾರ್ಗವಾಗಿ ಗುಂಡ್ಲುಪೇಟೆ ಮೂಲಕ ಕರ್ನಾಟಕವನ್ನು ಪ್ರವೇಶಿಸಲಿದ್ದು, ಅಕ್ಟೋಬರ್ ಮೊದಲ ವಾರದಲ್ಲಿ ಮೈಸೂರು ಮಾರ್ಗವಾಗಿ ರಾಯಚೂರು, ಬಳ್ಳಾರಿ ಮಾರ್ಗವಾಗಿ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ದೆಹಲಿ, ಹರಿಯಾಣ, ಪಂಜಾಬ್ ಮತ್ತು ಜಮ್ಮುವಿನ ಮೂಲಕ ಕಾಶ್ಮೀರ ತಲುಪಲಿದೆ. 3,700 ಕಿ.ಮಿ ಅಂತರದ ಈ ಯಾತ್ರೆಯು 150 ದಿನ ಸಾಗಲಿದೆ. ದಿನಕ್ಕೆ 25 ಕಿ.ಮೀ ನಡಿಗೆಯಲ್ಲಿ ಪಾಲ್ಗೊಳ್ಳಲಿದ್ದೇವೆ. 'ಮಿಲೆ ಕದಮ್, ಜುಡೆವತನ್' (ಒಟ್ಟಿಗೆ ನಡಿ, ದೇಶವನ್ನು ಒಗ್ಗೂಡಿಸಿ) ಘೋಷಣೆಯೊಂದಿಗೆ ಯಾತ್ರೆ ನಡೆಯುತ್ತಿದೆ ಎಂದು ತಿಳಿಸಿದರು.

ಈ ಯಾತ್ರೆಯಲ್ಲಿ ಮೂರು ವಿಭಾಗದ ಯಾತ್ರಿಗಳು ಪಾಲ್ಗೊಳ್ಳಲಿದ್ದಾರೆ. 117 ಯಾತ್ರಿಗಳು ಪೂರ್ಣ ಪ್ರಮಾಣದ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರದೇಶ ಯಾತ್ರಿಗಳ ವಿಭಾಗದಲ್ಲಿ ಭಾರತ್ ಜೋಡೋ ಯಾತ್ರೆ ಯಾವ ಜಿಲ್ಲೆ, ತಾಲೂಕು ಹಾಗೂ ರಾಜ್ಯ ಪ್ರವೇಶಿಸುತ್ತದೋ, ಅಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅತಿಥಿ ಯಾತ್ರಿಗಳ ವಿಭಾಗದಲ್ಲಿ ಮಾನವ ಹಕ್ಕುಗಳ ಕಾರ್ಯಕರ್ತರು, ಸಮಾಜದ ಗಣ್ಯರು, ರೈತ ಮುಖಂಡರು, ಭ್ರಷ್ಟಾಚಾರದ ವಿರುದ್ಧ ಯುವಕರು, ವೈದ್ಯರು, ರಾಜಕೀಯ ಕಾರ್ಯಕರ್ತರು ಸೇರಿದಂತೆ ಸಮಾಜದ ವಿವಿಧ ವರ್ಗದ ಜನರು ಈ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ. ಪೂರ್ಣ ಯಾತ್ರೆಯಲ್ಲಿ ಪಾಲ್ಗೊಳ್ಳುವ ಯಾತ್ರಿಗಳಿಗೆ ರಾತ್ರಿ ವೇಳೆ ವಾಸ್ತವ್ಯ ಹೂಡಲು ಕಂಟೇನರ್‌ಗಳಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.



ದಸರಾ ಗಜಪಡೆ 2ನೇ ತಂಡ ಇಂದು ಅರಮನೆ ಆವರಣಕ್ಕೆ

ಮೂರು ಹೊಸ ಆನೆ ಸೇರಿದಂತೆ ಐದು ಆನೆ ಆಗಮನ



ಮೈಸೂರು,ಸೆ.6(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ ನಾಳೆ(ಸೆ.7) ಮೂರು ಹೊಸ ಆನೆ ಸೇರಿದಂತೆ 5 ಆನೆಗಳು ಆಗಮಿಸುತ್ತಿದ್ದು, ಮಧ್ಯಾಹ್ನದೊಳಗೆ ಅರಮನೆ ಅಂಗಳದಲ್ಲಿ ಬೀಡು ಬಿಟ್ಟಿರುವ ಅಭಿಮನ್ಯು ಪಡೆಯೊಂದಿಗೆ ಸೇರ್ಪಡೆಗೊಳ್ಳಲಿದೆ.

ಎರಡನೇ ತಂಡದ ದಸರಾ ಗಜಪಡೆಯಲ್ಲಿ ಕೊನೆ ಹಂತದಲ್ಲಿ ದುಬಾರೆ ಆನೆ ಕ್ಯಾಂಪ್‌ನಲ್ಲಿರುವ 40 ವರ್ಷದ ಸುಗ್ರೀವ ಅವಕಾಶ ಗಿಟ್ಟಿಸಿಕೊಂಡಿದೆ. ಪಟ್ಟದ ಆನೆ ವಿಕ್ರಮ ಮದವೇರಿದ್ದರಿಂದ ಬಂಡೀಪುರದ ರಾಮ್‌ಪುರ ಕ್ಯಾಂಪ್‌ನಲ್ಲಿದ್ದ ಕುಂತಿಯನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಕುಂತಿ ಗರ್ಭಿಣಿಯಾಗಿರುವುದರಿಂದ ದಸರಾ ಮಹೋತ್ಸವಕ್ಕೆ ಕರೆತರಲು ನಿರಾಕರಿಸಲಾಗಿದೆ. ಅದರ ಬದಲಾಗಿ ದುಬಾರೆ ಶಿಬಿರದ ಸುಗ್ರೀವಗೆ ಕೊನೆ ಘಳಿಗೆಯಲ್ಲಿ ಅವಕಾಶ ದೊರೆತಿದೆ. ಇದರಿಂದ ಎರಡನೇ ತಂಡದಲ್ಲಿ ಹೊಸ ಆನೆಗಳಾದ ರಾಮ್‌ಪುರದ ಪಾರ್ಥಸಾರಥಿ(18), ದುಬಾರೆ ಕ್ಯಾಂಪ್‌ನ ಶ್ರೀರಾಮ(40), ಸುಗ್ರೀವ(40) ಬರುತ್ತಿದ್ದು, ಇದರೊಂದಿಗೆ ದುಬಾರೆ ಕ್ಯಾಂಪ್‌ನಿಂದ ಗೋಪಿ(41) ಹಾಗೂ ವಿಜಯ(63) ಅರಮನೆ ನಗರಿಗೆ ಆಗಮಿಸುತ್ತಿವೆ.

ಸೆ.8ರಂದು ಸಿಡಿಮದ್ದು ತಾಲೀಮು ಸಾಧ್ಯತೆ: ಸೆ.7ರಂದು ಎರಡನೇ ತಂಡದ 5 ಆನೆಗಳು ಆಗಮಿಸಿದರೆ, ಸೆ.8ರಂದು ಈ ವರ್ಷದ ಮೊದಲ ಸಿಡಿಮದ್ದು ತಾಲೀಮು ನಡೆಸಲು ನಿರ್ಧರಿಸಲಾಗಿದೆ. ಅಂದು ಸಿಡಿಮದ್ದು ತಾಲೀಮು ನಡೆದರೆ, ಸೆ.9ರಂದು ಮೊದಲ ತಂಡದ ಆನೆಗಳೂ ಸೇರಿದಂತೆ ಎಲ್ಲಾ 14 ಆನೆಗಳಿಗೂ ತೂಕ ಹಾಕಿಸಲಾಗುತ್ತದೆ. ಸೆ.10ರಿಂದ 14 ಆನೆಗಳು ತಾಲೀಮಿನಲ್ಲಿ ಸಾಗಲಿವೆ. ಸೆ.7 ಮತ್ತು 8ರಂದು ಮರದ ಅಂಬಾರಿ ತಾಲೀಮು ನಡೆಸಲು ಆನೆಗಳಿಗೆ ವಿನಾಯಿತಿ ನೀಡಲಾಗಿದೆ.

ಚಲನಚಿತ್ರ ನಿರ್ಮಾಣ ಕಾರ್ಯಾಗಾರ

ಮೈಸೂರು, ಸೆ.6– ಮೈಸೂರು ದಸರಾ ಮಹೋತ್ಸವ–2022 ರ ಅಂಗವಾಗಿ, ದಸರಾ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಚಿತ್ರ ನಿರ್ಮಾಣ ಪೂರ್ವ ತಯಾರಿ ಕುರಿತಂತೆ ಚಲನಚಿತ್ರ ನಿರ್ಮಾಣ ಕಾರ್ಯಾಗಾರವನ್ನು 2022ರ ಸೆಪ್ಟೆಂಬರ್ 22, 23 ಹಾಗೂ 24 ರಂದು 3 ದಿನಗಳ ಕಾಲ, ರಾಣಿ ಬಹದ್ದೂರು ಸಭಾಂಗಣ, ಮಾನಸ ಗಂಗೋತ್ರಿ, ಹುಣಸೂರು ರಸ್ತೆ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ.


ಕಾರ್ಯಾಗಾರವನ್ನು ಸೆಪ್ಟೆಂಬರ್ 22 ರಂದು ಬೆಳಗ್ಗೆ 10 ಗಂಟೆಗೆ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹೆಸರಾಂತ ಕನ್ನಡ ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್ ಅವರು ಉದ್ಘಾಟಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕರಾದ ಚಂಪಾಶೆಟ್ಟಿ, ಕೋಡ್ಲು ರಾಮಕೃಷ್ಣ, ಪವನ್ ಕುಮಾರ್, ಪನ್ನಗಾಭರಣ, ಅರವಿಂದ ಕೌಶಿಕ್, ಶಂಕರ್ ಎನ್, ಸಂಡೂರು, ಮಂಸೋರೆ ಅವರು ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ.

ಕಾರ್ಯಾಗಾರದಲ್ಲಿ ಭಾಗವಹಿಸುವವರು https://bit.ly/3dxD22D ಲಿಂಕ್ ಮೂಲಕ ಕಾಣಬರುವ ಗೂಗಲ್ ಅರ್ಜಿ ನಮೂನೆಯಲ್ಲಿ ಎಲ್ಲಾ ವಿವರಗಳನ್ನೂ ಭರ್ತಿ ಮಾಡಿ, ಕಾರ್ಯಾಗಾರದ ಶುಲ್ಕ 300 ರೂ. ಪಾವತಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಮೊದಲು ನೋಂದಣಿ ಮಾಡುವ 200 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ ಹಾಗೂ ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು.

ಚಲನಚಿತ್ರ ನಿರ್ಮಾಣ ಕಾರ್ಯಾಗಾರ ಪ್ರವೇಶಕ್ಕಾಗಿ ನೋಂದಣಿಯನ್ನು 2022ರ ಸೆಪ್ಟೆಂಬರ್ 12 ರಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಆಫ್‌ಲೈನ್ ಮೂಲಕ ಮಾಡಲಾಗುವುದು. ಆಫ್‌ಲೈನ್ ನೋಂದಣಿಗೆ ಯಾವುದಾದರೂ ಅಧಿಕೃತ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ನೀಡಬೇಕು.

ಮೈಸೂರು ದಸರಾ ಚಲನಚಿತ್ರೋತ್ಸವ



ಮೈಸೂರು, ಸೆ.6– ಚಲನಚಿತ್ರೋತ್ಸವವು ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 3 ರವರೆಗೆ ನಡೆಯಲಿದ್ದು, ಐನಾಕ್ಸ್ ಚಿತ್ರಮಂದಿರದ 3 ಪರದೆಗಳಲ್ಲಿ ಮತ್ತು ಡಿಆರ್‌ಸಿ ಚಿತ್ರ ಮಂದಿರದ 1 ಪರದೆಯಲ್ಲಿ ಪ್ರತಿದಿನ 4 ಪ್ರದರ್ಶನದಂತೆ ಒಟ್ಟು 112 ಪ್ರದರ್ಶನಗಳು ನಡೆಯಲಿವೆ. ಚಲನಚಿತ್ರೋತ್ಸವದಲ್ಲಿ ಕನ್ನಡ ಚಿತ್ರಗಳು, ಭಾರತೀಯ ಪನೋರಮಾ ಹಾಗೂ ಅಂತರರಾಷ್ಟ್ರೀಯ ಚಿತ್ರಗಳನ್ನು ಪ್ರದರ್ಶಿಸಲಾಗುವುದು.

ದಸರಾ ಚಲನಚಿತ್ರೋತ್ಸವ ಪ್ರವೇಶಕ್ಕಾಗಿ ನೋಂದಣಿಯನ್ನು 2022ರ ಸೆಪ್ಟೆಂಬರ್ 12ರಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಆಫ್‌ಲೈನ್ ಮೂಲಕ ಮಾಡಲಾಗುವುದು. ಆಫ್‌ಲೈನ್ ನೋಂದಣಿಗೆ ಯಾವುದಾದರೂ ಅಧಿಕೃತ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 7411564510, 9844393681 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ಮಾದರಿಯ ಕ್ರಿಕೆಟ್‌ಗೆ ಸುರೇಶ್ ರೈನಾ ನಿವೃತ್ತಿ ಘೋಷಣೆ



ನವದೆಹಲಿ, ಸೆ.6– ಭಾರತ ತಂಡದ ಸ್ಟಾರ್ ಕ್ರಿಕೆಟಿಗ ಸುರೇಶ್ ರೈನಾ ಐಪಿಎಲ್ ಸೇರಿದಂತೆ ಎಲ್ಲ ಬಗೆಯ ಕ್ರಿಕೆಟ್ ಮಾದರಿಗಳಿಗೆ ನಿವೃತ್ತಿ ಘೋಷಿಸಿದ್ದಾರೆ. ಟೀಮ್ ಇಂಡಿಯಾ ಮಾಜಿ ಆಟಗಾರ ಸುರೇಶ್ ರೈನಾ ಭಾರತದ ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದು ಕೊಳ್ಳುವುದಾಗಿ ಘೋಷಣೆ ಮಾಡಿದ್ದು, ಈ ಬಗ್ಗೆ ಟ್ವಿಟರ್ ನಲ್ಲಿ ಬರೆದುಕೊಂಡಿದ್ದಾರೆ. 'ನನ್ನ ದೇಶ ಮತ್ತು ಉತ್ತರ ಪ್ರದೇಶ ರಾಜ್ಯವನ್ನು ಪ್ರತಿನಿಧಿಸಿರುವುದಕ್ಕೆ ಗೌರವವಿದೆ. ನಾನು ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಿಗೆ ನಿವೃತ್ತಿ ಘೋಷಿಸಲು ಬಯಸುತ್ತೇನೆ. ಬಿಸಿಸಿಐ (BCCI), ಯುಪಿ ಕ್ರಿಕೆಟ್, ಸಿಎಸ್‌ಕೆ, ರಾಜೀವ್ ಶುಕ್ಲಾ ಹಾಗೂ ನನಗೆ ಬೆಂಬಲ ನೀಡಿದ ಎಲ್ಲ ಅಭಿಮಾನಿಗಳಿಗೆ, ಸ್ನೇಹಿತರಿಗೆ ಧನ್ಯವಾದ ಹೇಳಲು ಇಚ್ಚಿಸುತ್ತೇನೆ,' ಎಂದು ಬರೆದುಕೊಂಡಿದ್ದಾರೆ.

2020ರಲ್ಲಿ ಸ್ವಾತಂತ್ರ್ಯ ದಿನ ಆಗಸ್ಟ್ 15 ರಂದು ಎಂ.ಎಸ್ ಧೋನಿ ಜೊತೆಗೆ ರೈನಾ ಕೂಡ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ವಿದಾಯ ಹೇಳಿದ್ದರು. ಇದೀಗ ಭಾರತದ ಎಲ್ಲ ಮಾದರಿಯ ಕ್ರಿಕೆಟ್‌ನಿಂದ ಮಿಸ್ಟರ್ ಐಪಿಎಲ್ ಖ್ಯಾತಿಯ ರೈನಾ ಹಿಂದೆ ಸರಿದಿದ್ದಾರೆ. ಈ ಮೂಲಕ ರೈನಾ ಇನ್ನುಮುಂದೆ ಐಪಿಎಲ್ ಹಾಗೂ ದೇಶೀಯ ಕ್ರಿಕೆಟ್‌ನಲ್ಲಿ ಕಾಣಿಸುವುದಿಲ್ಲ. ಆದರೆ ವಿದೇಶಿ ಲೀಗ್‌ನಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂಬ ಮಾತಿದೆ. ಇನ್ನು ಸುಮಾರು 13 ವರ್ಷಗಳ ಕಾಲ ಅಂತಾ ರಾಷ್ಟ್ರೀಯ ಪಂದ್ಯಗಳನ್ನಾಡಿರುವ ಸುರೇಶ್ ರೈನಾ, 18 ಟೆಸ್ಟ್, 226 ಏಕದಿನ ಪಂದ್ಯ ಹಾಗೂ 78 ಟಿ20 ಪಂದ್ಯಗಳನ್ನು ಆಡಿದ್ದಾರೆ. ಕೆಲ ಪಂದ್ಯಗಳಲ್ಲಿ ನಾಯಕನಾಗಿ ಟೀಮ್ ಇಂಡಿಯಾವನ್ನು ಮುನ್ನಡೆಸಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ 5000 ರನ್‌ಗಳ ಗಡಿ ದಾಟಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆ ಹೊಂದಿರುವ ಸುರೇಶ್ ರೈನಾ, ಈವರೆಗೆ ಆಡಿದ 205 ಪಂದ್ಯಗಳಿಂದ 5528 ಎನ್‌ಗಳನ್ನು ಬಾರಿಸಿದ್ದಾರೆ. 136.7ರ ಅದ್ಭುತ ಸ್ಟ್ರೈಕ್‌ರೇಟ್ ಹೊಂದಿರುವ ಅವರು 32.5ರ ಅಮೋಘ ಸರಾಸರಿಯಲ್ಲಿ ಬ್ಯಾಟ್ ಬೀಸಿದ್ದರು. ಐಪಿಎಲ್ ಇತಿಹಾಸದಲ್ಲಿ ಗರಿಷ್ಠ ರನ್ ಬಾರಿಸಿದ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಒಬ್ಬರಾಗಿರುವ ರೈನಾರನ್ನು ಕಳೆದ ಬಾರಿಯ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಕೈಬಿಟ್ಟಿತ್ತು. ಅಲ್ಲದೆ ರೈನಾ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಅನ್‌ಸೋಲ್ಡ್ ಆಗಿ ಉಳಿದಿದ್ದರು. ಸುರೇಶ್ ರೈನಾ ಪ್ರಸ್ತುತ ಭಾರತದ ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯಾಗಿರುವ ಕಾರಣ ವಿದೇಶದ ಟಿ20 ಲೀಗ್‌ಗಳಲ್ಲಿ ಆಡಲು ಅರ್ಹರಾಗಿದ್ದಾರೆ. ಹೀಗಾಗಿ ದೇಶದ ಹೊರಗೆ ವಿದೇಶದ ಲೀಗ್‌ಗಳಲ್ಲಿ ಸುರೇಶ್ ರೈನಾ ಕಣಕ್ಕಿಳಿಯವ ಸಾಧ್ಯತೆ ಇದೆ ಎನ್ನಲಾಗಿದೆ.

ಶಾಲೆಗಳಿಗೆ ಹಿಜಾಬ್ ಧರಿಸಿಕೊಂಡು ಹೋಗುವ ಅಗತ್ಯವೇನಿದೆ?



ನವದೆಹಲಿ,ಸೆ.6–ಒಬ್ಬ ವ್ಯಕ್ತಿಗೆ ಧಾರ್ಮಿಕ ಸಂಪ್ರದಾಯ ಗಳನ್ನು ಪಾಲಿಸುವ, ಆಚರಿಸುವ ಹಕ್ಕು ಇದೆ, ಆದರೆ ಸಮವಸ್ತ್ರ ಧರಿಸುವ ಶಾಲೆಯವರೆಗೆ ಅದನ್ನು ತೆಗೆದುಕೊಂಡು ಹೋಗುವ ಔಚಿತ್ಯವನ್ನು ಸುಪ್ರೀಂಕೋರ್ಟ್ ಕರ್ನಾಟಕದಲ್ಲಿ ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ಕುರಿತ ವಿಚಾರಣೆ ವೇಳೆ ಪ್ರಶ್ನಿಸಿದೆ. ಕರ್ನಾಟಕದ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದಕ್ಕೆ ನಿಷೇಧ ಹೇರಿ ರಾಜ್ಯ ಸರ್ಕಾರ ಹೊರಡಿಸಿದ್ದ ನಿಯಮವನ್ನು ಪುರಸ್ಕರಿಸಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ರೀತಿ ಪ್ರಶ್ನಿಸಿದೆ. ಸಮವಸ್ತ್ರ ಧರಿಸುವ ಶಾಲೆಯಲ್ಲಿ ಹಿಜಾಬ್ ಏಕೆ ಎಂದು ಸುಪ್ರೀಂಕೋರ್ಟ್ ವಿಚಾರಣೆ ವೇಳೆ ನಿನ್ನೆ ಪ್ರಶ್ನಿಸಿದೆ. ನಿಮ್ಮ ನಿಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಆಚರಿಸುವ ಹಕ್ಕು ನಿಮಗಿದೆ. ಆದರೆ ನೀವು ಧರಿಸಬೇಕಾದ ಉಡುಪಿನ ಭಾಗವಾಗಿ ಸಮವಸ್ತ್ರವನ್ನು ಹೊಂದಿರುವ ಶಾಲೆಗೆ ನಿಮ್ಮ ಧಾರ್ಮಿಕ ಸಂಪ್ರದಾಯಗಳನ್ನು ತೆಗೆದುಕೊಂಡು ಹೋಗಬಹುದೇ ಎಂಬುದು ಪ್ರಶ್ನೆ ಎಂದು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರ ನೇತೃತ್ವದ ನ್ಯಾಯಪೀಠ ಕೇಳಿದೆ. ಕೆಲವು ಅರ್ಜಿದಾರರ ಪರ ವಾದ ಮಂಡಿಸುತ್ತಿದ್ದ ಹಿರಿಯ ವಕೀಲ ಸಂಜಯ್ ಹೆಗ್ಡೆ ಅವರಿಗೆ ಸುಪ್ರೀಂ ಕೋರ್ಟ್ ಈ ಪ್ರಶ್ನೆಯನ್ನು ಕೇಳಿದೆ.

ರಾಜ್ಯವು ಶಾಲಾ–ಕಾಲೇಜುಗಳಿಗೆ ನಿಯಮಗಳನ್ನು ರೂಪಿಸುವ ವಿಷಯಗಳಲ್ಲಿ ಡ್ರೆಸ್ ಕೋಡ್ ಇಲ್ಲ ಎಂಬ ಹಿರಿಯ ವಕೀಲ ಸಂಜಯ್ ಹೆಗ್ಡೆ ಅವರ ವಾದವನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರನ್ನೊಳಗೊಂಡ ನ್ಯಾಯಪೀಠ, ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲದಿದ್ದರೆ ವಿದ್ಯಾರ್ಥಿಗಳು ಮಿಡಿ–ಮಿನಿಸ್ಕರ್ಟ್‌ಗಳಲ್ಲಿ ಬರಬಹುದೇ ಎಂದು ಕೇಳಿತು. ನಿರ್ದಿಷ್ಟ ಅಧಿಕಾರವಿಲ್ಲದಿದ್ದರೆ, 161 ನೇ ವಿಧಿ ಅನ್ವಯವಾಗುತ್ತದೆ, ಸಮವಸ್ತ್ರವನ್ನು ಸೂಚಿಸುವ ಅಧಿಕಾರವಿಲ್ಲದಿದ್ದರೆ, ಹುಡುಗಿಯರು ಮಿಡಿ ಮಿನಿಸ್ಕರ್ಟ್‌ಗಳು ಏನು ಬೇಕಾದರೂ ಬರಬಹುದೇ ಯಾವುದೇ ನಿಯಮಗಳು ಜಾರಿಯಿಲ್ಲದಿದ್ದರೆ, ರಾಜ್ಯದ ಕಾರ್ಯನಿರ್ವಾಹಕ ಅಧಿಕಾರವು ಕಾರ್ಯರೂಪಕ್ಕೆ ಬರುತ್ತದೆ. ಹೈಕೋರ್ಟ್ ಹೇಳಿದ್ದನ್ನು ನಾವು ಪಾಲಿಸಬೇಕಾಗಿಲ್ಲ. ಕಾಯ್ದೆಯು ಯಾವುದೇ ಡ್ರೆಸ್ ಕೋಡ್ ನ್ನು ನಿಷೇಧಿಸದಿದ್ದರೆ ಅಥವಾ ಸೂಚಿಸದಿದ್ದರೆ, ರಾಜ್ಯ ಸರ್ಕಾರದ ಕಾರ್ಯನಿರ್ವಾಹಕ ಅಧಿಕಾರ ಬರುತ್ತದೆಯೇ ಅಥವಾ ಇಲ್ಲವೇ ಎಂದು ನ್ಯಾಯಪೀಠ ಕೇಳಿತು. ಕಳೆದ ಫೆಬ್ರವರಿ 5ರಂದು ಹೊರಡಿಸಿದ್ದ ಸರ್ಕಾರದ ಆದೇಶದಲ್ಲಿ ಇಸ್ಲಾಂ ಧರ್ಮದ ಹಿಜಾಬ್ ಅಥವಾ ಯಾವುದೇ ಧಾರ್ಮಿಕ ಪದ್ಧತಿ ಬಿಂಬಿಸುವ ವಸ್ತ್ರಗಳನ್ನು ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಧರಿಸಿಕೊಂಡು ಹೋಗಬಾರದು ಎಂದು ಆದೇಶ ತಂದಿತ್ತು.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿ ಎಂದು ಪಣ ತೊಟ್ಟಿದ್ದ ಉಮೇಶ್ ಕತ್ತಿ



ಆಂಧ್ರಪ್ರದೇಶ, ತೆಲಂಗಾಣದಂತೆ ನಮ್ಮ ರಾಜ್ಯದಲ್ಲೂ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿ ಎಂಬ ಬಗ್ಗೆ ಉಮೇಶ್ ಕತ್ತಿ ಕನಸು ಕಂಡಿದ್ದರು. ನಾನು ಸಿಎಂ ಆಗುವುದಾದರೆ ಅಖಂಡ ಕರ್ನಾಟಕದ ಸಿಎಂ ಆಗುತ್ತೇನೆ. ನನ್ನ ಹಣೆ ಬರಹದಲ್ಲಿ ಬರೆದಿದ್ದರೆ ನಾನು ಸಿಎಂ ಆಗುತ್ತೇನೆ. ಇರುವ 224 ಶಾಸಕರಲ್ಲಿ ನಾನೇ ಹಿರಿಯ ಶಾಸಕ. ನನಗೆ ಸಿಎಂ ಆಗುವ ಎಲ್ಲಾ ಅರ್ಹತೆ ಇದೆ ಎಂದು ತಾವು ಸಿಎಂ ಆಗುವ ಆಸೆಯನ್ನೂ ಹೊರ ಹಾಕಿದ್ದರು.

ಸಿಎಂ ಸ್ಥಾನಕ್ಕಾಗಿ ನಾನು ಪ್ರತ್ಯೇಕ ರಾಜ್ಯ ಕೇಳುತ್ತಿಲ್ಲ. ನನಗೆ ಅಖಂಡ ಕರ್ನಾಟಕದ ಸಿಎಂ ಆಗಬೇಕೆಂಬ ಬಯಕೆ ಇದೆ. ಪ್ರತ್ಯೇಕ ರಾಜ್ಯವಾದರೂ ಕೂಡ ನಾವು ಕನ್ನಡಿಗರೇ. ಆಂಧ್ರಪ್ರದೇಶ, ತೆಲಂಗಾಣ ರೀತಿಯಲ್ಲೇ ನಮ್ಮ ರಾಜ್ಯದಲ್ಲೂ ಪ್ರತ್ಯೇಕ ರಾಜ್ಯವಾಗಲಿ ಎಂದು ಬಯಸಿದ್ದೇನೆ. ನಮ್ಮ ಜನರ ದೃಷ್ಟಿಯಿಂದ ನಾನೇ ಹಿರಿಯನಾಗಿ ಧ್ವನಿ ಎತ್ತಿದ್ದೇನೆ ಎಂದು ಕತ್ತಿ ಹೇಳಿದ್ದರು. ನಮ್ಮ ಜನರ ದೃಷ್ಟಿಯಿಂದ ನಾನೇ ಹಿರಿಯನಾಗಿ ಧ್ವನಿ ಎತ್ತಿದ್ದೇನೆ. ಹೈಕಮಾಂಡ್ ಮಟ್ಟದಲ್ಲೂ ಹೊಸ ರಾಜ್ಯಗಳ ರಚನೆ ಬಗ್ಗೆ ಚಿಂತನೆ ನಡೆದಿದೆ ಎಂಬುದು ನನ್ನ ಅನಿಸಿಕೆ. ನಾನು ಮಾತಾಡಿದರೆ ಆ ವಿಚಾರ ಕೇಂದ್ರದ ಮಟ್ಟಕ್ಕೂ ಹೋಗುತ್ತದೆ. ಈ ಬಗ್ಗೆ ಪ್ರಧಾನಿ ಮೋದಿ, ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡುತ್ತೇನೆ ಎಂದು ಕೆಲ ತಿಂಗಳ ಹಿಂದೆ ಸಚಿವ ಕತ್ತಿ ಹೇಳಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂತಾಪ

ಅರಣ್ಯ ಸಚಿವ, ನನ್ನ ಆಪ್ತ ಸಹೋದ್ಯೋಗಿ ಉಮೇಶ್ ಕತ್ತಿ ಅವರ ಅಕಾಲಿಕ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಅವರ ನಿಧನದಿಂದ ರಾಜ್ಯ ಓರ್ವ ನುರಿತ ಮುತ್ಸದ್ದಿ, ಕ್ರಿಯಾಶೀಲ ಮುಖಂಡ, ನಿಷ್ಠಾವಂತ ಜನಸೇವಕನನ್ನು ಕಳೆದು ಕೊಂಡಿದೆ. ಅವರ ಅಗಲಿಕೆ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಟ್ವೀಟ್ ಮಾಡಿ ಸಂತಾಪ ಸೂಚಿಸಿದ್ದಾರೆ.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರಾದ ಉಮೇಶ್ ಕತ್ತಿ ಅವರ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಕುಟುಂಬವರ್ಗಕ್ಕೆ ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. **–ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ**

ರಾಜ್ಯಸರ್ಕಾರದ ಹಿರಿಯ ಸಚಿವರು, ನನ್ನ ಆಪ್ತರಾದ ಉಮೇಶ್ ಕತ್ತಿ ಅವರ ಅಕಾಲಿಕ ನಿಧನದ ಸುದ್ದಿ ತಿಳಿದು ದುಃಖಿತನಾಗಿದ್ದೇನೆ. ಅವರ ನಿಧನದಿಂದ ರಾಜ್ಯ ಓರ್ವ ನುರಿತ ಮುತ್ಸದ್ದಿ, ಕ್ರಿಯಾಶೀಲ ಹಾಗೂ ನಿಷ್ಠಾವಂತ ಜನಸೇವಕನನ್ನು ಕಳೆದು ಕೊಂಡಿದೆ. ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಆ ಭಗವಂತ ಅವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥನೆ ಮಾಡುತ್ತೇನೆ ಎಂದು ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ. **–ಡಿ.ವಿ.ಸದಾನಂದಗೌಡ, ಕೇಂದ್ರದ ಮಾಜಿ ಸಚಿವ.**

ಪಕ್ಷದ ಹಿರಿಯ ನಾಯಕರು, ರಾಜ್ಯ ಸಚಿವರಾದ ಉಮೇಶ್ ಕತ್ತಿಯವರ ನಿಧನದ ಸುದ್ದಿ ತಿಳಿದು ದುಃಖವಾಯಿತು. ದೇವರು ಅವರ ಕುಟುಂಬ ಹಾಗೂ ಅಪಾರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

–ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯಾಧ್ಯಕ್ಷ

ಹಿರಿಯ ಸಂಪುಟ ಸಹೋದ್ಯೋಗಿ ಉಮೇಶ್ ಕತ್ತಿ ಅವರ ಅಕಾಲಿಕ ನಿಧನ ತೀವ್ರ ದುಃಖ ತಂದಿದೆ. ರಾಜಕೀಯ ಹಾಗೂ ಜನಸೇವೆಯಲ್ಲಿ ಅಪಾರ ಅನುಭವ ಹೊಂದಿದ್ದ ನಾಯಕರನ್ನು ಕಳೆದುಕೊಂಡು ನಾಡು ಇಂದು ಬರಿದಾಗಿದೆ. ಭಗವಂತ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ನೀಡಲೆಂದು ಪ್ರಾರ್ಥಿಸುತ್ತೇನೆ. **–ಡಾ.ಸುಧಾಕರ್, ಆರೋಗ್ಯ ಸಚಿವ**

ಅರಣ್ಯ ಸಚಿವರು, ಹಿರಿಯ ನಾಯಕರಾದ ಉಮೇಶ್ ಕತ್ತಿ ಅವರ ಅಕಾಲಿಕ ನಿಧನದ ಸುದ್ದಿ ತಿಳಿದು ಅತೀವ ದುಃಖವಾಯಿತು. ಸಚಿವ ಸಂಪುಟದ ಹಿರಿಯ ಮಿತ್ರನನ್ನು ಕಳೆದುಕೊಂಡು ಶೋಕತಪ್ತನಾಗಿದ್ದೇನೆ. ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ಅವರ ಕುಟುಂಬವರ್ಗ ಹಾಗೂ ಹಿತೈಷಿಗಳಿಗೆ ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಓಂ ಶಾಂತಿ. ಸದ್ಗತಿ.

–ಡಾ.ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ.

ಪಕ್ಷದ ಹಿರಿಯ ನಾಯಕರು ಹಾಗೂ ಸಚಿವ ಉಮೇಶ್ ಕತ್ತಿ ಅವರ ಅಕಾಲಿಕ ನಿಧನ ತೀವ್ರ ಆಘಾತ, ಖೇದ ಉಂಟು ಮಾಡಿದೆ. ಅನುಭವಿ ರಾಜಕಾರಣಿ ಉಮೇಶ್ ಕತ್ತಿಯವರ ಸೇವೆಯನ್ನು ನಾಡು ಸದಾ ಸ್ಮರಿಸಲಿದೆ. ಅವರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ದೇವರು ಅವರ ಆಪ್ತರಿಗೆ ನೀಡಲಿಎಂದು ಪ್ರಾರ್ಥಿಸುತ್ತೇನೆ.

–ವಿ.ಸುನಿಲ್‌ಕುಮಾರ್, ಇಂಧನ ಸಚಿವ

ಬಾಯಿ ಮತ್ತು ಹೃದಯದ ಮಧ್ಯೆ ಫಿಲ್ಟರ್ ಇಲ್ಲದೆ, ಮನಸ್ಸಿಗೆ ಅನ್ನಿಸಿದ್ದನ್ನು ನೇರವಾಗಿ ಹೇಳುತ್ತಿದ್ದ ನೇರನುಡಿಯ ನಾಯಕ, ಸಚಿವ ಉಮೇಶ್ ಕತ್ತಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಭಾವಪೂರ್ಣ ಶ್ರದ್ಧಾಂಜಲಿ.

–ಪ್ರತಾಪ್ ಸಿಂಹ, ಮೈಸೂರು–ಕೊಡಗು ಸಂಸದ

ಮಾನ್ಯ ಅರಣ್ಯ ಸಚಿವರು ಹಾಗೂ ಬಿಜೆಪಿಯ ಹಿರಿಯ ನಾಯಕರಾದ ಶ್ರೀ ಉಮೇಶ್ ಕತ್ತಿಯವರ ಅಕಾಲಿಕ ಮರಣದ ವಿಚಾರ ತಿಳಿದು ಆಘಾತವಾಗಿದೆ. ನೇರ ವ್ಯಕ್ತಿತ್ವದ, ಸ್ನೇಹಜೀವಿಯಾಗಿದ್ದ ಕತ್ತಿಯವರ ನಿಧನ ಪಕ್ಷಕ್ಕೆ ತುಂಬಲಾರದ ನಷ್ಟ, ದೇವರು ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ. ಸದ್ಗತಿ. **–ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷ**

ಪರಿಶಿಷ್ಟರಿಗೆ 75 ಯೂನಿಟ್ ಉಚಿತ ವಿದ್ಯುತ್ ಪೂರೈಕೆ ನಿಲ್ಲಲ್ಲ

ಇಂಧನ ಸಚಿವ ಸುನೀಲ್‌ಕುಮಾರ್ ಸ್ಪಷ್ಟನೆ

ಬೆಂಗಳೂರು,ಸೆ.6(ಕೆಎಂಶಿ)–ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಕೆ ಇಲ್ಲ. ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 75 ಯೂನಿಟ್ ವಿದ್ಯುತ್ ಉಚಿತ ಮುಂದುವರೆಯಲಿದೆ ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ರೈತರಿಗೆ ನಿರಂತರ ವಿದ್ಯುತ್ ಕಲ್ಪಿಸಲು ಸರ್ಕಾರ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಅವರು ಬಳಸುವ ವಿದ್ಯುತ್‌ಗೆ ದರ ನಿಗದಿಪಡಿಸುವ ಪ್ರಶ್ನೆಯೇ ಇಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಸಿದ್ದರಾಮಯ್ಯ ಸರ್ಕಾರ ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸಿ, ವಿದ್ಯುತ್ ಪ್ರಸರಣ ನಿಗಮಗಳನ್ನೇ ಖಾಸಗೀಕರಣಗೊಳಿಸಲು ಮುಂದಾಗಿತ್ತು.

ಕಾಂಗ್ರೆಸ್ ಸರ್ಕಾರ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಇಂಧನ ಇಲಾಖೆಯನ್ನು ಖಾಸಗಿಯವರ ಮಡಿಲಿಗೆ ಹಾಕುತ್ತೆ. ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ವಿದ್ಯುತ್ ಕಂಪನಿಗಳಿಗೆ 3400 ಕೋಟಿ ರೂಪಾಯಿ, ಕರ್ನಾಟಕ ಪವರ್ ಕಾರ್ಪೋರೇಷನ್‌ಗೆ 5000 ಕೋಟಿ ರೂ.ಗಳಿಗಿಂತ ಹೆಚ್ಚು ಹಣವನ್ನು ಸರ್ಕಾರ ಬಾಕಿ ಉಳಿಸಿಕೊಂಡಿತ್ತು ಎಂದರು.

ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪೈಕಿ ಶೇಕಡಾ ನಲವತ್ತರಷ್ಟು ವಿದ್ಯುತ್ ಕೃಷಿ ಕ್ಷೇತ್ರಕ್ಕೆ ಬಳಕೆಯಾಗುತ್ತಿದೆ. ಕೈಗಾರಿಕಾ ಕ್ಷೇತ್ರಕ್ಕೆ ಶೇ.ಇಪ್ಪತ್ತರಷ್ಟು ವಿದ್ಯುತ್ ಒದಗಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಪರಿಶಿಷ್ಟ ಜಾತಿ, ವರ್ಗದ ಜನರಿಗೆ ಅಮೃತ ಜ್ಯೋತಿ ಯೋಜನೆಯಡಿ ತಲಾ 75 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುತ್ತಿದ್ದು, ಈ ವಿದ್ಯುತ್ ಪಡೆಯಲು ಅರ್ಜಿ ಹಾಕುವವರಿಗೆ ಇದ್ದ ಅಡೆ–ತಡೆಗಳನ್ನು ನಿವಾರಿಸಲು ಹಿಂದಿದ್ದ ನಿಯಮಾವಳಿಗಳ ಸುತ್ತೋಲೆಯನ್ನು ಹಿಂಪಡೆಯಲಾಗಿದೆ. ಅರ್ಜಿ ಹಾಕುವವರು ಸುವಿಧಾ ಎಂಬ ಹೆಸರಿನ ಆ್ಯಪ್ ಅನ್ನು ಬಳಸುವಂತೆ ನಿಯಮಾವಳಿಯಲ್ಲಿ ಹೇಳಲಾಗಿತ್ತು ಆದರೆ ಗ್ರಾಮಾಂತರ ಪ್ರದೇಶದ ಜನರು ಇದನ್ನು ಬಳಸಿ ಅರ್ಜಿ ಹಾಕುವುದು ಕಷ್ಟ ಎಂಬ ಕಾರಣಕ್ಕಾಗಿ ನಿಯಮಾವಳಿಗಳನ್ನು ಸರಳಗೊಳಿಸಲು ಸರ್ಕಾರ ಮುಂದಾಗಿದೆ

ಒಂದನೇ ಪುಟದಿಂದ

ಸಚಿವ ಉಮೇಶ್ ಕತ್ತಿ ಇನ್ನಿಲ್ಲ

ಆಗುವ ಕನಸು ಕಂಡಿದ್ದರು. ವಿಷಯ ತಿಳಿದ ಕೂಡಲೇ ಉಮೇಶ್ ಕತ್ತಿ ಅವರ ಸಹೋದರ ರಮೇಶ್ ಕತ್ತಿ, ಕುಟುಂಬಸ್ಥರು ಬೆಳಗಾವಿಯಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದಾರೆ. ಉಮೇಶ್ ಕತ್ತಿಯವರಿಗೆ ಈ ಹಿಂದೆಯೂ 2 ಬಾರಿ ಹೃದಯಾಘಾತವಾಗಿತ್ತು. ಸ್ಟಂಟ್ ಕೂಡ ಅಳವಡಿಸಲಾಗಿತ್ತು. ಇದೀಗ 3ನೇ ಬಾರಿ ಹೃದಯಾಘಾತ ಸಂಭವಿಸಿ ನಿಧನರಾಗಿದ್ದಾರೆ.



ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಸಚಿವರಾದ ಡಾ.ಸುಧಾಕರ್, ಆರ್.ಅಶೋಕ್, ಗೋವಿಂದ ಕಾರಜೋಳ, ಮುನಿರತ್ನ ಸೇರಿದಂತೆ ಶಾಸಕರು, ಅವರ ಅಭಿಮಾನಿಗಳು ಸಾಕಷ್ಟು ಮಂದಿ ಭೇಟಿ ನೀಡಿದ್ದರು. ಮೈಸೂರಲ್ಲಿ ವಾಸ್ತವ್ಯ ಹೂಡಿದ್ದ ಮಾಜಿ ಸಿಎಂ ಸಿದ್ದರಾಮಯ್ಯ ರಾತ್ರಿಯೇ ಬೆಂಗಳೂರಿಗೆ ವಾಪಸ್ಸಾದರು. ನಾಳೆ ಬೆಳಗ್ಗೆ 9 ಗಂಟೆಗೆ ಕತ್ತಿ ಪಾರ್ಥೀವ ಶರೀರವನ್ನು ಬೆಳಗಾವಿ ನಗರದ ಶಿವಬಸವನಗರದ ಅವರ ನಿವಾಸಕ್ಕೆ ಸ್ಥಳಾಂತರಿಸಲಾಗುತ್ತಿದೆ. ನಂತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಟ್ಟು, ಮಧ್ಯಾಹ್ನ 12 ಗಂಟೆ ನಂತರ ಸ್ವಗ್ರಾಮ ಬೆಲ್ಲದ ಬಾಗೇವಾಡಿಯಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ತದನಂತರ ಸಂಜೆ 5 ಗಂಟೆಗೆ ಬೆಳಗಾವಿ ಹೊರವಲಯದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. **ಮುಖ್ಯಮಂತ್ರಿ ಅಂತಿಮ ದರ್ಶನ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ರಾತ್ರಿ ಬೆಂಗಳೂರು ಪ್ರದಕ್ಷಿಣೆ ಹಮ್ಮಿಕೊಂಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸಚಿವ ಅಶ್ವತ್ಥ್ ನಾರಾಯಣ, ವಿ.ಸೋಮಣ್ಣ, ಮಾಜಿ ಡಿಸಿಎಂ ಲಕ್ಷ್ಮಣ್ ಸವದಿ ಅವರೊಂದಿಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಭೇಟಿ ನೀಡಿ, ಅಂತಿಮ ದರ್ಶನ ಪಡೆದಿದ್ದಲ್ಲದೆ, ಅಲ್ಲಿ ನೆರೆದಿದ್ದ ಪಕ್ಷದ ಮುಖಂಡರು ಹಾಗೂ ಕತ್ತಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಒಂದು ಹಂತದಲ್ಲಿ ಬೊಮ್ಮಾಯಿ ಕತ್ತಿ ಅವರ ಪಾರ್ಥೀವ ಶರೀರದ ಮುಂದೆ ಅತೀವ ದುಃಖದಿಂದ ಕಣ್ಣೀರು ಹಾಕಿದರು.

ಸೈಬರ್ ಸೆಕ್ಯೂರಿಟಿ ಅವಶ್ಯ

ಮಾಡಿಕೊಳ್ಳಬೇಕು. ಇದಕ್ಕೆ ಮೊದಲು ನಾವುಗಳು ಮಾನವ ವಿಜ್ಞಾನವನ್ನು ಅಧ್ಯಯನ ಮಾಡಿ, ಅರ್ಥ ಮಾಡಿಕೊಳುವುದು ಅವಶ್ಯವಾಗಿದೆ ಎಂದರು. 10 ವರ್ಷದ ಹಿಂದೆ ಸೈಬರ್ ಲಾ ಬಗ್ಗೆ ಮಾತನಾಡುತ್ತಲೇ ಇರಲಿಲ್ಲ. ಡಿಜಿಟಲೀಕರಣ ಬೆಳೆದಂತೆ ಭದ್ರತೆಯ ಅಗತ್ಯವೂ ಹೆಚ್ಚಾಗುತ್ತಿದೆ. ನಾನು ಗೃಹ ಮಂತ್ರಿಯಾಗಿದ್ದಾಗ ಎಪಿಎಂಸಿ ಖಾತೆಯಿಂದ 50 ಕೋಟಿ ರೂ., ಎಗರಿಸಲಾಗಿತ್ತು. ಕೂಡಲೇ ಎಚ್ಚೆತ್ತು ನಡೆಸಿದ ಕಾರ್ಯಾಚರಣೆಯಿಂದಾಗಿ ಸುಮಾರು 20–25 ಕೋಟಿ ರೂ.,ನಷ್ಟು ವಾಪಸ್ಸಾಗಿದ್ದು, ಇನ್ನೂ ತನಿಖೆಗಳು ನಡೆಯುತ್ತಲೇ ಇವೆ. ಪ್ರಪಂಚದಲ್ಲೇ ಬೃಹದಾಕಾರವಾಗಿ ಬೆಳೆದಿರುವ ಡಾರ್ಕ್ ವೆಬ್ ಬೇದಿಸುವ ತಂತ್ರಾಂಶವನ್ನು ಕಂಡು ಹಿಡಿದಿದ್ದು, ದೇಶದಲ್ಲಿಯೇ ಕರ್ನಾಟಕ ಪೋಲೀಸರು ಮಾತ್ರವೇ ಈ ಸಾಧನೆ ಮಾಡಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ.

ಮೈಸೂರು ರಾಜಮನೆತನದ ಕೊಡುಗೆ: ನಾಡಿಗೆ ಅಪಾರ ಕೊಡುಗೆ ನೀಡಿರುವ ಮೈಸೂರು ಸಂಸ್ಥಾನ ಪ್ರಸ್ತುತ ದಿನಗಳಲ್ಲಿಯೂ ಜನಪರವಾಗಿದೆ ಎಂಬುದಕ್ಕೆ ಸೈಬರ್‌ವರ್ಸ್ ಲ್ಯಾಬ್ ಸ್ಥಾಪನೆ ಪ್ರತ್ಯಕ್ಷ ಉದಾಹರಣೆಯಾಗಿದೆ. ಮುಂಬರುವ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಎದುರಾಗಬಹುದಾದ ಸೈಬರ್ ಅಪರಾಧ ಪ್ರಕರಣಗಳನ್ನು ಬೇಧಿಸಲು ಪೂರ್ವ ಸಿದ್ದತೆಯ ರೂಪದಲ್ಲಿ ಸೈಬರ್‌ವರ್ಸ್ ಲ್ಯಾಬ್ ಹಾಗೂ ಕಾಪ್ ಕನೆಕ್ಟ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೈಬರ್ ಸೆಕ್ಯೂರಿಟಿಯಲ್ಲಿ 3 ಟ್ರಿಲಿಯನ್ ವಹಿವಾಟು!: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ ಮಾತನಾಡಿ, ಡಿಜಿಟಲ್ ಪ್ರಪಂಚದಲ್ಲಿ ಸೈಬರ್ ಸೆಕ್ಯೂರಿಟಿಯಿಂದಲೇ 3 ಟ್ರಿಲಿಯನ್ ವಹಿವಾಟು ನಡೆಯುತ್ತಿದೆ. ವ್ಯಾಪಾರ–ವಹಿವಾಟುಗಳು ಡಿಜಿಟಲೀಕರಣವಾಗುತ್ತಿದ್ದು, ಮಾಹಿತಿ ಸಂರಕ್ಷಣೆ ಮಾಡುವುದು ಮುಖ್ಯವಾಗಿದ್ದು, ಸೈಬರ್ ಸೆಕ್ಯೂರಿಟಿ ಅಗತ್ಯವಾಗಿದೆ ಎಂದು ಹೇಳಿದರು.

ಮೈಸೂರಿನಲ್ಲಿ ಸ್ಥಾಪನೆಯಾಗಿರುವ ಸೈಬರ್‌ವರ್ಸ್ ಲ್ಯಾಬ್ ದೇಶದಲ್ಲಿಯೇ 8ನೇಯದ್ದಾಗಿದೆ. ಇಲ್ಲಿಯೇ ಸೆಮಿಕಂಡಕ್ಟರ್ ಘಟಕ ಸ್ಥಾಪನೆಯಾಗುತ್ತಿರುವ ಹಿನ್ನೆಲೆ ಮೈಸೂರು ದೇಶದ ಗಮನ ಸೆಳೆದಿದೆ. ಸೆಮಿಕಂಡಕ್ಟರ್ ಸ್ಥಾಪನೆಗಾಗಿ ರಾಜ್ಯ ಸರ್ಕಾರ 6000 ಕೋಟಿ ರೂ.ಗಳನ್ನು ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ಲೋಬಲ್ ಟೆಕ್ನಾಲಜಿ ಸೆಂಟರ್ ಸ್ಥಾಪನೆ ಮಾಡುವ ಉದ್ದೇಶವಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಸೈಬರ್‌ವರ್ಸ್ ಫೌಂಡೇಷನ್ ಸಲಹಾ ಮಂಡಳಿ ಅಧ್ಯಕ್ಷ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷರಾದ ತ್ರಿಷಿಕಾ ಕುಮಾರಿ ಒಡೆಯರ್, ಐಟಿ–ಬಿಟಿ ಮತ್ತು ಎಸ್‌ಟಿ ಇಲಾಖೆಯ ಎಸಿಎಸ್ ಡಾ.ಇ.ವಿ.ರಮಣ ರೆಡ್ಡಿ, ಕೆಡಿಇಎಂನ ಅಧ್ಯಕ್ಷ ಬಿ.ವಿ.ನಾಯ್ಡು, ಕೆಡಿಇಎಂನ ಸಿಇಓ ಸಂಜೀವ್ ಗುಪ್ತಾ ಮತ್ತಿತರರು ಉಪಸ್ಥಿತರಿದ್ದರು.

ಪತ್ರಕರ್ತರೊಂದಿಗೆ ವಾದಕ್ಕಿಳಿದ ಆಯೋಜಕರು...: 'ಸೈಬರ್‌ವರ್ಸ್ ಲ್ಯಾಬ್, ಕಾಪ್ ಕನೆಕ್ಟ್ ಅಪ್ಲಿಕೇಶನ್ ಮತ್ತು ಸೈಬರ್ ಹೈಜೀನ್' ಉದ್ಘಾಟನಾ ಕಾರ್ಯಕ್ರಮದ ವೇಳೆ ಆಯೋಜಕರು ಪತ್ರಕರ್ತರೊಂದಿಗೆ ವಾದಕ್ಕಿಳಿದ ಪ್ರಸಂಗ ನಡೆಯಿತು. ಸಭಾಂಗಣದಲ್ಲಿ ಸಾಕಷ್ಟು ಆಸನಗಳು ಖಾಲಿ ಇದ್ದರೂ ಸಭಾಂಗಣ ತುಂಬಿದೆ ಎಂದು ವಾದಿಸಿದ ಆಯೋಜಕರು, ಆಸನಗಳು ಖಾಲಿ ಇಲ್ಲವೆಂದು ಪತ್ರಕರ್ತರನ್ನು ಹೊರಗಡೆಯೇ ಗಂಟೆಗಟ್ಟಲೇ ನಿಲ್ಲಿಸಿದರು. ಕೂರಲು ಸ್ಥಳವಿಲ್ಲವಾದ ಮೇಲೆ ಆಹ್ವಾನ ನೀಡಿದ್ದಾದರೂ ಏಕೆ? ಎಂದು ಪತ್ರಕರ್ತರು ಪ್ರಶ್ನಿಸಿದ್ದಕ್ಕೆ ಹೊರಗಡೆಯೇ ಎಲ್‌ಇಡಿ ಸ್ಕ್ರೀನ್ ಅಳವಡಿಸಿಕೊಡಲಾಗುವುದು ಎಂದು ಸತಾಯಿಸಿದರು. ಬಳಿಕ ಹಲವು ಪತ್ರಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸದೆ ವಾಪಸ್ಸಾದರೆ, ಕೆಲವರು ಎಲ್‌ಇಡಿ ಸ್ಕ್ರೀನ್‌ನಲ್ಲಿ ಪ್ರಸಾರವಾಗುತ್ತಿದ್ದ ಆಡಿಯೋ ಕೇಳಿಕೊಂಡು ಕೂರುವಂತಾಯಿತು.

ಶಿಕ್ಷಕರು ಸರ್ವಪಲ್ಲಿ ರಾಧಾಕೃಷ್ಣನ್ ಹಾದಿಯಲ್ಲೇ ನಡೆಯಿರಿ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಸೆ.6– ಶಿಕ್ಷಕರು ದೇಶದ ಆಧಾರಸ್ತಂಭ. ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ಹೃದಯದಂತೆ ಕಾರ್ಯ ನಿರ್ವಹಿಸಬಲ್ಲರು. ವಿದ್ಯಾರ್ಜನೆಯಿಲ್ಲದೆ ದೇಶ, ಸಮಾಜ ಎಂದಿಗೂ ಮುಂದುವರೆಯಲಾಗದು. ಬದುಕನ್ನು ರೂಪಿಸುವ ಶಿಕ್ಷಣದ ಬಗ್ಗೆ ಮರುಚಿಂತನೆಯಾಗಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣ ಸಮೀಪದ ತಿರುಮಕೂಡಲಿನ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವವಾದುದು ಎಂಬುದನ್ನು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಈ ಹಿಂದೆಯೇ ತೋರಿಸಿ ಕೊಟ್ಟಿದ್ದಾರೆ. ಇಂದಿನ ಶಿಕ್ಷಕರು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹಾದಿಯಲ್ಲೇ ನಡೆಯಬೇಕು. ವಿದ್ಯಾರ್ಥಿಗಳು ರಾಷ್ಟ್ರದ ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯಲು ಮಾನವೀಯ ಮೌಲ್ಯವುಳ್ಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಶಿಕ್ಷಕರು ತಾವು ವಿದ್ಯಾರ್ಥಿಗಳಿಗೆ ಬೋಧಿಸುವುದಕ್ಕಿಂತಲೂ ಅಧಿಕ ಜ್ಞಾನ ಪಡೆದು ಪರಿಪೂರ್ಣರಾಗಿರಬೇಕು. ಪೂರ್ಣರೂಪದ ಶಿಕ್ಷಣವಿಲ್ಲದೆ ನಮ್ಮ ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತೆ ನೆರವೇರದು. ದೇಶಾದ್ಯಂತ ಇಂದು ಶಿಕ್ಷಣದ ಬಗ್ಗೆ ಜಾಗೃತಿ ಹೆಚ್ಚುತ್ತಿರುವುದು ದೇಶದ ಸರ್ವತೋಮುಖ ಅಭಿವೃದ್ಧಿಯ ಶುಭ ಸಂಗತಿಯಾಗಿದೆ. ಪ್ರಾಕೃತಿಕ ಸಂಪನ್ಮೂಲಗಳಿಲ್ಲದೆ ನಾವೇನೂ ಮಾಡುವಂತಿಲ್ಲ ಎಂದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಶಿಕ್ಷಕ ವೃತ್ತಿಯಂತಹ ಶ್ರೇಷ್ಠ ವೃತ್ತಿ ಮತ್ತೊಂದಿಲ್ಲ. ಶಿಕ್ಷಕ ವೃತ್ತಿಯಲ್ಲಿ ತ್ಯಾಗ ಮನೋಭಾವವಿರಬೇಕು. ಅದರಿಂದ ಮಾತ್ರ ಸಮಾಜ ಸುಧಾರಣೆಯಾಗಲಿದೆ. ಜ್ಞಾನದ ಹಸಿವನ್ನು ಇಂಗಿಸುವ ಪರಮೋಚ್ಚ ಶಕ್ತಿ ಶಿಕ್ಷಕರಲ್ಲಿದ್ದು ತಮ್ಮ ಜವಾಬ್ದಾರಿ ಅರಿತು ನಡೆದುಕೊಳ್ಳಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಒಬ್ಬ ವ್ಯಕ್ತಿಯ ಜೀವನದ ಪ್ರತಿ ಹಂತದಲ್ಲೂ ಒಬ್ಬ ಗುರು ಇರುತ್ತಾನೆ. ಬಾಲ್ಯದಲ್ಲಿ ತಾಯಿ–ತಂದೆ, ಪ್ರೌಢಾವಸ್ಥೆಯಲ್ಲಿ ಶಾಲಾ ಶಿಕ್ಷಕ ಮತ್ತು ಗಂಡ–ಹೆಂಡತಿ, ವೃದ್ಧಾಪ್ಯದಲ್ಲಿ ಮಕ್ಕಳು ಮತ್ತು ಪುಸ್ತಕಗಳು ವ್ಯಕ್ತಿಗೆ ಶಿಕ್ಷಕ ಆಗಿರುತ್ತವೆ. ಗುರುವಿನಿಂದ ಕಲಿತ ಶಿಕ್ಷಣವನ್ನು ಸಮಾಜದ ಏಳಿಗೆಗೆ ಬಳಸಬೇಕು ಎಂದರು.

> ಗುರುವಿನಿಂದ ಕಲಿತ ಪಾಠ ವ್ಯರ್ಥವಾಗದೆ ಮತ್ತಷ್ಟು ಜನರಿಗೆ ಮಾರ್ಗದರ್ಶಕವಾದರೆ ಕಲಿಸಿದ ಶಿಕ್ಷಕ ಧನ್ಯ. ಹಾಗಾಗಿ ಶಿಕ್ಷಣದ ಮೌಲ್ಯವನ್ನು ವಿದ್ಯಾರ್ಥಿಗಳು ಮನನ ಮಾಡಿಕೊಳ್ಳಬೇಕು.
> - **ಮರಿಸ್ವಾಮಿ,** ಕ್ಷೇತ್ರ ಶಿಕ್ಷಣಾಧಿಕಾರಿ.

ಕಾರ್ಯಕ್ರಮದಲ್ಲಿ ಕ್ರೀಡಾಕೂಟದಲ್ಲಿ ವಿಜೇತರಾದ ಹಾಗೂ ಬಿಇಓ ಮರಿಸ್ವಾಮಿ ಸೇರಿದಂತೆ ಉತ್ತಮ ಶಿಕ್ಷಕರನ್ನು ಸನ್ಮಾನಿಸಲಾಯಿತು. ತಹಶೀಲ್ದಾರ್ ಸಿ.ಜಿ.ಗೀತಾ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಬಿಇಓ ಮರಿಸ್ವಾಮಿ, ಪುರಸಭಾಧ್ಯಕ್ಷ ಮದನ್‌ರಾಜ್, ಉಪಾಧ್ಯಕ್ಷೆ ನಾಗರತ್ನ, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ತಾಪಂ ಇಓ ಕೃಷ್ಣ, ಕರೋಹಟ್ಟಿ ಪ್ರಭುಸ್ವಾಮಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾದಪ್ಪ, ಉಪಾಧ್ಯಕ್ಷ ಟಿ.ಎನ್.ನಾಗೇಂದ್ರ, ಬಿಆರ್‌ಸಿ ನಾಗೇಶ್, ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಮದ್ದಾನಪ್ಪ, ಚಿನ್ನಸ್ವಾಮಿ, ಪ್ರಸಾದ್, ಕಾರ್ಯದರ್ಶಿ ಪುಟ್ಟಸ್ವಾಮಿ, ಟಿಪಿಟಿ ನಾಗರಾಜು, ಚಿನ್ನಸ್ವಾಮಿ, ಸೊಸ್ಲೆ ನಾಗೇಶ್ ಇತರರಿದ್ದರು.

ಹುಣಸೂರು ನೂತನ ಪೌರಾಯುಕ್ತರಿಂದ ಅಧಿಕಾರ ಸ್ವೀಕಾರ



ಹುಣಸೂರು, ಸೆ.6– ಇಲ್ಲಿನ ನಗರಸಭೆ ನೂತನ ಪೌರಾಯುಕ್ತ ಕಲೀಲ್‌ಸಾಬ್ ಮಂಗಳವಾರ ಬೆಳಗ್ಗೆ ಅಧಿಕಾರ ಸ್ವೀಕರಿಸಿದರು.

ಈ ಹಿಂದೆ ನಗರಸಭೆಯಲ್ಲಿ ಪೌರಾಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಪರಿಸರ ಇಂಜಿನಿಯರ್ ಅವರನ್ನು ಮೂಲ ಸ್ಥಾನಕ್ಕೆ ವರ್ಗಾವಣೆ ಮಾಡಿ, ಖಾಲಿಯಾದ ಸ್ಥಾನಕ್ಕೆ ಬೆಂಗಳೂರಿನ ಪೌರಾಡಳಿತ ನಿರ್ದೇಶನಾಲಯದ ಯೋಜನಾ ವಿಭಾಗದ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರೇಡ್–2 ಶ್ರೇಣಿಯ ಖಲೀಲ್ ಸಾಬ್ ಅವರನ್ನು ಹುಣಸೂರಿನ ನಗರಸಭೆ ಪೌರಾಯುಕ್ತ ರನ್ನಾಗಿ ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್ ಆದೇಶ ಹೊರಡಿಸಿದ್ದರು. ನೂತನ ಪೌರಾಯುಕ್ತ ಖಲೀಲ್ ಸಾಬ್ ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ವರದಿ ಮಾಡಿಕೊಂಡು ಮಂಗಳವಾರ ಹುಣಸೂರು ನಗರಸಭೆಗೆ ಆಗಮಿಸಿ ಕೆ.ಪಿ.ರವಿಕುಮಾರ್ ಅವರಿಂದ ಅಧಿಕಾರ ಸ್ವೀಕರಿಸಿದರು.

ನೇಮಕ



ತಿ.ನರಸೀಪುರ, ಸೆ.6– ಭಾರತೀಯ ಜನತಾ ಪಾರ್ಟಿ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರನ್ನಾಗಿ ಎಸ್.ಮಹೇಶ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರಹೊಳೆಯಲ್ಲಿ ಚಿಣ್ಣರ ವನದರ್ಶನಕ್ಕೆ ಚಾಲನೆ



ಹನಗೋಡು, ಸೆ.6– ಅರಣ್ಯ ಇಲಾಖೆಯ ಚಿಣ್ಣರ ವನದರ್ಶನ ಕಾರ್ಯಕ್ರಮಕ್ಕೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ವೀರನಹೊಸಹಳ್ಳಿ ವನ್ಯಜೀವಿ ವಲಯದ ಬಳಿ ಚಾಲನೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ವಲಯ ಅರಣ್ಯಾಧಿಕಾರಿ ನಮನ್ ನಾರಾಯಣ ನಾಯಕ, ಚಿಣ್ಣರು ಕಾಡಿನಲ್ಲಿ ಹೋಗುವಾಗ ಶಾಂತರಾಗಿ ಪ್ರಾಣಿಗಳ ವೀಕ್ಷಣೆಗೆ ಹೆಚ್ಚಿನ ಮಹತ್ವ ನೀಡಬೇಕು. ಅಲ್ಲದೇ ವನದಲ್ಲಿರುವ ಜೀವ ವೈವಿಧ್ಯತೆ ಮಹತ್ವ ತಿಳಿದುಕೊಳ್ಳಬೇಕು ಎಂದರು.

ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಶ್ರೀನಿವಾಸಮೂರ್ತಿ ಮಾತನಾಡಿ, ಪರಿಸರ ಪರ್ಯಟನೆ ಕಾರ್ಯಕ್ರಮಕ್ಕೆ ಇಲಾಖೆಯವರು ಸಂಪೂರ್ಣ ಸಹಕಾರ ನೀಡಿದ್ದು, ಇಲಾಖೆಯು ಚಿಣ್ಣರ ವನ ದರ್ಶನ ಯೋಜನೆಯನ್ನು ಶಾಲೆಯ ಸುವರ್ಣ ಪರಿಸರ ಪರ್ಯಟನೆಗೆ ಜೋಡಿಸಿಕೊಟ್ಟಿದ್ದು ಉತ್ತಮ ಕಾರ್ಯ ಎಂದರು. ವಲಯರಣ್ಯಾಧಿಕಾರಿ ಸತೀಶ್, ಉಪ ವಲಯ ಅರಣ್ಯಾಧಿಕಾರಿ ಚಂದ್ರೇಶ್, ಪರಿಸರವಾದಿ ಗೋಪಿ, ಅರಣ್ಯ ರಕ್ಷಕ ಶಿವಣ್ಣ, ಸುರೇಶ್, ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಭೇಟಿ, ಸಾಂತ್ವನ



ಮಲ್ಲುಂಡಿ, ಸೆ.6– ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದ ರೈತ ಮಹದೇವಸ್ವಾಮಿ ಅವರ ಮನೆಗೆ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.


ಬಳಿಕ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಹಿತ ಕಾಯುವಲ್ಲಿ ವಿಫಲವಾಗಿವೆ. ರಾಜ್ಯ ಸರ್ಕಾರದ ವೈಫಲ್ಯದಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಗಳು ರೈತಪರ ಯೋಜನೆಗಳನ್ನು ಜಾರಿಗೊಳಿಸಿ ರೈತರಿಗೆ ಬೆಂಬಲ ನೀಡಬೇಕು ಎಂದು ಆಗ್ರಹಿಸಿದರು.

ಇತ್ತೀಚಿನ ದಿನಗಳಲ್ಲಿ ಸತತವಾಗಿ ಬೀಳುತ್ತಿರುವ ಮಳೆಯಿಂದ ರೈತರು ಬೆಳೆದ ಬೆಳೆಗಳು ನಾಶವಾಗಿದೆ. ಇದಕ್ಕೆ ಸರ್ಕಾರ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದ ಅವರು, ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೂ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಮೃತ ರೈತನ ಕುಟುಂಬದವರಿಗೆ 25 ಸಾವಿರ ನೆರವು ನೀಡಿದರು. ಈ ವೇಳೆ ಮುಖಂಡರಾದ ದೇವನೂರು ಮಹದೇವಪ್ಪ, ನಟರಾಜು, ಸುನಿ, ಹುರ ರುದ್ರ, ಶಿರಮಳ್ಳಿ ಗುರುಸ್ವಾಮಿ, ಕೂಸಪ್ಪ, ಬಸವರಾಜ್, ಗುರುಸ್ವಾಮಿ ಸೇರಿದಂತೆ ಇತರರಿದ್ದರು.



ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರತಿಭಾ ಕಾರಂಜಿ ನಡೆಯಿತು. ಕಾರ್ಯಕ್ರಮವನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ಮಂಜುಳಾ ಚಂದ್ರಗೌಡ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷೆ ಮೀನಾ ಕುಮಾರಿ ವಹಿಸಿದ್ದರು. ಈ ವೇಳೆ ಉಪ ಪ್ರಾಂಶುಪಾಲ ರೇವಣ್ಣ, ಉಪಾಧ್ಯಕ್ಷೆ ಸೌಮ್ಯಾ, ಶಿಕ್ಷಕ ಪರಮಶಿವಯ್ಯ, ಎಸ್‌ಡಿಎಂಸಿ ನಿರ್ದೇಶಕರಾದ ಬಿ.ಸಿ.ರಾಜೇಂದ್ರ, ನಾರಾಯಣಗೌಡ, ಶಿಕ್ಷಕರಾದ ಗೊರಳ್ಳಿ ಜಗದೀಶ್, ಕೆಂಪಣ್ಣ, ಮಮತಾ ನಾಯಕ, ಜ್ಯೋತಿ ನಿಂಗರಾಜು ಹಾಗೂ ಬೆಟ್ಟದಪುರದ ಕ್ಲಸ್ಟರ್ ಮಟ್ಟದ ಪ್ರೌಢಶಾಲೆ ಮುಖ್ಯ ಶಿಕ್ಷಕರು, ಮಕ್ಕಳು ಭಾಗವಹಿಸಿದ್ದರು,

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ನಂಜನಗೂಡು, ಸೆ.6– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಂಜನಗೂಡಿನ ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದ ಕಾರ್ಯಕರ್ತರು ನಗರದ ಎಲ್‌ಐಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಒಕ್ಕೂಟದ ಅಧ್ಯಕ್ಷ ಕೆಂಪೇಗೌಡ ಮಾತನಾಡಿ, ಪಾಲಿಸಿಗಳ ಮೇಲಿನ ಬೋನಸ್ ಹೆಚ್ಚಿಸಬೇಕು. ಪಾಲಿಸಿಗಳ ಸಾಲದ ಬಡ್ಡಿದರ ಕಡಿಮೆ ಮಾಡಬೇಕಿದೆ. ಕಚೇರಿಗಳಲ್ಲಿ ಗ್ರಾಹಕರಿಗೆ ದಕ್ಷತೆಯ ಸೇವೆ ನೀಡಬೇಕು. ಪ್ರತಿನಿಧಿಗಳ ಗ್ರೂಪ್ ಇನ್ಸೂರೆನ್ಸ್ 20 ಲಕ್ಷಕ್ಕೆ ಏರಿಸಬೇಕು. ಗ್ರಾಚ್ಯುಟಿ 10 ಲಕ್ಷಕ್ಕೆ ಹೆಚ್ಚಿಸಬೇಕು. ಪ್ರತಿನಿಧಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಲ ನೀಡಬೇಕು. ಗುಂಪು ವಿಮೆ ಹೆಚ್ಚಿಸಬೇಕು. ಅವಧಿ ವಿಮೆ ಹೆಚ್ಚಿಸಬೇಕು. ಗೃಹ ಸಾಲ ಹೆಚ್ಚಿಸಿ ಬಡ್ಡಿದರ ಕಡಿಮೆ ಮಾಡಬೇಕು. ಗುಂಪು ಆರೋಗ್ಯ ವಿಮೆ ಹೆಚ್ಚಿಸಬೇಕು ಹಾಗೂ ಪ್ರತಿನಿಧಿಗಳ ಕುಟುಂಬಕ್ಕೂ ಆರೋಗ್ಯ ವಿಮೆ ನೀಡಬೇಕು ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹಿರಿಯ ಪ್ರತಿನಿಧಿ ಮಾದೇಗೌಡ, ವಿಭಾಗೀಯ ಮಟ್ಟದ ಐಸಿಸಿ ಸದಸ್ಯ ಹೆಚ್.ಆರ್.ಶಿವಕುಮಾರ್, ಗುರುಸಿದ್ಧಾಚಾರಿ, ಸೋಮಸುಂದರ್, ಉಪಾಧ್ಯಕ್ಷ ಬಿ.ಆರ್.ಚಿಕ್ಕಣ್ಣ, ನಾಗೇಂದ್ರ ಪ್ರಸಾದ್, ಗಣೇಶ್ ಮೂರ್ತಿ, ಶಶಿಕಲಾ, ಶ್ರೀವಳ್ಳಿ, ಪೂರ್ಣಿಮಾ, ಶೈಲಜಾ, ಸುಗುಣ, ಪುಷ್ಪಲತಾ, ಮಾದಪ್ಪ, ನಿಜಲಿಂಗಪ್ಪ, ಈರೇಗೌಡ, ಶಂಕರ್, ನಾಗರಾಜ್, ಈಶ್ವರ ಸೇರಿದಂತೆ ಇನ್ನಿತರರಿದ್ದರು.

ತಾಲೂಕು ಕಚೇರಿಗೆ ಇಲಾಖೆಗಳ ಸ್ಥಳಾಂತರಿಸುವಂತೆ ಪ್ರತಿಭಟನೆ



ತಿ.ನರಸೀಪುರ, ಸೆ.6– ಖಾಸಗಿ ಕಟ್ಟಡದಲ್ಲಿರುವ ವಿವಿಧ ಇಲಾಖೆಗಳನ್ನು ತಾಲೂಕು ಕಚೇರಿ ಸಂಕೀರ್ಣಕ್ಕೆ ಸ್ಥಳಾಂತರಿಸುವಂತೆ ಆಗ್ರಹಿಸಿ ಪಟ್ಟಣದಲ್ಲಿ ಮಂಗಳವಾರ ದಸಂಸ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ತಾಲೂಕಿನ ಎಲ್ಲಾ ಇಲಾಖೆಗಳನ್ನು ತಾಲೂಕು ಕಚೇರಿ ಸಂಕೀರ್ಣಕ್ಕೆ ಸ್ಥಳಾಂತರ ಮಾಡುವಂತೆ ಒತ್ತಾಯಿಸಿದರು.

ದಸಂಸ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರಮೂರ್ತಿ ಮಾತನಾಡಿ, ತಾಲೂಕಿನ ಹಲವು ಇಲಾಖೆ ಅಧಿಕಾರಿಗಳು ಭ್ರಷ್ಟಾಚಾರ ಎಸಗುವ ದುರುದ್ದೇಶದಿಂದ ತಮ್ಮ ಕಚೇರಿಗಳನ್ನು ತಾಲೂಕು ಕಚೇರಿಗೆ ಸ್ಥಳಾಂತರ ಮಾಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

12 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ತಾಲೂಕು ಕಚೇರಿ ಸಂಕೀರ್ಣ ಕಳೆದ 7 ವರ್ಷಗಳ ಹಿಂದೆಯೇ ಕಾರ್ಯಾರಂಭ ಮಾಡಿದೆ. ಆದರೆ, ಲಂಚಗುಳಿತನಕ್ಕೆ ಬಲಿಯಾಗಿರುವ ತಾಲೂಕಿನ ಅಬಕಾರಿ, ಶಿಶು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆಗಳು ಮತ್ತು ಹಲವು ಇಲಾಖೆಗಳು ಖಾಸಗಿ ವ್ಯಕ್ತಿಗಳಿಗೆ ಹಣ ಮಾಡಿಕೊಡುವ ಉದ್ದೇಶದಿಂದ ತಮ್ಮ ಕಚೇರಿಗಳನ್ನು ಸ್ಥಳಾಂತರ ಮಾಡಲು ಹಿಂದೇಟು ಹಾಕುತ್ತಿವೆ ಎಂದು ಕಿಡಿಕಾರಿದರು.

ಮಿನಿ ವಿಧಾನಸೌಧದಲ್ಲಿ ಹಲವು ಕೊಠಡಿಗಳು ಖಾಲಿ ಇದ್ದರೂ ಸಹ ಕಚೇರಿಗಳನ್ನು ಸ್ಥಳಾಂತರ ಮಾಡದೆ ಖಾಸಗಿ ಕಟ್ಟಡಗಳಲ್ಲೇ ಕಾರ್ಯ ನಿರ್ವಹಿಸುತ್ತಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಈ ಇಲಾಖೆಗಳು ಕಳೆದ 15 ವರ್ಷಗಳಿಂದ ಮಾಸಿಕ 15 ಸಾವಿರಕ್ಕೂ ಹೆಚ್ಚು ಬಾಡಿಗೆಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡುವ ಮುಖೇನ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿವೆ ಎಂದು ಆರೋಪಿಸಿದರು.

ಹಲವು ಇಲಾಖೆಗಳು ತಾಲೂಕು ಕಚೇರಿಗೆ 15 ದಿನಗಳಲ್ಲಿ ಕಚೇರಿ ಸ್ಥಳಾಂತರ ಮಾಡದಿದ್ದಲ್ಲಿ ದಸಂಸ ತಾಲೂಕು ಆಡಳಿತ ಮತ್ತು ಸಂಬಂಧಪಟ್ಟ ಇಲಾಖೆ ಎದುರು ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಗೆಜ್ಜಿಗನಹಳ್ಳಿ ಜಯರಾಮ, ಕೆಂಪರಾಜು, ಮೂಗೂರು ಚೇತನ್, ಪ್ರತಾಪ್, ಮಹದೇವಸ್ವಾಮಿ, ಕುಮಾರ್, ನಾರಾಯಣ, ಮಹದೇವಸ್ವಾಮಿ, ಮಲ್ಲಯ್ಯ ಇತರರಿದ್ದರು.

ಪ್ರತಿ ವ್ಯಕ್ತಿಯ ಯಶಸ್ಸಿನ ಹಿಂದೆ ಗುರುಗಳ ಆಶೀರ್ವಾದ ಇರುತ್ತದೆ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಕೆ.ಮಹದೇವ್



ಪಿರಿಯಾಪಟ್ಟಣ, ಸೆ.6– ಪ್ರತಿ ವ್ಯಕ್ತಿಯ ಯಶಸ್ಸಿನ ಹಿಂದೆ ಗುರುಗಳ ಆಶೀರ್ವಾದ ಇರುತ್ತದೆ ಎಂದು ಶಾಸಕ ಕೆ.ಮಹದೇವ್ ಎಂದರು.

ಪಟ್ಟಣದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಗುರುವಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಶಿಕ್ಷಣ ಕ್ಷೇತ್ರದ ಮಹಾನ್ ಶಿಲ್ಪಿ ಡಾ.ಎಸ್.ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ. ಆದರೆ ಇಂತಹ ಮಹಾನ್ ಪುರುಷರ ಆದರ್ಶಗಳನ್ನು ಶಿಕ್ಷಕರು ಪಾಲಿಸದಿದ್ದರೇ ಇಂತಹ ಸಮಾರಂಭಗಳು ಅರ್ಥಹೀನ ಎಂದರು.

ತಾಲೂಕಿನಲ್ಲಿ ಗುರುಭವನಕ್ಕೆ ಚಾಲನೆ ನೀಡಲಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗುತ್ತದೆ. ತಾಲೂಕಿನ ಶಿಕ್ಷಕರ ವೇತನ ತಾರತಮ್ಯ ಸಮಸ್ಯೆ ಬಗ್ಗೆ ವಿಧಾನಸಭೆಯಲ್ಲಿ ಚರ್ಚಿಸಿ ಬಗೆಹರಿಸಿರುವುದಾಗಿ ತಿಳಿಸಿದರು.

ಆದಿಚುಂಚನಗಿರಿ ವಿವಿ ಡೀನ್ ಎ.ಟಿ.ಶಿವರಾಂ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಎಷ್ಟೇ ಸೇವೆ ಮಾಡಿದರೂ ನಮಗೆ ತೃಪ್ತಿ ಸಿಗುವುದಿಲ್ಲ. ಕಾರಣ ತಪ್ಪುಗಳನ್ನು ತಿದ್ದುವ ಮನೋವೃತ್ತಿ ಇದಾಗಿದೆ. ಹಿಂದಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆ, ಮೌಲ್ಯ ಅತ್ಯಂತ ಗುಣಮಟ್ಟದ್ದಾಗಿತ್ತು. ಇಂದು ಶಿಕ್ಷಕರು ಪ್ರಾಮಾಣಿಕತೆಯ ಆತ್ಮಾವಲೋಕನ ಮಾಡಿಕೊಳ್ಳುವ ಮೂಲಕ ಶಿಕ್ಷಕರು ತಮ್ಮ ಶಿಕ್ಷಣದ ಮೌಲ್ಯ ಗುರುತಿಸಿಕೊಳ್ಳಬೇಕಾಗಿದೆ ಎಂದರು.

ಶಿಕ್ಷಕರಿಗೆ ಸಮಯ ಪ್ರಜ್ಞೆ ಅತ್ಯಂತ ಮುಖ್ಯವಾಗಿದ್ದು, ವಿಷಯ ಮಂಡನೆ ಕ್ರಿಯೇಟಿವಿಟಿ, ಕಮ್ಯೂನಿಕೇಶನ್ ಹಾಗೂ ಸ್ವೀಕರಿಸುವ ಗುಣಗಳ ಬಗ್ಗೆ ಹಿಡಿತವಿದ್ದಾಗ ಮಾತ್ರ ಒಬ್ಬ ಶಿಕ್ಷಕ ಅತ್ಯಂತ ಕ್ರಿಯಾಶೀಲರಾಗಿ ಕೆಲಸ ಮಾಡಲು ಸಾಧ್ಯ. ದೇಶದ ಅನೇಕ ವ್ಯವಸ್ಥೆಗಳಲ್ಲಿ ಮನುಷ್ಯ ಏನನ್ನಾದರೂ ಕಟ್ಟಬಹುದು. ಆದರೆ ಮನಸ್ಸುಗಳ ಮಧ್ಯೆ ಮನಸ್ಸುಗಳನ್ನು ಕಟ್ಟಲು ಸಾಧ್ಯವಿಲ್ಲ. ಅದನ್ನು ಶಿಕ್ಷಕ ಮಾತ್ರ ಕಟ್ಟಲು ಸಾಧ್ಯ ಎಂದರು.

ಈ ವೇಳೆ ನಿವೃತ್ತ ಶಿಕ್ಷಕರನ್ನು ಶಾಸಕ ಮಹದೇವ್ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ತಹಸೀಲ್ದಾರ್ ಚಂದ್ರಮೌಳಿ, ಬಿಇಓ ಬಸವರಾಜ, ತಾಪಂ ಇಓ ಸಿ.ಆರ್.ಕೃಷ್ಣ ಕುಮಾರ್, ಕ್ಷೇತ್ರ ಸಮನ್ವಯಾಧಿಕಾರಿ ಶಿವರಾಜು, ದೈಹಿಕ ಶಿಕ್ಷಣ ಪರಿವೀಕ್ಷಕ ಶಿವಯ್ಯ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಜಯ್ಯ, ಪುರಸಭಾಧ್ಯಕ್ಷ ಮಹೇಶ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಪಿ.ಸಿ.ಕೃಷ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ.ಎನ್.ರವಿ, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ ವಿಭಾಗೀಯ ಉಪಾಧ್ಯಕ್ಷ ಎಂ.ಕೆ.ಪ್ರಕಾಶ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಾಮಚಂದ್ರ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮೋಹನ್ ಕುಮಾರ್, ಉಪಾಧ್ಯಕ್ಷ ಧರ್ಮಪಾಲ್, ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಮೂರ್ತಿ, ಕಸಪಾ ಅಧ್ಯಕ್ಷ ನವೀನ್ ಕುಮಾರ್, ಅನುದಾನಿತ ಶಾಲಾ ನೌಕರರ ಸಂಘದ ಅಧ್ಯಕ್ಷ ಆರಾಧ್ಯ ಕಿಶೋರ್, ಪುರ ಸಭಾ ಸದಸ್ಯರಾದ ಮಂಜುಳಾ ರಾಜ್, ನಳಿನಿ ಗೌಡ, ಟಿಎಪಿಸಿಎಂಎಸ್ ನಿರ್ದೇಶಕಿ ಸುನೀತಾ, ರಘುನಾಥ್ ಸೇರಿದಂತೆ ಶಿಕ್ಷಣ ಇಲಾಖೆ ಬಿಆರ್‌ಪಿಗಳು, ಬಿಐಇಆರ್‌ಟಿ, ಸಿಆರ್‌ಪಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸಿಬ್ಬಂದಿ, ಶಿಕ್ಷಕ ವೃಂದ ಹಾಜರಿದ್ದರು.

ಕಪಿಲಾ ನದಿಗೆ ಹಾರಿ ರೈತ ಆತ್ಮಹತ್ಯೆ



ನಂಜನಗೂಡು, ಸೆ.6– ದಾಯಾದಿಗಳ ಚುಚ್ಚು ಮಾತಿನಿಂದ ಮನನೊಂದು ರೈತರೊಬ್ಬರು ನಗರದ ಕಪಿಲಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಜ್ಜಿಗೆ ಸೇತುವೆ ಬಳಿ ಮಂಗಳವಾರ ನಡೆದಿದೆ.

ತಾಲೂಕಿನ ಸಿಂಧುವಳ್ಳಿ ಗ್ರಾಮದ ಚಿಕ್ಕಮಾದನಾಯಕ(75) ಆತ್ಮಹತ್ಯೆ ಮಾಡಿಕೊಂಡವರು. ಇವರು ಕಪಿಲಾ ನದಿಯ ಹೆಜ್ಜಿಗೆ ಸೇತುವೆ ಬಳಿ ತಮ್ಮ ಚಪ್ಪಲಿ, ಹಿರಿಯ ನಾಗರಿಕರ ಗುರುತಿನ ಚೀಟಿ, ಟವೆಲ್, ದೂರವಾಣಿ ಸಂಖ್ಯೆಗಳನ್ನು ಒಳಗೊಂಡ ಪುಸ್ತಕವನ್ನು ಸೇತುವೆ ಮೇಲಿಟ್ಟು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ ವಾರ ತಮ್ಮ ಅನಾದಿ ಕಾಲದ ಮನೆ ಧಾರಾಕಾರ ಮಳೆ, ಗಾಳಿಗೆ ಸಿಲುಕಿ ಕುಸಿದು ಬಿದ್ದಿತ್ತು. ಈ ಸಂಬಂಧ ತಹಸೀಲ್ದಾರ್ ಎಂ.ಶಿವಮೂರ್ತಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಪರಿಹಾರ ಒದಗಿಸುವ ಭರವಸೆ ನೀಡಿದ್ದರು. ಇದನ್ನು ಸಹಿಸದ ದಾಯಾದಿಗಳು ಸರ್ಕಾರದ ಹಣ ಪಡೆಯುವ ಉದ್ದೇಶದಿಂದ ಮನೆಯನ್ನು ತಾವೇ ಕೆಡವಿ ಬೀಳಿಸಿದ್ದಾರೆ. ಗಾಳಿ ಮಳೆಯಿಂದ ಅದು ಕುಸಿದು ಬಿದ್ದಿಲ್ಲ ಎಂದು ತಹಸೀಲ್ದಾರ್‌ಗೆ ತಪ್ಪು ಸಂದೇಶ ನೀಡಿದ್ದರು ಎನ್ನಲಾಗಿದೆ. ಈ ಸಂಬಂಧ ಎರಡೂ ಕುಟುಂಬಗಳ ನಡುವೆ ಗಲಾಟೆ ನಡೆದಿತ್ತು. ಅಲ್ಲದೇ ರೈತ ಚಿಕ್ಕಮಾದನಾಯಕ ವಿರುದ್ಧ ಅಪಪ್ರಚಾರ ಮಾಡಿ ಅವಮಾನ ಮಾಡಿದ್ದರಿಂದ ಮನನೊಂದ ಅವರು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬಸ್ಥರು ನಂಜನಗೂಡು ಗ್ರಾಮಾಂತರ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕೋಟೆಯಲ್ಲಿ ನುಲಿಯ ಚಂದಯ್ಯ ಜಯಂತಿ



ಹೆಚ್.ಡಿ.ಕೋಟೆ, ಸೆ.6– ಪಟ್ಟಣದ ತಾಲೂಕು ಕಚೇರಿಯಲ್ಲಿ ನುಲಿಯ ಚಂದಯ್ಯ ಅವರ 915ನೇ ಜಯಂತಿಯನ್ನು ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ಅಧ್ಯಕ್ಷರೂ ಆದ ತಹಸೀಲ್ದಾರ್ ರತ್ನಾಂಬಿಕಾ ಅವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನಾ ನುಲಿಯ ಚಂದಯ್ಯ ಅವರ ಭಾವಚಿತ್ರವನ್ನು ಪಟ್ಟಣದ ವರದರಾಜಸ್ವಾಮಿ ದೇವಾಲಯದಿಂದ ತಾಲೂಕು ಕಚೇರಿವರೆಗೆ ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕುಳುವ ಸಮಾಜದ ರಾಜ್ಯಾಧ್ಯಕ್ಷ ಶಿವನಂಜ ಭಜಂತ್ರಿ, ಅಖಿಲ ಭಾರತ ಕುಳುವ ಸಮಾಜದ ಪ್ರಧಾನ ಕಾರ್ಯದರ್ಶಿ ಎಲ್ಲಪ್ಪ, ನಿವೃತ್ತ ಜಿಲ್ಲಾಧಿಕಾರಿ ಎಸ್.ಟಿ.ಅಂಜನಕುಮಾರ್, ತಾಲೂಕು ಅಧ್ಯಕ್ಷ ಬಿ.ಜಿ.ಮಹೇಂದ್ರ, ಗೌರವಾಧ್ಯಕ್ಷ ಪಿ.ನಾಗರಾಜು, ಉಪಾಧ್ಯಕ್ಷ ಸಂಪತ್ ಕುಮಾರ್, ಕಿರಣ್, ಪ್ರಭಾಕರ್, ರವಿ, ರಘು, ಮಹೇಶ್, ರೇವಣ್ಣ, ಯೋಗೇಶ, ರಘುನಂದನ್, ಕೃಷ್ಣಪ್ಪ, ರವಿಕುಮಾರ್, ನಾಗೇಶ್, ಜಯರಾಮ್, ಮಧುಸೂದನ್, ಮಹದೇವಸ್ವಾಮಿ, ಶ್ರೀನಿವಾಸ್ ಇದ್ದರು.

ಜೆಡಿಎಸ್ ಸದಸ್ಯೆ ಅಪಹರಿಸಿ ಉಪಮೇಯರ್ ಮಾಡಲು ಹೊರಟ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲು

ಬಿಜೆಪಿ ಮೇಯರ್ ಅಭ್ಯರ್ಥಿಗೆ ಜೆಡಿಎಸ್ ಬೆಂಬಲ

● ಇದರ ಹೊರತಾಗಿ ಬೇರೇನೂ ಇಲ್ಲ ; ಇದು ಅನಿವಾರ್ಯವಾಗಿ ಸ್ಥಳೀಯವಾಗಿ ನಾವೇ ತೆಗೆದುಕೊಂಡ ನಿರ್ಧಾರ ● ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರ ವಿವರಣೆ



ಮೈಸೂರು,ಸೆ.6(ಪಿಎಂ)– ಜೆಡಿಎಸ್ ಪಾಲಿಕೆ ಸದಸ್ಯೆ ನಿರ್ಮಲ ಹರೀಶ್ ಅವರನ್ನು ಕಾಂಗ್ರೆಸ್‌ನವರು ಅಪಹರಣ ಮಾಡಿ, ಉಪಮೇಯರ್ ಮಾಡಲು ಹೊರಟಿದ್ದರು. ಜೆಡಿಎಸ್ ಇದಕ್ಕೆ ಪ್ರತಿಯಾಗಿ ಮೇಯರ್ ಸ್ಥಾನಕ್ಕೆ ಬಿಜೆಪಿ ಬೆಂಬಲಿಸಬೇಕಾಯಿತು. ಇನ್ನು ಉಪಮೇಯರ್ ಸ್ಥಾನ ಕೈತಪ್ಪಲು ನಮ್ಮ ಅಭ್ಯರ್ಥಿ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸದೇ ಇದ್ದ ಸ್ವಯಂಕೃತ ಎಡವಟ್ಟು ಕಾರಣ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಆವರಣದಲ್ಲಿ ಮೇಯರ್ ಮತ್ತು ಉಪಮೇಯರ್ ಚುನಾವಣೆ ಬಳಿಕ ಅವರು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಜೆಡಿಎಸ್ ವರಿಷ್ಠರೂ ಆದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಸ್ವತಂತ್ರ ಸ್ಪರ್ಧೆಗೆ ತೀರ್ಮಾನಿಸಿ, ಶಾಸಕ ಸಾ.ರಾ.ಮಹೇಶ್ ಅವರಿಗೆ ಜವಾಬ್ದಾರಿ ನೀಡಿದ್ದರು. ಅದರಂತೆ ಇಂದು ಬೆಳಗ್ಗೆ 9ರವರೆಗೂ ಜೆಡಿಎಸ್ ಪಕ್ಷ ಸ್ವತಂತ್ರ ಸ್ಪರ್ಧೆಯ ನಿರ್ಣಯದಲ್ಲೇ ಇತ್ತು. ಬಿಜೆಪಿ ಕೂಡ ಅವರ ಹೈಕಮಾಂಡ್ ನಿರ್ದೇಶನದಂತೆ ಸ್ವತಂತ್ರ ಸ್ಪರ್ಧೆಗೆ ತೀರ್ಮಾನಿಸಿತ್ತು ಎಂದು ಹೇಳಿದರು.

ಕಾಂಗ್ರೆಸ್ ಕೂಡ ಸ್ವತಂತ್ರ ಸ್ಪರ್ಧೆಗೆ ಮುಂದಾಗಿತ್ತು. ಮೂರು ಪಕ್ಷಗಳೂ ಸ್ವತಂತ್ರ ಸ್ಪರ್ಧೆಗೆ ಮುಂದಾಗಿದ್ದವು, ಇದು ನಿಜ. ಆದರೆ ಕಾಂಗ್ರೆಸ್‌ನವರು, ನನ್ನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಾಲಿಕೆ ಸದಸ್ಯೆ ನಿರ್ಮಲ ಹರೀಶ್ ಅವರು ಸೇರಿದಂತೆ ಇನ್ನೊಂದಿಬ್ಬರನ್ನು ಕಿಡ್ನಾಪ್ ಮಾಡಿದ್ದರು. ಹೀಗೆ ಮಾಡಿ ಉಪಮೇಯರ್ ಸ್ಥಾನಕ್ಕೆ ನಿರ್ಮಲ ಹರೀಶ್ ನಾಮಪತ್ರ ಸಲ್ಲಿಸಲು ಕಾಂಗ್ರೆಸ್‌ನವರು ಕಾರಣವಾದರು. ಇದರಿಂದ ಆಕ್ರೋಶಗೊಂಡು ಮೇಯರ್ ಸ್ಥಾನ ಬಿಜೆಪಿಗೆ ಹಾಗೂ ಉಪಮೇಯರ್ ಸ್ಥಾನ ಜೆಡಿಎಸ್‌ಗೆ ಇರಲಿ ಎಂದು ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಒಟ್ಟಾಗಿ ನಾವೇ ಸ್ಥಳೀಯವಾಗಿ ನಿರ್ಧಾರ ಕೈಗೊಂಡೆವು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಮೇಯರ್ ಸ್ಥಾನಕ್ಕೆ ಜೆಡಿಎಸ್ ಕಣಕ್ಕಿಳಿಸಿದ್ದ ಅಭ್ಯರ್ಥಿಯು ಜಾತಿ ಪ್ರಮಾಣಪತ್ರವನ್ನೇ ಹಾಕದ ಹಿನ್ನೆಲೆಯಲ್ಲಿ ಅವರ ನಾಮಪತ್ರ ತಿರಸ್ಕೃತಗೊಂಡು ಎರಡೂ ಸ್ಥಾನವೂ ಅನಿವಾರ್ಯವಾಗಿ ಬಿಜೆಪಿಗೆ ಲಭಿಸಿತು. ಇದರ ಹೊರತಾಗಿ ಯಾವುದೇ ಟಿಂಗಳು ಇಲ್ಲ. ಹೆಚ್.ಡಿ.ಕುಮಾರಸ್ವಾಮಿಯವರು ಜೆಡಿಎಸ್ ನೇರ ಸ್ಪರ್ಧೆ ತೀರ್ಮಾನ ಮಾಡಿದ್ದ ಹಿನ್ನೆಲೆಯಲ್ಲಿ ಶಾಸಕ ಸಾ.ರಾ.ಮಹೇಶ್, ಎಂಎಲ್‌ಸಿ ಮಂಜೇಗೌಡ ಅವರು ಮೇಯರ್ ಅಭ್ಯರ್ಥಿಯಾಗಿ ಕೆ.ವಿ.ಶ್ರೀಧರ್ ಹಾಗೂ ಉಪಮೇಯರ್ ಅಭ್ಯರ್ಥಿಯಾಗಿ ರೇಷ್ಮಾಬಾನು ಅವರನ್ನು ಆಯ್ಕೆ ಮಾಡಿ ಕಣಕ್ಕಿಳಿಸಿದ್ದರು. ನಿರ್ಮಲ ಹರೀಶ್ ಅವರನ್ನು ಕರೆತಂದು ಉಪಮೇಯರ್‌ಗೆ ನಾಮಪತ್ರ ಸಲ್ಲಿಸುವಂತೆ ಮಾಡಿದಾಗ, ಜೆಡಿಎಸ್, ಬಿಜೆಪಿ ಎರಡೂ ಕಡೆಯವರೂ ನಮ್ಮ ಹೈಕಮಾಂಡ್ ಕೂಡ ಸಂಪರ್ಕಿಸದೇ ನಾವೇ ನಮ್ಮ ತೀರ್ಮಾನದಂತೆ ಮುಂದುವರೆದಿದ್ದೇವೆ ಎಂದು ಹೇಳಿದರು.

ಜೆಡಿಎಸ್‌ನಲ್ಲಿ ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗಿದೆ ಎಂಬ ಆರೋಪದ ಸಂಬಂಧ ಪ್ರತಿಕ್ರಿಯಿಸಿ, ಜೆಡಿಎಸ್‌ನವರೇ ಅಲ್ಪಸಂಖ್ಯಾತ ಮಹಿಳೆಯನ್ನು ಉಪಮೇಯರ್ ಸ್ಥಾನದ ಅಭ್ಯರ್ಥಿ ಮಾಡಿದ್ದಲ್ಲವೇ? ಎಂದು ಪ್ರಶ್ನಿಸಿದರಲ್ಲದೆ, ಅವರು ಸಾಮಾನ್ಯ ಕ್ಷೇತ್ರದಿಂದ ಗೆದ್ದವರು. ಜಾತಿ ಪ್ರಮಾಣಪತ್ರ ಸಲ್ಲಿಸದ ಕಾರಣ ನಾಮಪತ್ರ ತಿರಸ್ಕೃತಗೊಂಡಿತು. ಇದು ನಮ್ಮ ಉಪಮೇಯರ್ ಅಭ್ಯರ್ಥಿ ಮಾಡಿಕೊಂಡ ಸ್ವಯಂಕೃತ ಎಡವಟ್ಟು ಎಂದು ತಿಳಿಸಿದರು.

ಏಷ್ಯಾ ಕಪ್: ಲಂಕಾ ವಿರುದ್ಧ ಭಾರತಕ್ಕೆ ಸೋಲು



ದುಬೈ, ಸೆ.6– ದಿಲ್ಶಾನ್ ಮಧುಶಂಕ ಅವರ ಮಾರಕ ಬೌಲಿಂಗ್ ಹಾಗೂ ಕುಶಲ್ ಮೆಂಡಿಸ್, ಪಾತುಂ ನಿಸ್ಸಾಂಕ ಅವರ ಅರ್ಧಶತಕಗಳ ನೆರವಿನಿಂದ ಭಾರತದ ವಿರುದ್ಧ ಶ್ರೀಲಂಕಾ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಅಂತಾರಾಷ್ಟ್ರೀಯ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಿತು. ತಂಡದ ಪರ ನಾಯಕನಿಗೆ ತಕ್ಕ ಆಟವಾಡಿದ ರೋಹಿತ್ ಶರ್ಮಾ 72, ಸೂರ್ಯಕುಮಾರ್ ಯಾದವ್ 34, ಪಾಂಡ್ಯ ಹಾಗೂ ಪಂತ್ ತಲಾ 17ರನ್ ಗಳಿಸಿದರು. ಲಂಕಾ ಪರ ದಿಲ್ಶಾನ್ ಮಧುಶಂಕ 3, ಕರುಣರತ್ನೆ, ದಾಸುನ್ ಶನಕ ತಲಾ 2, ಮಹೀಷ ತೀಕ್ಷಣ 1 ವಿಕೆಟ್ ಪಡೆದರು.

174ರನ್ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ತಂಡದ ಪರ ಕುಶಲ್ ಮೆಂಡಿಸ್ 57, ಪಾತುಂ ನಿಸ್ಸಾಂಕ 52, ಬಾನುಕಾ ರಾಜಪಕ್ಸೆ 25, ದಾಸುನ್ ಶನಕ 33 ರನ್ ಗಳಿಸಿದರು. ಭಾರತದ ಪರ ಯಜುವೇಂದ್ರ ಚಹಲ್ 3, ರವಿಚಂದ್ರನ್ ಅಶ್ವಿನ್ 1 ವಿಕೆಟ್ ಪಡೆದರು. ದಾಸುನ್ ಶನಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕಾರಿನಲ್ಲಿ ಪ್ರಯಾಣಿಸುವ ಎಲ್ಲರಿಗೂ ಸೀಟ್ ಬೆಲ್ಟ್ ಕಡ್ಡಾಯ

ನವದೆಹಲಿ: ಕಾರಿನಲ್ಲಿ ಪ್ರಯಾಣಿಸುವ ಎಲ್ಲರೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ ಎಂದು ಮಂಗಳವಾರ ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಹೇಳಿದ್ದಾರೆ.



ಮುಂಭಾಗದ ಸೀಟ್‌ಗಳ ಜೊತೆಗೆ ಹಿಂಭಾಗದ ಸೀಟುಗಳಲ್ಲಿ ಕುಳಿತಿರುವವರು ಸೀಟ್ ಬೆಲ್ಟ್ ಹಾಕದಿದ್ದರೆ ಸುರಕ್ಷತಾ ಬೀಪ್ ಬರುತ್ತದೆ ಎಂಬುದನ್ನು ವೀಡಿಯೋದಲ್ಲಿ ಹೈಲೈಟ್ ಮಾಡಿ ಗಡ್ಕರಿ ಎಚ್ಚರಿಸಿದ್ದಾರೆ.

ಖ್ಯಾತ ಕೈಗಾರಿಕೋದ್ಯಮಿ ಮತ್ತು ಟಾಟಾ ಸನ್ಸ್ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅವರು ಭಾನುವಾರ ಸಂಜೆ ಮುಂಬೈ ಬಳಿ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದರು. ಆ ಕಾರಿನ ಹಿಂಭಾಗದಲ್ಲಿ ಕುಳಿತಿದ್ದ ಸೈರಸ್ ಮಿಸ್ತ್ರಿ ಅವರು ಸೀಟ್ ಬೆಲ್ಟ್ ಧರಿಸಿರಲಿಲ್ಲ ಎಂಬ ವರದಿಗಳ ಹಿನ್ನೆಲೆಯಲ್ಲಿ ಕೇಂದ್ರ ಸಚಿವರು ಈ ಟ್ವೀಟ್ ಮಾಡಿದ್ದಾರೆ.

ಕಾರುಗಳ ಮುಖಾಮುಖಿ ಡಿಕ್ಕಿ

ಮೈಸೂರು, ಸೆ.6– ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹೈವೇ ವೃತ್ತದ ಬಳಿ ಎರಡು ಕಾರುಗಳ ನಡುವೆ ಮುಖಾ–ಮುಖಿ ಡಿಕ್ಕಿ ಸಂಭವಿಸಿ ಎರಡು ಕಾರುಗಳು ಜಖಂಗೊಂಡಿವೆ. ಮಂಗಳವಾರ ರಾತ್ರಿ ಈ ಅಪಘಾತ ಸಂಭವಿಸಿದೆ.

ಆಯುರ್ವೇದಿಕ್ ಆಸ್ಪತ್ರೆ ವೃತ್ತದ ಕಡೆಯಿಂದ ಬರುತ್ತಿದ್ದ ಟೊಯೋಟಾ ಎಟಿಯೋಸ್ ಹಾಗೂ ಹೈವೇ ವೃತ್ತದ ಕಡೆಯಿಂದ ಹೋಗುತ್ತಿದ್ದ ಟಾಟಾ ಇಂಡಿಕಾ ನಡುವೆ ಡಿಕ್ಕಿ ಸಂಭವಿಸಿದೆ. ಅಪಘಾತವಾದ ಕೂಡಲೇ ರಸ್ತೆಯಲ್ಲಿ ಜನರ ಗುಂಪು ಸೇರಿದ್ದರಿಂದ ಕೆಲಕಾಲ ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಯಿತು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ನರಸಿಂಹ ಚಾರ್ ರವರ ಮಗ ಶ್ರೀ. ಎನ್. ಕೃಷ್ಣ ಅಯ್ಯಂಗಾರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ರಾಜಶ್ರೀ ಕೆ., ಉರುಫ್ ರಾಜಶ್ರೀ ಕೃಷ್ಣ ಐಯ್ಯಂಗಾರ್ ರವರು ಒಟ್ಟಾಗಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಾಣಿ ವಿಲಾಸ ಮೊಹಲ್ಲಾ, 6ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಮನೆ ಸಂಖ್ಯೆ 2758, ಹೊಸ ಸಂಖ್ಯೆ ಡಿ–28, [ಸಿಐಟಿಬಿ ನಿವೇಶನ ಸಂಖ್ಯೆ 100], ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ:79 ಅಡಿಗಳು, ಉತ್ತರ–ದಕ್ಷಿಣ: 96 ಅಡಿಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ 2751, ಹೊಸ ಸಂಖ್ಯೆ ಡಿ29 – ರೂಪ ಎಲ್ಬೆಟ್, ಪಶ್ಚಿಮಕ್ಕೆ: ಶ್ರೀ ಟಿ. ಚಂದ್ರಮೌಳಿ ರವರ ಸ್ವತ್ತು, ಉತ್ತರಕ್ಕೆ: ಗಲ್ಲಿ ಮತ್ತು ದಕ್ಷಿಣಕ್ಕೆ: 6ನೇ ಮುಖ್ಯ ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್.
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 98446 40641
Email: sldlawfirm2021@gmail.com

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಹಂಚಿಕೆ–10/ಇಲವಾಲ/2022–23 ದಿನಾಂಕ: 06.09.2022

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಕಾವಲ್, ಯಲಚನಹಳ್ಳಿ ಹಾಗೂ ಗುಂಗ್ರಾಲ್ ಛತ್ರ ಗ್ರಾಮಗಳ ಹಲವು ಸರ್ವೆ ನಂಬರ್ ಜಮೀನುಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ಅಭಿವೃದ್ಧಿಪಡಿಸಿರುವ ಬಡಾವಣೆಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಈ ಹಿಂದೆ ದಿನಾಂಕ: 28–09–2015 ರಿಂದ 01–10–2015 ರವರೆಗೆ ಲಾಟರಿ ಮೂಲಕ ಹಂಚಿಕೆ ಮಾಡಲಾಗಿತ್ತು. ನಂತರ ನಿವೇಶನ ಹಂಚಿಕೆಯಾಗದ ಅರ್ಜಿದಾರರಲ್ಲಿ ಆರಂಭಿಕ ಠೇವಣಿ ಮರುಪಾವತಿ ಪಡೆಯದೇ ಇರುವ ಅರ್ಜಿದಾರರಿಗೆ ಮತ್ತೊಮ್ಮೆ ಅವಕಾಶ ನೀಡಿ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸಲು ದಿನಾಂಕ: 28–01–2022 ರಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಅದರಂತೆ ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿಸಿರುವ ಅರ್ಜಿದಾರರಿಗೆ ದಿನಾಂಕ: 08–07–2022 ರಂದು ಇ–ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಇ–ಲಾಟರಿ ಪ್ರಕ್ರಿಯೆಯಲ್ಲಿ ಹಂಚಿಕೆಯಾಗದ EWS, LIG ಮತ್ತು HIG-II ವರ್ಗದ ಅರ್ಜಿದಾರರುಗಳಿಗೆ ಪ್ರಸ್ತುತ ಸದರಿ ಬಡಾವಣೆಯಲ್ಲಿ MIG ಮತ್ತು HIG-I ವರ್ಗದಲ್ಲಿ ಲಭ್ಯವಿರುವ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.

ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿ ಮಾಡಲು ಕೊನೆಯ ದಿನಾಂಕ: 27–09–2022 ಆಗಿರುತ್ತದೆ.

ಅರ್ಜಿದಾರರು ಪಾವತಿಸಬೇಕಾಗಿರುವ ವ್ಯತ್ಯಾಸದ ಆರಂಭಿಕ ಠೇವಣಿ ಮೊತ್ತದ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಸ್ವತ್ತಿನ ವರ್ಗ	ಲಭ್ಯವಿರುವ ನಿವೇಶನಗಳ ವರ್ಗ	ಲಭ್ಯವಿರುವ ಅಂದಾಜು ಸ್ವತ್ತುಗಳ ಸಂಖ್ಯೆ	ಈಗಾಗಲೇ ಪಾವತಿಸಿರುವ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ	ಪಾವತಿಸಬೇಕಾದ ವ್ಯತ್ಯಾಸದ ಆರಂಭಿಕ ಠೇವಣಿ
1	EWS	MIG	362	ರೂ.10,300/–	ರೂ.40,000/–
2	LIG			ರೂ.50,550/–	–
3	LIG	HIG-I	114	ರೂ.50,550/–	–
4	HIG-II			ರೂ.1,01,550/–	–

ಷರತ್ತುಗಳು:– (1) EWS ವರ್ಗದ ಅರ್ಜಿದಾರರು ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸಿ ಎಂ.ಐ.ಜಿ. ವರ್ಗದ ನಿವೇಶನವನ್ನು ಪಡೆಯಲು ಅರ್ಹರಿರುತ್ತಾರೆ.

2) ಎಲ್.ಐ.ಜಿ. ವರ್ಗದ ಅರ್ಜಿದಾರರು ಎಮ್.ಐ.ಜಿ ವರ್ಗದ ನಿವೇಶನವನ್ನು ಪಡೆಯಬೇಕಾದಲ್ಲಿ ಯಾವುದೇ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವಂತಿಲ್ಲ. ಆದರೆ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯಂತೆ ತಾವು ನಿವೇಶನ ಬೇಕಾದಲ್ಲಿ ಅಥವಾ ಬೇಡವಾದಲ್ಲಿ ನಿಗಧಿತ ವರ್ಗದ ಆವರಣದಲ್ಲಿ ಗುರುತು ಮಾಡುವುದು.

3) ಎಲ್.ಐ.ಜಿ. ಮತ್ತು ಹೆಚ್.ಐ.ಜಿ–2 ವರ್ಗದ ಅರ್ಜಿದಾರರು ಹೆಚ್.ಐ.ಜಿ–1 ವರ್ಗದ ನಿವೇಶನವನ್ನು ಪಡೆಯಬೇಕಾದಲ್ಲಿ ಯಾವುದೇ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವಂತಿಲ್ಲ. ಆದರೆ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯಂತೆ ತಾವು ಯಾವ ವರ್ಗದ ನಿವೇಶನ ಬೇಕಾದಲ್ಲಿ ಅಥವಾ ಬೇಡವಾದಲ್ಲಿ ನಿಗಧಿತ ವರ್ಗದ ಆವರಣದಲ್ಲಿ ಗುರುತು ಮಾಡುವುದು.

4) ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನೋಂದಣಿ ಸಂಖ್ಯೆಯ ಅರ್ಜಿದಾರರು ಮಾತ್ರ ನಿವೇಶನ ಹಂಚಿಕೆಗೆ ಅರ್ಹರಾಗಿರುತ್ತಾರೆ. ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿ ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ಕರ್ನಾಟಕ ಗೃಹ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/2099/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ